ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಪದ್ಧತಿ
ಒಂದು ಚಾರಿತ್ರಿಕ ಅಧ್ಯಯನ.

(ಇತಿಹಾಸ ಎಂ.ಫಿಲ್. ಪದವಿಗಾಗಿ

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರ ಪಡಿಸುತ್ತಿರುವ ನಿಬಂಧ)

ಸಂಶೋಧಕರು.

ಆನಂದ್‌ಕುಮಾರ್ ಡಿ.ಎನ್.

ಮಾರ್ಗದರ್ಶಕರು

ಡಾ॥. ಎಸ್.ಆಂಜನೇಯ ಎಂ.ಎ., ಪಿ.ಹೆಚ್.ಡಿ.

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,

ಇತಿಹಾಸ ವಿಭಾಗ

ಮೈಸೂರು ವಿಶ್ವ ವಿದ್ಯಾನಿಲಯ ಸಂಜೆ ಕಾಲೇಜು.

ಮೈಸೂರು.-05

ಕರ್ನಾಟಕ ಸಂಘ (ರಿ), ಮಂಡ್ಯ.

ಪಿ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2007-2008

ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಪದ್ಧತಿ
ಒಂದು ಚಾರಿತ್ರಿಕ ಅಧ್ಯಯನ.

(ಇತಿಹಾಸ ಎಂ.ಫಿಲ್. ಪದವಿಗಾಗಿ

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರ ಪಡಿಸುತ್ತಿರುವ ನಿಬಂಧ)

ಸಂಶೋಧಕರು.

ಆನಂದ್‌ಕುಮಾರ್ ಡಿ.ಎನ್.

ಮಾರ್ಗದರ್ಶಕರು

ಡಾ॥. ಎಸ್.ಆಂಜನೇಯ ಎಂ.ಎ., ಪಿ.ಹೆಚ್.ಡಿ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,

ಇತಿಹಾಸ ವಿಭಾಗ

ಮೈಸೂರು ವಿಶ್ವ ವಿದ್ಯಾನಿಲಯ ಸಂಜೆ ಕಾಲೇಜು,

ಮೈಸೂರು.-05

ಕರ್ನಾಟಕ ಸಂಘ (ರಿ), ಮಂಡ್ಯ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2007–2008

ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೭-೦೮ ನೇ ಸಾಲಿಗೆ ಇತಿಹಾಸ ಎಂ.ಫಿಲ್. ಪದವಿಗಾಗಿ **"ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಪದ್ಧತಿ–ಒಂದು ಚಾರಿತ್ರಿಕ ಅಧ್ಯಯನ"** ಎಂಬ ಶೀರ್ಷಿಕೆಯ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ. ಈ ನಿಬಂಧವಾಗಲಿ, ಅಧ್ಯಾಯವಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಲ್ಪಟ್ಟಿಲ್ಲ. ಈ ಸಂಶೋಧನಾ ನಿಬಂಧವನ್ನು ಇತಿಹಾಸ ಎಂ.ಫಿಲ್. ಪದವಿಗೆ ಸಂಬಂಧಿಸಿದಂತೆ ಮೌಲ್ಯ ಸ್ವೀಕಾರಕ್ಕಾಗಿ ಒಪ್ಪಿಸುತ್ತಿರುವುದಕ್ಕೆ ನನ್ನ ಒಪ್ಪಿಗೆ ಇದೆ.

ಸ್ಥಳ : ಮೈಸೂರು.

ದಿನಾಂಕ : 10/9/08.

ಮಾರ್ಗದರ್ಶಕರ ಸಹಿ

(ಡಾ॥. ಎಸ್.ಆಂಜನೇಯ ಎಂ.ಎ., ಪಿ.ಹೆಚ್.ಡಿ)
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಇತಿಹಾಸ ವಿಭಾಗ
ಮೈಸೂರು ವಿಶ್ವ ವಿದ್ಯಾನಿಲಯ ಸಂಜೆ ಕಾಲೇಜು,
ಮೈಸೂರು.–05

ಅಭ್ಯರ್ಥಿಯ ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೭-೦೮ ನೇ ಸಾಲಿಗೆ ಇತಿಹಾಸ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಪದ್ಧತಿ–ಒಂದು ಚಾರಿತ್ರಿಕ ಅಧ್ಯಯನ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ॥. ಎಸ್. ಆಂಜನೇಯ ಪ್ರಾಧ್ಯಾಪಕರು, ಮೈಸೂರು ವಿಶ್ವ ವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು. ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯವನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಕನ್ನಡ ವಿಶ್ವ ವಿದ್ಯಾನಿಲಯವು ನೀಡುವ ಎಂ.ಫಿಲ್. ಪದವಿಗಾಗಿ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸ್ಥಳ : ಮಂಡ್ಯ

ದಿನಾಂಕ : 10/9/08

ಸಂಶೋಧನಾ ವಿದ್ಯಾರ್ಥಿ

ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಪದ್ಧತಿ

ಒಂದು ಚಾರಿತ್ರಿಕ ಅಧ್ಯಯನ

ಪರಿವಿಡಿ

ಅಧ್ಯಾಯ -1 . ಪೀಠಿಕೆ

1.1 ಅಧ್ಯಯನದ ಸ್ವರೂಪ

1.2 ಅಧ್ಯಯನದ ಮಹತ್ವ

1.3 ಅಧ್ಯಯನಗಳ ಉದ್ದೇಶ

1.4 ಅಧ್ಯಯನಕ್ಕೆ ಅಳವಡಿಸಿದ ಸಂಶೋಧನಾ ವಿಧಾನ

1.5. ಅಧ್ಯಯನಕ್ಕೆ ಸಂಬಂಧಿಸಿದಂತೆ ಇದುವರೆಗಿನ ಗ್ರಂಥಗಳ ಸಮೀಕ್ಷೆ

1.6 ಆಧಾರಗಳು

1.7 ಅಧ್ಯಾಯಗಳ ವಿಭಾಗೀಕರಣ

ಅಧ್ಯಾಯ - 2. ಮಂಡ್ಯ ಜಿಲ್ಲೆಯ ಹಿನ್ನಲೆ

2.1 ಮಂಡ್ಯ ಜಿಲ್ಲೆಯ ಭೌಗೋಳಿಕ ಹಿನ್ನಲೆ

2.2 ಮಂಡ್ಯ ಜಿಲ್ಲೆಯ ಚಾರಿತ್ರಿಕ ಹಿನ್ನಲೆ

ಅಧ್ಯಾಯ -3 . ಪಾರಂಪರಿಕ ಕೆರೆ ನೀರಾವರಿ ವ್ಯವಸ್ಥೆ (ಶಾಸನಗಳಆಧಾರ) 18ನೇಶತಮಾನದವರೆಗೆ

3.1 ಕೆರೆಯ ನಿರ್ಮಾಣದ ಶಾಸನಗಳು

3.2 ಕೆರೆಯ ನಿರ್ವಹಣೆ ದುರಸ್ಥಿಗೆ ಸಂಬಂಧಿಸಿದಂತಹ ಶಾಸನಗಳು

3.3 ಕೆರೆಯ ಕೆಳಗಿನ ಭೂಮಿಯ ದಾನ ದತ್ತಿಕೊಟ್ಟ ಶಾಸನಗಳು

ಅಧ್ಯಾಯ -4 . 1800 ರಿಂದ 1955 ರವರೆಗೆ ಮತ್ತು ಪ್ರಸ್ತುತ ಕೆರೆ ನೀರಾವರಿ ವ್ಯವಸ್ಥೆ

4.1 ಬುಕಾನನ್ ಕಂಡಂತೆ ಕೆರೆ ನೀರಾವರಿ

4.2 ಕಮಿಷನ್ನರ್‌ಗಳ ಕಾಲದಲ್ಲಿ ಕೆರೆ ನೀರಾವರಿ

4.3 ದಿವಾನರ ಕಾಲದಲ್ಲಿ ಕೆರೆ ನೀರಾವರಿ

4.4 ಪ್ರಸ್ತುತ ಕೆರೆ ನೀರಾವರಿ ಚೌಕಟ್ಟು

ಅಧ್ಯಾಯ - 5 . ಉಪ ಸಂಹಾರ

ಆಧಾರ ಗ್ರಂಥಗಳು

ಅನುಬಂಧಗಳು

ಚಿತ್ರಗಳು

ಅಂತರ್‌ಜಾಲದ ನಕ್ಷೆಗಳು

ಅಧ್ಯಾಯ -1

ಪೀಠಿಕೆ

1.1 ಅಧ್ಯಯನದ ಸ್ವರೂಪ

1.2 ಅಧ್ಯಯನದ ಮಹತ್ವ

1.3 ಅಧ್ಯಯನಗಳ ಉದ್ದೇಶ

1.4 ಅಧ್ಯಯನಕ್ಕೆ ಅಳವಡಿಸಿದ ಸಂಶೋಧನಾ ವಿಧಾನ

1.5. ಅಧ್ಯಯನಕ್ಕೆ ಸಂಬಂಧಿಸಿದಂತೆ ಇದುವರೆಗಿನ ಗ್ರಂಥಗಳ ಸಮೀಕ್ಷೆ

1.6 ಆಧಾರಗಳು

1.7 ಅಧ್ಯಾಯಗಳ ವಿಭಾಗೀಕರಣ

ಅಧ್ಯಾಯ-1

ಪೀಠಿಕೆ :-

ನದಿಗಳು, ಬಾವಿ, ಕೆರೆ, ಕುಂಟೆ, ಕಟ್ಟೆಗಳು ಮಾನವನ ಅಗತ್ಯಗಳಿಗೆ ನೀರನ್ನು ಒದಗಿಸುವ ಪ್ರಾಥಮಿಕ ಮೂಲಗಳಾಗಿವೆ. ಆದರೂ ಇವು ಭೂಮಿಯಲ್ಲಿ ದೊರಕುವ ನೀರಿನ ಶೇಕಡಾ ಒಂದಕ್ಕಿಂತ ಕಡಿಮೆಯಷ್ಟು ಪ್ರಮಾಣದವು. ಇಂಥ ಅಲ್ಪ ಸಂಪನ್ಮೂಲ ನಿರ್ವಹಣೆಯ ಸಮಸ್ಯೆ ಕಷ್ಟವೇ. ಮಳೆಯ ಅನಿಶ್ಚಿತತೆಯಿಂದ ಈ ಕಷ್ಟ ಮತ್ತಷ್ಟು ಹೆಚ್ಚುತ್ತದೆ. ಎಷ್ಟೋ ಸಲ ನಮಗೆ ಅಗತ್ಯವಿಲ್ಲದಿದ್ದಾಗ ನೀರು ದೊರಕುತ್ತದೆ. ಅಗತ್ಯ ಇದ್ದಾಗ ಅಭಾವ ಉಂಟಾಗುತ್ತದೆ. ನೆರೆ ಮತ್ತು ಬರ ಎಂದಿನಿಂದಲೂ ಇರುವ ಸಮಸ್ಯೆಗಳಾಗಿದ್ದು, ಇತ್ತೀಚಿನ ದಿನಗಳಲ್ಲಿ ಅರಣ್ಯ ನಾಶ ಮತ್ತು ಪರಿಸರ ಮಾಲಿನ್ಯ ಅವು ಇನ್ನೂ ತೀವ್ರವಾಗಿವೆ. ಈ ಸಮಸ್ಯೆಯ ತೀವ್ರತೆಯನ್ನು ಕಡಿಮೆ ಮಾಡಲು ಇರುವ ಒಂದು ಮಾರ್ಗವೆಂದರೆ ನೀರನ್ನೇ ಜಲಾಶಯಗಳಲ್ಲಿ ಸಂಗ್ರಹಿಸುವುದು. ಅಂಥ ಸಂಗ್ರಹಣೆಯು ಭಾವಿಯ ಹಾಗೆ ನೆಲದೊಳಗೆ ಇರಬಹುದು ಅಥವಾ ಕೊಳ, ಕೆರೆ ಭೂಮಿಯ ಮೇಲೆ ಇರಬಹುದು. ಪ್ರಸ್ತುತ ಅಧ್ಯಯನದಲ್ಲಿ ಮಂಡ್ಯ ಜಿಲ್ಲೆಯ ಪಾರಂಪರಿಕ ಕೆರೆ ನೀರಾವರಿ ಮತ್ತು ಪ್ರಸ್ತುತ ಕೆರೆ ನೀರಾವರಿ ಚೌಕಟ್ಟನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

1.1 **ಅಧ್ಯಯನದ ಸ್ವರೂಪ**: ಮಂಡ್ಯ ಜಿಲ್ಲೆಯ ಕ್ರಿ.ಶ. 1939 ರ ವರೆಗೆ ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿತ್ತು. 1939ರ ನಂತರ ಮಂಡ್ಯ ಜಿಲ್ಲೆಯಾಗಿ ರೂಪ ಹೊಂದಿತು. ಮಂಡ್ಯದಲ್ಲಿ ನೀರಾವರಿಗಾಗಿ ಬಹಳ ಹಿಂದಿನಿಂದಲೂ ಕೆರೆಗಳನ್ನೇ ಅವಲಂಬಿಸಿತ್ತು. ಮಂಡ್ಯ ಜಿಲ್ಲೆ ಮಳೆ ಆಧಾರಿತ ಕೃಷಿ ಪದ್ಧತಿಯನ್ನು ಹೊಂದಿತ್ತು. ಅಂದರೆ ಮಳೆಯ ಮೂಲಕ ಬೆಳೆ ತೆಗೆಯುವ ಪದ್ಧತಿ. ಮಳೆಯ ನೀರನ್ನು ಸಂಗ್ರಹಿಸಲು ಆಗ ಕೆರೆಗಳನ್ನು ನಿರ್ಮಾಣ ಮಾಡಿಕೊಂಡು ಜಲವನ್ನು ಕೆರೆಗಳಲ್ಲಿ ಸಂಗ್ರಹಿಸಿಕೊಳ್ಳುತ್ತಿದ್ದರು. ಇಂತಹ ಕೆರೆಗಳನ್ನು ಜಿಲ್ಲೆಯಲ್ಲಿ ಸಾಕಷ್ಟು ಕಾಣಬಹುದು. ಕೃಷ್ಣರಾಜ ಸಾಗರ ಜಲಾಶಯ ನಿರ್ಮಾಣವಾಗುವವರೆಗೂ ಜಿಲ್ಲೆಯ ಕೃಷಿಯು ಕೆರೆ ನೀರಾವರಿಯನ್ನೇ ಪ್ರಮುಖವಾಗಿ ಅವಲಂಬಿಸಿದ್ದು, ಆನಂತರ ಕೆ.ಆರ್.ಎಸ್. ನಿರ್ಮಾಣವಾದ ಮೇಲೆ ಮುಖ್ಯವಾಗಿ ಶ್ರೀರಂಗಪಟ್ಟಣ, ಪಾಂಡವಪುರ, ಮದ್ದೂರು, ಮಂಡ್ಯ, ಮಳವಳ್ಳಿ ಪ್ರದೇಶಗಳು ಅಚ್ಚುಕಟ್ಟು ನೀರಾವರಿ ಪ್ರದೇಶಗಳಾಗಿ ಪರಿವರ್ತನೆಗೊಂಡವು.

ಆದರೆ ನಾಗಮಂಗಲ ಮತ್ತು ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ಮಳೆ ಆಧಾರಿತ ಬೆಳೆ ಪದ್ಧತಿ ಮುಂದುವರಿಯಿತು. ಕೆ.ಆರ್. ಪೇಟೆ, ನಾಗಮಂಗಲದ ಕೆಲವು ಭಾಗಗಳು ಹೇಮಾವತಿ ನೀರಾವರಿ ಯೋಜನೆಯಿಂದಾಗಿ ನಂತರ ನೀರಾವರಿ ಭೂಮಿಗಳಾಗಿ ಮಾರ್ಪಾಟ್ಟವು.

ಕೆರೆಗಳು ಮಂಡ್ಯದ ಪ್ರಮುಖ ಜಲಸಂಗ್ರಹಗಳಾಗಿವೆ. ಇಲ್ಲಿ ಕೆರೆಗಳನ್ನು 2 ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು.

1) ಮಳೆ ಆಧಾರಿತ ಕೆರೆಗಳು

2) ಜಲಾಶಯಗಳ ಮೂಲಕ ನೀರನ್ನು ಸಂಗ್ರಹಿಸುವ ಕೆರೆಗಳು

ಮಳೆ ಆಧಾರಿತ ಕೆರೆಗಳೆಂದರೆ, ಮಳೆಗಾಲದಲ್ಲಿ ಕೆರೆಗಳಲ್ಲಿ ನೀರು ಸಂಗ್ರಹಿಸಿಕೊಂಡು, ಆನಂತರದ ಆ ನೀರನ್ನು ಕೃಷಿ ಮತ್ತು ಕುಡಿಯುವ ನೀರಿಗಾಗಿ ಉಪಯೋಗಿಸುವುದು.

ಎರಡನೇ ಮೂಲದ ಕೆರೆಗಳೆಂದರೆ ನದಿಗಳಿಗೆ ಅಣೆಕಟ್ಟನ್ನು ನಿರ್ಮಿಸಿ, ನೀರು ಸಂಗ್ರಹಿಸಿಕೊಂಡು ಆನಂತರ ಕಾಲುವೆಗಳ ಮೂಲಕ ಹೊಲಗದ್ದೆಗಳಿಗೆ ನೀರು ಒದಗಿಸುವ ಆಧುನಿಕ ನೀರಾವರಿ ಪದ್ಧತಿಗಳಾಗಿವೆ.

ಕೆರೆಗಳು ಜಿಲ್ಲೆಯ ಕೃಷಿಯ ಜೀವನಾಡಿಗಳಾಗಿವೆ. ಕೆರೆಗಳು ನೀರಾವರಿ ಸಂಪನ್ಮೂಲಗಳಾಗಿವೆ. ಇಲ್ಲಿಯ ಕೆರೆಗಳು ಇತರೆ ಜಿಲ್ಲೆಯ ಕೆರೆಗಳಿಗಿಂತ ವಿಭಿನ್ನ ಸ್ವರೂಪ ಉಳ್ಳದಾಗಿವೆ. ಮಂಡ್ಯದ ಕೆ.ಆರ್.ಪೇಟೆ ಮತ್ತು ನಾಗಮಂಗಲ ಹಾಗೂ ಮಳವಳ್ಳಿಯಂತಹ ಬಯಲು ಸೀಮೆಯಲ್ಲಿ ಅತಿ ಹೆಚ್ಚು ಕೆರೆಗಳು ಇವೆ. ಆದರೆ ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣದಲ್ಲಿ ಕಡಿಮೆ ಕೆರೆಗಳಿವೆ.

ಇಲ್ಲಿಯ ಕೆರೆಗಳ ಸ್ವರೂಪ ಸುತ್ತಲೂ ಏರಿಯನ್ನು ನಿರ್ಮಿಸಿ ಕೆರೆಗಳನ್ನು ಕಟ್ಟಿದ್ದಾರೆ ಹಾಗೂ ಎರಡು ದಿಬ್ಬಗಳ ನಡುವೆ ಮಣ್ಣನ್ನು ಹಾಕಿ ಕೆರೆ ನಿರ್ಮಿಸಿದ್ದಾರೆ. ಇಲ್ಲಿ ಚಿಕ್ಕ ಕೆರೆಗಳು ಮತ್ತು ದೊಡ್ಡ ಕೆರೆಗಳಿವೆ.

1.2 ಅಧ್ಯಯನದ ಮಹತ್ವ : ಮಂಡ್ಯ ಜಿಲ್ಲೆಯ ಕೆರೆಗಳ ಅಧ್ಯಯನ ಮಾಡುವಲ್ಲಿ ನೆರವಾದ ಅಂಶಗಳಲ್ಲಿ ಮುಖ್ಯವಾದುದು ಜಿಲ್ಲೆಯ ಶಾಸನಗಳು. ಶಾಸನಗಳನ್ನು

ಮೂಲಾಧಾರವಾಗಿ ತೆಗೆದುಕೊಂಡು ಜಿಲ್ಲೆಯ ಕೆರೆಗಳ ಅಧ್ಯಯನ ಮಾಡಲಾಗಿದೆ. ಕೆರೆಗಳ ಸ್ಥಿತಿ, ನೀರಿನ ಹಂಚಿಕೆ ವಿಧಾನ, ಕೆರೆಗೆ ಬರುವ ನೀರಿನ ಮೂಲ, ಕೆರೆ ವ್ಯಾಪ್ತಿಯ ನೀರಾವರಿ ಪ್ರದೇಶ ಇದಕ್ಕೆ ಸಂಬಂಧಿಸಿದ ಇತ್ಯಾದಿ ವಿವರಗಳನ್ನು ನೀರಾವರಿ ಇಲಾಖೆಯಿಂದ ಪಡೆಯಲಾಗಿದೆ. ಅಲ್ಲದೆ ಇಲ್ಲಿಯ ಕೆರೆಗಳು ಐತಿಹಾಸಿಕ ಮಹತ್ವವುಳ್ಳ ಕೆರೆಗಳಾಗಿವೆ. ಕೆರೆಗಳ ಅಧ್ಯಯನ ತನ್ನ ಮಹತ್ವವನ್ನು ಹೆಚ್ಚಿಸಿಕೊಂಡಿದೆ ಎನ್ನಬಹುದು. ಕೆರೆಗಳ ಇನ್ನೊಂದು ಮಹತ್ವ ಎಂದರೆ ಕೆರೆಗಳಿಂದ ಅಂತರ್ಜಲ ವೃದ್ಧಿಸುತ್ತದೆ. ಕೆರೆಗಳಲ್ಲಿ ನೀರು ಸಮರ್ಪಕವಾಗಿ ಸಂಗ್ರಹವಾಗಿದ್ದರೆ ಕೊಳವೆ ಬಾವಿಗಳಲ್ಲಿ ನೀರು ವೃದ್ಧಿಯಾಗುತ್ತದೆ.

ಹೀಗೆ ಸಾವಿರಾರು ವರ್ಷಗಳಿಂದ ನಮ್ಮ ಪೂರ್ವಜರು ಉಳಿಸಿಕೊಂಡು ಬಂದಿರುವ ಕೆರೆಗಳನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮದಾಗಿದೆ. ಇಲ್ಲಿಯ ಕೆರೆಗಳನ್ನು ಸಂರಕ್ಷಿಸಿ, ಅದರಲ್ಲಿರುವ ಹೂಳನ್ನು ತೆಗೆದು ಹೆಚ್ಚಿನ ನೀರಿನ ಸಂಗ್ರಹಕ್ಕೆ ನೆರವಾಗಬೇಕಾಗಿದೆ. ಇದರಿಂದ ನೀರು ಕೃಷಿ ಚಟುವಟಿಕೆಗೆ, ಕುಡಿಯಲು, ಜಾನುವಾರುಗಳಿಗೆ, ಕೈಗಾರಿಕೆಗಳಿಗೆ ಕೆರೆಗಳು ನೆರವಾಗುವುದರಿಂದ ಮಹತ್ವವನ್ನು ಹೊಂದಿದೆ.

ಕೆರೆಗಳ ಅಧ್ಯಯನದಿಂದ ಪ್ರಾಚೀನ ಕಾಲದ ಕೃಷಿಯಲ್ಲಿ ನೀರಾವರಿ ವ್ಯವಸ್ಥೆಯನ್ನು ತಿಳಿಯಬಹುದು. ಅಲ್ಲದೇ ಕೆರೆ ನಿರ್ಮಾಣ ಜೀರ್ಣೋದ್ಧಾರ ಮುಂತಾದವುಗಳನ್ನು ಚರ್ಚಿಸಲಾಗಿದೆ. 1799 ರಲ್ಲಿ ಟಿಪ್ಪು ಸುಲ್ತಾನ ಪತನ ನಂತರ ಮೈಸೂರು ರಾಜ್ಯವನ್ನು ಅರಸು ಮನೆತನಕ್ಕೆ ಹಿಂದಿರುಗಿಸಿದ ನಂತರ ಭಾರತದ ಇತರೆಡೆಗಳಲ್ಲಿ ಆದಂತೆ ಮೈಸೂರಿನಲ್ಲಿ ಕೂಡ ಆಧುನಿಕತೆಯ ಪರಿಣಾಮವಾಗಿ ಹಲವಾರು ಆಡಳಿತಾತ್ಮಕ, ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳು ಕಂಡು ಬಂದವು. 1831 ರಲ್ಲಿ ಬ್ರಿಟಿಷರ ನೇರ ಆಳ್ವಿಕೆಗೆ ಬಂದ ಮೈಸೂರಿನಲ್ಲಿ ಈ ಬದಲಾವಣೆಗಳು ಮತ್ತಷ್ಟು ತೀವ್ರಗೊಂಡವು. ಬದಲಾದ ರಾಜಕೀಯ ಹಿನ್ನೆಲೆಯಲ್ಲಿ ಹಾಗೂ ಭೀಕರ ಕ್ಷಾಮ ಬರಗಾಲದ ಪರಿಸ್ಥಿತಿಯಲ್ಲಿ ಕೆರೆ ನೀರಾವರಿ ಕುರಿತಂತೆ ವ್ಯಾಪಕ ಚರ್ಚೆಗಳು ನಡೆದವು. ಈ ಸಂದರ್ಭದಲ್ಲಿ ಪರಂಪರಾನುಗತವಾಗಿ ಸ್ಥಳೀಯರೇ ನಿರ್ಮಿಸಿ, ನಿರ್ವಹಿಸಿಕೊಂಡು ಬರುತ್ತಿದ್ದ ಕೆರೆ ವ್ಯವಸ್ಥೆ ಕುಸಿದುಬಿದ್ದದ್ದು ಸ್ಪಷ್ಟವಾಗಿ ಬೆಳಕಿಗೆ ಬಂದಿತು. ಆದ್ದರಿಂದ ಕೆರೆಗಳ ದುರಸ್ತಿ ಹಾಗೂ ಕೆರೆ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ

ಅನಿವಾರ್ಯತೆಯನ್ನು ಅರಿತ ಮೈಸೂರು ಸಂಸ್ಥಾನ ಹಲವು ಯೋಜನೆಗಳ ಬಗ್ಗೆ ಆಲೋಚಿಸಿ, ಸುದೀರ್ಘ ಚರ್ಚೆಗಳು, ಚಿಂತನೆಗಳ ಫಲವಾಗಿ ಹಲವು ಕೆರೆಗಳು ಜೀರ್ಣೋದ್ಧಾರಗೊಂಡವು. ಸ್ವತಂತ್ರ ನಂತರ ಅಪಾರ ವೆಚ್ಚದಲ್ಲಿ ಕೈಗೊಳ್ಳಲಾದ ದೊಡ್ಡ ನೀರಾವರಿ ಕಾಮಗಾರಿಗಳು ಅವುಗಳ ಕಾರ್ಯನಿರ್ವಹಣೆ ಅನುಷ್ಠಾನದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪ್ರತಿಫಲ ಇಲ್ಲದ ಕಾರಣ ಇಂದಿಗೂ ಕೂಡ ಸಣ್ಣ ಕೆರೆಗಳ ಪುನಶ್ಚೇತನದ ಅನಿವಾರ್ಯತೆಯ ಬಗ್ಗೆ ಒಲವು ಕಂಡು ಬರುತ್ತಿದೆ. ಮೈಸೂರು ಸಂಸ್ಥಾನದಲ್ಲಿ ಪೂರ್ಣಯ್ಯನವರು ಕೆರೆಗಳ ಪುನಃಶ್ಚೇತನಕ್ಕೆ ಆದ್ಯತೆ ನೀಡಿ ಅವುಗಳ ಜೀರ್ಣೋದ್ಧಾರಕ್ಕೆ ಅಪಾರ ವೆಚ್ಚಗಳನ್ನು ಮಾಡಿದರು. ಅವರ ನಂತರ ಕಮೀಷನ್ನರುಗಳ ಕಾಲದಲ್ಲೂ ನೀರಾವರಿಗೆ ಆದ್ಯತೆ ನೀಡಲಾಯಿತು. ಅನಂತರ ಬಂದ ದಿವಾನರುಗಳು ಕೆರೆಗಳ ದುರಸ್ತಿ ನಿರ್ವಹಣೆ ಹಲವಾರು ಯೋಜನೆಗಳನ್ನು ಹಾಕಿದ್ದರು. ಸರ್.ಎಂ. ವಿಶ್ವೇಶ್ವರಯ್ಯನವರು ಭಾರಿ ನೀರಾವರಿಗೆ ಆದ್ಯತೆ ನೀಡಿದರೂ ಸಹ ದೊಡ್ಡ ಕೆರೆಗಳ ಮತ್ತು ಸಣ್ಣ ಕೆರೆಗಳ ಸಂರಕ್ಷಣೆಗೆ ಮಹತ್ವ ನೀಡಿ ಅವುಗಳ ಪುನರಶ್ಚೇತನಕ್ಕೆ ಮಹತ್ವ ನೀಡಿ ಅಗತ್ಯವಾದ ನಿಯಮಗಳನ್ನು ಜಾರಿಗೆ ತಂದದ್ದು ಕೆರೆಗಳ ಮಹತ್ವವನ್ನು ಹೆಚ್ಚಿಸಿತು.

ಮಂಡ್ಯ ಜಿಲ್ಲೆಯು ಕೆರೆಗಳು ಪ್ರಾಚೀನವಾದವುಗಳಾಗಿದ್ದು, ಅವುಗಳಲ್ಲಿ ಕೆಲವು ಇಂದಿಗೂ ಸುಸ್ಥಿತಿಯಲ್ಲಿವೆ. ಜಿಲ್ಲೆಯ ಮಳೆಯ ಸರಾಸರಿ ವಾರ್ಷಿಕ 650 ಮಿ.ಮಿ.ಗಳಾಗಿದೆ. ಭಾರಿ ನೀರಾವರಿ ವ್ಯವಸ್ಥೆ ಇದ್ದರೂ ಜಿಲ್ಲೆಯಲ್ಲಿ ಕೆರೆ, ಕಾಲುವೆ, ಬಾವಿಗಳು, ಕೊಳವೆ ಬಾವಿಗಳು, ನೀರಾವರಿ ಮೂಲವಾಗಿದ್ದರೂ, ಇಂದಿಗೂ ಸಹ ಆಪ್ರಾಚೀನ ಕೆರೆಗಳು ತನ್ನ ಮಹತ್ವವನ್ನು ಜಿಲ್ಲೆಯಲ್ಲಿ ಉಳಿಸಿಕೊಂಡು ಬಂದಿವೆ. ಜಿಲ್ಲೆಯ ಮೈದಾನ ಪ್ರದೇಶವಾಗಿದ್ದರಿಂದ ನೀರನ್ನು ಸಂಗ್ರಹಿಸಲು ಕೆರೆಯನ್ನು ಕಟ್ಟಲು ಈ ಪ್ರದೇಶವು ತುಂಬಾ ಅನುಕೂಲವಾಗಿದೆ.

ಕೆರೆಗಳಿಂದ ಮತ್ತೊಂದು ಮಹತ್ವ ಏನೆಂದರೆ, ಬರ ಮತ್ತು ಜಲ ಮಟ್ಟವನ್ನು ಉಳಿಸುವಿಕೆ, ಕೆರೆಗಳು ಬರಗಾಲದಲ್ಲಿ ಮತ್ತು ಭೂಮಿಯ ಒಳಗಿನ ನೀರಿನ ಮಟ್ಟವನ್ನು ಏರಿಸುವುದು ಇದನ್ನು 1901 ರ ನೀರಾವರಿ ಅಯೋಗ ಕೆಳಗಿನ ಹೇಳಿಕೆಗಳಲ್ಲಿ ವರ್ಣಿಸಿದೆ.

''ಸಂರಕ್ಷಿಸುವ ಕಾಮಗಾರಿಗಳಾಗಿ ಅವುಗಳ ಮಹತ್ವ ಪ್ರಶ್ನಾತೀತ. ಮಳೆಬಾರದ ವರ್ಷಗಳಲ್ಲಿ ಅನೇಕ ಕೆರೆಗಳನ್ನು ಸಂರಕ್ಷಿಸುವಲ್ಲಿ ವಿಫಲವಾಗಬಹುದು. ಆದರೆ ಸಾಧಾರಣ

ದಿನಮಾನಗಳಲ್ಲಿ ಅವು ಮಾಡುವ ಒಳ್ಳೆಯ ಕೆಲಸ, ರೈತರು ಕೆಟ್ಟ ವರ್ಷವನ್ನು ದಾಟಲು ವಸ್ತುತಃ ಸಹಾಯಕ ಅತ್ಯಂತ ಒಣ ವರ್ಷದಲ್ಲೂ ಅವು ಅಂತರ್ಜಲದ ಮಟ್ಟ ಉಳಿಸಲು ನೆರವಾಗುತ್ತದೆ. ಮುಕ್ಕಾಲು ಭಾಗ ಬಾವಿಗಳಲ್ಲಿ ಪ್ರತ್ಯೇಕವಾಗಿಯೂ, ಪರೋಕ್ಷವಾಗಿಯೂ ಕೆರೆಗಳನ್ನೇ ಅವಲಂಬಿಸಿವೆ''.1

ಕೆರೆಗಳ ಇನ್ನೊಂದು ಮಹತ್ವವೇನೆಂದರೆ ಮೀನುಗಾರಿಕೆಗೆ ಇದು ಸಹಾಯಕವಾಗಿದೆ. ಜಿಲ್ಲೆಯ ಹಲವಾರು ಕೆರೆಗಳಲ್ಲಿ ಜಲಚರ ಕೃಷಿಯನ್ನೇ ಯಶಸ್ವಿಯಾಗಿ ನಡೆಸಲು ಸಾಧ್ಯತೆಯುಳ್ಳ ಪ್ರದೇಶವಾಗಿದೆ. ಈ ರೀತಿ ಕೆರೆಗಳನ್ನು ಸುಸ್ಥಿತಿಯಲ್ಲಿ ಇಡಲು ಸಾಧ್ಯವಾಗುತ್ತದೆ. ಕೆರೆಗಳ ಮೂಲಕ ಮೀನುಗಾರಿಕೆ ನಡೆಸಿ ಅದು ನಿರುದ್ಯೋಗ ಸಮಸ್ಯೆ ಮತ್ತು ಆಹಾರ ಉತ್ಪಾದನೆಯ ಮೂಲವಾಗಿದೆ ಕೆರೆಗಳು. ಅದರಿಂದ ಜಿಲ್ಲೆಯ ಕೆರೆ ನೀರಾವರಿ ಚೌಕಟ್ಟಿನ ಅಧ್ಯಯನಕ್ಕೆ ಕಾರ್ಯ ಕ್ಷೇತ್ರವನ್ನಾಗಿಸಲಾಗಿದೆ.

1.3 ಅಧ್ಯಯನದ ಉದ್ದೇಶ: ಈ ಪ್ರಸ್ತುತ ಅಧ್ಯಯನದಲ್ಲಿ ಮಂಡ್ಯ ಜಿಲ್ಲಾ ಕೆರೆ ನೀರಾವರಿ ಪದ್ಧತಿಯ ಬಗೆ ಅಧ್ಯಯನ ನಡೆಸಲಾಗಿದೆ ಮತ್ತು ಜಿಲ್ಲೆಯ ಸಣ್ಣ ಮತ್ತು ಮಧ್ಯಮ ಮಟ್ಟದ ಕೆರೆಗಳನ್ನು ಚರ್ಚಿಸಲಾಗಿದೆ. ಅವುಗಳ ಸಂರಕ್ಷಣೆಯ ಸಾಂಪ್ರದಾಯಿಕ ವಿಧಾನಗಳು ಶಿಥಿಲವಾಗಿರುವುದೇ ಇದಕ್ಕೆ ಕಾರಣ. ಇತ್ತೀಚೆಗೆ ಸರ್ಕಾರಗಳು ಹಳೇ ಕೆರೆಗಳ ಜೀರ್ಣೋದ್ಧಾರ ಮಾಡಲು ಯೋಜನೆಗಳನ್ನು ರೂಪಿಸಿದೆ. ಆದರೆ ಈ ಪ್ರಯತ್ನಗಳು ಸಾಕಷ್ಟು ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಹಿಂದೆ ಕೆರೆ ನಿರ್ಮಾಣ, ಕೆರೆಗಳ ಮೇಲುಸ್ತುವಾರಿ ಗ್ರಾಮ ಸಮಿತಿಯ ಮೇಲ್ವಿಚಾರಣೆಯಲ್ಲಿತ್ತು, ಕೆರೆ ನಿರ್ಮಾಣದಿಂದ ತನ್ನ ಹೆಸರು ಚಿರಸ್ಥಾಯಿಯಾಗಿ ಉಳಿಯುತ್ತದೆ ಎಂದು ನಂಬಿದ್ದರು. ಬೇಸಾಯಗಾರರಿಗೆ ತೃಪ್ತಿಕರವಾಗುವಂತೆ ಗ್ರಾಮ ಸಮುದಾಯ ತನ್ನ ಅಧಿಕಾರಿಗಳ ಮೂಲಕ ಈ ಕೆರೆಗಳ ನೀರನ್ನು ಸಮರ್ಪಕವಾಗಿ ಹಂಚುತ್ತಿತ್ತು. ಮಂಡ್ಯ ಜಿಲ್ಲೆಯ ಪ್ರಾಚೀನ ಕೆರೆಗಳು, ಕೆರೆ ನೀರಾವರಿ ವ್ಯವಸ್ಥೆ, ಅವುಗಳ ಸ್ಥಿತಿಗತಿ, ಕೆರೆಗಳ ರಚನೆ, ಜೀರ್ಣೋದ್ಧಾರ, ಜಲ ನಿರ್ವಹಣೆ ಮುಂತಾದವುಗಳನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ಶಾಸನಾಧಾರಗಳಿಂದ ಚರ್ಚಿಸಿದ್ದೇನೆ.

ಪ್ರಸ್ತುತ ಅಧ್ಯಯನದ ಉದ್ದೇಶ ಕೆರೆಗಳು ನೀರಾವರಿಯ ಪ್ರಮುಖ ಮೂಲವಾಗಿವೆ. ಕೆರೆಗಳು, ಕೃಷಿ, ಕುಡಿಯುವ ನೀರು, ಮೀನುಗಾರಿಕೆ ಮುಂತಾದವುಗಳಿಗೆ ಹೇಗೆ ಸಹಾಯಕವಾಗಿವೆ ಎಂಬುದನ್ನು ಚರ್ಚಿಸಲಾಗಿದೆ. ಹಿಂದಿನ ಕಾಲದಿಂದಲೂ ರಾಜ-ಮಹಾರಾಜರು, ಸ್ಥಳೀಯ ಸಾಮಂತರು, ಅಧಿಕಾರಿಗಳು, ಜಮೀನ್ದಾರರು, ಶ್ರೀಮಂತರು ಮುಂತಾದವರು ಕಾಲಕಾಲಕ್ಕೆ ತಕ್ಕಂತೆ ಕೆರೆಗಳ ನಿರ್ಮಾಣ ಮಾಡುತ್ತಿದ್ದರು. ಕೆರೆಗಳ ನಿರ್ಮಾಣಕ್ಕೆ ಒತ್ತು ನೀಡಿ ಆ ಪ್ರದೇಶದಲ್ಲಿ ಜನ ಸಾಮಾನ್ಯರಿಗೆ ಅನುಕೂಲವಾಗುವಂತೆ ಕೆರೆಗಳ ನಿರ್ಮಾಣ ಮಾಡುತ್ತಿದ್ದರು. ಕೆರೆಗಳ ನಿರ್ಮಾಣದಿಂದಾಗಿ ಕೃಷಿ ಚಟುವಟಿಕೆ ಚುರುಕುಗೊಂಡು ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿದೆ.

ಹಿಂದೆ ಯಾವ ಉದ್ದೇಶದಿಂದ ಕೆರೆ ನಿರ್ಮಾಣ ಮಾಡಲಾಯಿತು, ಅದರ ಉದ್ದೇಶವನ್ನು ತಿಳಿಯಲು ಈ ಅಧ್ಯಯನ ಸಹಕಾರಿಯಾಗಿದೆ. ಅಲ್ಲದೆ ಕೆರೆಗಳು ಯಾವ ರೀತಿ ಕೃಷಿ ನೀರಾವರಿ ಸಹಕಾರಿಯಾಗಿವೆ. ಹಾಗೆಯೇ ಕೆರೆಗಳ ನಿರ್ಮಾಣ ಮಾಡಿದ ನಂತರ ಅದರ ಉದ್ದೇಶ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುವುದನ್ನು ಈ ಅಧ್ಯಯನದಿಂದ ತಿಳಿಯಬಹುದು.

ಕೆರೆಗಳ ಅಧ್ಯಯನದಿಂದ ಕೆರೆಗಳು ಯಾವ ಸ್ಥಿತಿಯಲ್ಲಿವೆ. ಅವು ಸುಸ್ಥಿತಿಯಲ್ಲಿದೆಯೋ ಅಥವಾ ದುಸ್ಥಿತಿಯಲ್ಲಿದೆಯೋ ಎಂಬುವುದನ್ನು ತಿಳಿಯಬಹುದು. ಕೆರೆಗಳ ಅಧ್ಯಾಯದಿಂದ ಅವುಗಳ ಸುಸ್ಥಿತಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸಹಕಾರಿಯಾಗಿದೆ.

ಈ ಅಧ್ಯಯನದ ಉದ್ದೇಶದಿಂದ ಮಂಡ್ಯ ಜಿಲ್ಲೆಯಲ್ಲಿರುವ ಕೆರೆಗಳನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರು. ಅವುಗಳೆಂದರೆ, ಶಾಸನಗಳಲ್ಲಿ ಕೆರೆಗಳನ್ನು ಕೆರೆ, ಕಟ್ಟೆ, ಸಾಗರ, ತಟಕ ಎಂಬುದಾಗಿ ವರ್ಗಿಸುತ್ತವೆ. ಹಿರಿಯ ಕೆರೆ, ಹೆಗ್ಗೆರೆ, ಪಿರಿಯಕೆರೆ ಮತ್ತು ದೊಡ್ಡಕೆರೆ ಎಂದು ವರ್ಗಿಸಿವೆ. ಚಿಕ್ಕಕೆರೆ ಎಂದರೆ ಸಣ್ಣಕೆರೆ ಹಾಗೂ ಕನ್ನೆಗೆರೆ ಎಂದು ಹೇಳುತ್ತೇವೆ.

ಮಂಡ್ಯ ಜಿಲ್ಲೆ ಪಾರಂಪರಿಕ ನೀರಾವರಿ ಪದ್ಧತಿಯಿಂದ ಹಿಡಿದು ಇಲ್ಲಿಯವರೆಗಿನ ಕೆರೆಗಳನ್ನು ಸಹ ಅಧ್ಯಯನ ಮಾಡಲಾಗಿದೆ.

1.4 ಅಧ್ಯಯನಕ್ಕೆ ಅಳವಡಿಸಿದ ಸಂಶೋಧನಾ ವಿಧಾನ :

ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಪದ್ಧತಿಯ ಅಧ್ಯಯನದಲ್ಲಿ ಈ ಸಂಶೋಧನಾ ವಿಧಾನವನ್ನು ಅನುಕರಿಸಲಾಗಿದೆ.

ಎ. ಸೂಕ್ಷ್ಮ ಅಧ್ಯಯನ (Microstudy)

ಪ್ರಸ್ತುತ ಅಧ್ಯಯನದಲ್ಲಿ ಮಂಡ್ಯ ಜಿಲ್ಲೆಯನ್ನು ಒಂದು ಆಡಳಿತ ಘಟಕವನ್ನಾಗಿ ಪರಿಗಣಿಸಿ ಕೆರೆ ನೀರಾವರಿ ವ್ಯವಸ್ಥೆಯನ್ನು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸಲು ಪ್ರಯತ್ನಿಸಲಾಗಿದೆ.

ಬಿ. ಪ್ರಾದೇಶಿಕ ಅಧ್ಯಯನ (Regional Study):

ಪ್ರಸ್ತುತ ಅಧ್ಯಾಯನದಲ್ಲಿ ಪ್ರಾದೇಶಿಕ ಅಧ್ಯಯನಕ್ಕೆ ಆದ್ಯತೆ ನೀಡಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ನೀರಾವರಿ ವ್ಯವಸ್ಥೆಯನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಪರಾಮರ್ಶಿಸಿ, ಕೆರೆ ನೀರಾವರಿ ಚೌಕಟ್ಟಿನ ಮೂಲ, ವಿಕಸನ, ಬೆಳವಣಿಗೆಯನ್ನು ವಿವಿಧ ಕಾಲಘಟ್ಟಗಳಲ್ಲಿ ಪರಾಮರ್ಶಿಸುವ ಪ್ರಯತ್ನವಾಗಿದೆ. ಪ್ರಸ್ತುತ ಅಧ್ಯಾಯನದಲ್ಲಿ ಪರಿಸರ ಪೂರಕವಾದ ಚೌಕಟ್ಟಿನ ಹಿನ್ನೆಲೆಯಲ್ಲಿ ಕೈಗೊಳ್ಳಲಾಗಿದೆ. ಭೌಗೋಳಿಕ ಅಂಶಗಳಾದ ಮಳೆ, ಭೂಪ್ರದೇಶ ಮತ್ತಿತರ ಅಂಶಗಳಿಂದ ಪ್ರಭಾವಿತವಾಗಿರುವ ಕೆರೆ ನೀರಾವರಿ ವ್ಯವಸ್ಥೆಯ ಅಧ್ಯಯನಕ್ಕೆ ನೀಡಲಾಗಿದೆ.

1.5 ಅಧ್ಯಯನಕ್ಕೆ ಸಂಬಂಧಿಸಿದಂತೆ ಇದುವರೆಗಿನ ಗ್ರಂಥಗಳ ಸಮೀಕ್ಷೆ :

ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಹಲವಾರು ಲೇಖನಗಳು, ಸ್ಮರಣ ಸಂಚಿಕೆಗಳು, ಸಾಂಸ್ಕೃತಿಕ ನೆಲೆಯ ಅಧ್ಯಾಯನಗಳು ಪ್ರಕಟವಾಗಿದ್ದರು, ಕೆರೆ ನೀರಾವರಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಅಧ್ಯಾಯನಗಳು ಇಲ್ಲ ಎನ್ನಬಹುದು. ಬಹುತೇಕ ಲೇಖನಗಳು ಮಂಡ್ಯ ಜಿಲ್ಲೆಯ ರಾಜಕೀಯ, ಇತಿಹಾಸ, ಸಂಸ್ಕೃತಿಯ ಬಗ್ಗೆ ಅಧ್ಯಯನಗಳು ಬಿಡಿ ಬಿಡಿಯಾಗಿ ಬಂದಿವೆ. ಹಲವು ಚಳುವಳಿಗಳಿಗೆ ಸಂಬಂಧಪಟ್ಟವೆ.

ಅನಂತರಾಮುರವರ ''ಸಕ್ಕರೆಯ ಸೀಮೆ'' ಗ್ರಂಥದಲ್ಲಿ ಮಂಡ್ಯ ಜಿಲ್ಲೆಯ ಸಮಗ್ರ ಚರಿತ್ರೆಗೆ ಪೂರಕ ಮಾಹಿತಿಯ ಗ್ರಂಥವಾಗಿದೆ. ತೈಲೂರು ವೆಂಕಟಕೃಷ್ಣರವರ ''ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ''ದಲ್ಲಿ ಮಂಡ್ಯ ಜಿಲ್ಲೆಯ ನೀರಾವರಿ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ ಯಾವ ಕೃತಿಯೂ ನೀರಾವರಿ ಚೌಕಟ್ಟಿನ ಬಗ್ಗೆ ಸಮಗ್ರ ಬೆಳಕು ಚೆಲ್ಲುವುದಿಲ್ಲ. ಆದರೆ

ಕಾವೇರಿ ಜಲವಿವಾದದ ಕೆ.ಆರ್. ಎಸ್. ಬಗ್ಗೆ ಹಲವಾರು ಕೃತಿಗಳು ಬಂದಿವೆ. ಮಂಡ್ಯ ಜಿಲ್ಲೆಯ ಕೆರೆ ನೀರಾವರಿಯ ಚೌಕಟ್ಟಿನ ಬಗ್ಗೆ ಅಧ್ಯಯನವಾಗಿಲ್ಲ. ಅದರಿಂದ ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಅಧ್ಯಯನವನ್ನು ಕೈಗೊಳ್ಳುವ ಪ್ರಯತ್ನವಾಗಿದೆ.

1.6 ಆಧಾರಗಳು :- (Sources for the study)

ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಕುರಿತ ಅಧ್ಯಯನಕ್ಕೆ ಪ್ರಮುಖವಾಗಿ ಶಾಸನಗಳನ್ನು ಬಳಸಿಕೊಳ್ಳಲಾಗಿದೆ. ಫ್ರಾನ್ಸಿಸ್‌ಬುಖಾನನರವರ ಬರವಣಿಗೆಗಳು, ಕರ್ನಲ್ ಮೆಕೆಂಜಿರವರ ಬರವಣಿಗೆಗಳು, ಮೇಜರ್ ಸ್ಯಾಂಕಿ ವರದಿ ಸಹ ಬಳಸಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಕೆರೆ ನೀರಾವರಿ ಮತ್ತು ನಿರ್ವಹಣೆ ಕುರಿತಂತೆ ಪ್ರಕಟವಾಗಿರುವ ಹಲವು ಪೂರಕ ಗ್ರಂಥಗಳಿಂದ ಬಳಸಿಕೊಳ್ಳಲಾಗಿದೆ. ಗೆಜೆಟಿಯರ್ ಮತ್ತು ಇತರೆ ಸಂಬಂಧಿಸಿದ ಗ್ರಂಥಗಳನ್ನು ಅವಲಂಬಿಸಿದೆ.

ಪ್ರಮುಖವಾಗಿ ಕಾವೇರಿ ನೀರಾವರಿ ನಿಗಮ ಅದರ ಶಾಖೆಗಳು ಕೆರೆಗಳ ಬಗ್ಗೆ ಒದಗಿಸಿದ ದಾಖಲೆಗಳು, ಕೃಷಿ ಇಲಾಖೆಯ ಬೆಳೆ, ಕಾಲಾಮಾನದ ವರದಿಗಳು, ನೀರಾವರಿ ಇಲಾಖೆಗಳು ಒದಗಿಸಿದ ಲಿಖಿತ ದಾಖಲೆಗಳನ್ನು ಬಳಸಿಕೊಳ್ಳಲಾಗಿದೆ. ವೆಬ್‌ಸೈಟ್ ಮೂಲಕ ಹಲವು ಕೆರೆಗಳ ಚಿತ್ರಣವನ್ನು ಸಂಗ್ರಹಿಸಿದೆ. ಅಲ್ಲದೆ ಕಾರ್ಯಕ್ಷೇತ್ರ ಮಾಹಿತಿಯನ್ನು ವ್ಯಾಪಕವಾಗಿ ಬೆಳೆಸಿಕೊಳ್ಳಲಾಗಿದೆ.

1.7 ಅಧ್ಯಾಯಗಳ ವಿಭಾಗೀಕರಣ :

ಅಧ್ಯಯನ ಅನುಕೂಲಕ್ಕಾಗಿ ಪ್ರಸ್ತುತ ನಿಬಂಧನೆಯನ್ನು ಐದು ಭಾಗಗಳಾಗಿ ವಿಂಗಡಿಸಲಾಗಿದೆ.

ಮೊದಲ ಅಧ್ಯಾಯವು ಪೀಠಿಕೆಯ ರೂಪದಲ್ಲಿದ್ದು, ಅದರಲ್ಲಿ ಅಧ್ಯಯನದ ಸ್ವರೂಪ, ಮಹತ್ವ, ಉದ್ದೇಶ ಅಧ್ಯಯನಕ್ಕೆ ಸಂಬಂಧಿಸಿದ ಗ್ರಂಥಗಳು ಇತ್ಯಾದಿಗಳನ್ನು ಸ್ಪಷ್ಟಪಡಿಸಲಾಗಿದೆ. ಅಧ್ಯಯನಕ್ಕೆ ಅನುಕೂಲವಾಗುವ ಆಕರಗಳ ಸಮೀಕ್ಷೆ ನಡೆಸಲಾಗಿದೆ.

ಎರಡನೆಯ ಅಧ್ಯಯನದಲ್ಲಿ ಜಿಲ್ಲೆಯ ಭೌಗೋಳಿಕ ಹಿನ್ನೆಲೆಯನ್ನು, ಅಲ್ಲದೆ ಮಂಡ್ಯ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆಯನ್ನು ನೀಡಿದೆ. ಜಿಲ್ಲೆಯ ಪರಿಸರ, ಭೂಮಿ, ಜೀವವೈವಿಧ್ಯದ ಬಗ್ಗೆ,

ಜನರ ಕೃಷಿ ಚಟುವಟಿಕೆಗಳ ಬಗ್ಗೆ, ಜನಸಂಖ್ಯೆಯನ್ನು ಅಂಕಿ ಅಂಶಗಳ ಆಧಾರದ ಮೇಲೆ ತಾಲ್ಲೂಕುವಾರು ಮಂಡಿಸಿದೆ.

ಮೂರನೇ ಅಧ್ಯಾಯದಲ್ಲಿ : ಪಾರಂಪರಿಕ ನೀರಾವರಿ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಶಾಸನಗಳ ಹಿನ್ನೆಲೆಯಲ್ಲಿ ಪಾರಂಪಾರಿಕ ನೀರಾವರಿ ವ್ಯವಸ್ಥೆಯನ್ನು ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ : ಪ್ರಸ್ತುತ ನೀರಾವರಿ ಬಗ್ಗೆ, ಇಲಾಖೆಗಳಲ್ಲಿ ಲಭ್ಯವಾಗಿರುವ ಮಾಹಿತಿ ಆಧಾರದ ಮೇಲೆ ಅವುಗಳನ್ನು ತಾಲ್ಲೂಕುವಾರು ವಿಂಗಡಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಐದನೇ ಅಧ್ಯಾಯದಲ್ಲಿ : ಉಪಸಂಹಾರ ರೂಪದಲ್ಲಿ ಪ್ರಸ್ತುತ ನಿಬಂಧನೆಯಿಂದ ಹೊರಹೊಮ್ಮಿದ ಗ್ರಹಿಸಿ ಪ್ರಮುಖ ವಿವರಗಳನ್ನು ಸಂಗ್ರಹವಾಗಿ ಕ್ರೋಢೀಕರಿಸಲಾಗಿದೆ.

ಅಡಿ ಟಿಪ್ಪಣಿ :

1) ಕರ್ನಾಟಕದಲ್ಲಿ ಕೆರೆ ನೀರಾವರಿ – 2000 ಪುಟ 4.

ಅಧ್ಯಾಯ - 2

ಮಂಡ್ಯ ಜಿಲ್ಲೆಯ ಹಿನ್ನಲೆ

2.1 ಮಂಡ್ಯ ಜಿಲ್ಲೆಯ ಭೌಗೋಳಿಕ ಹಿನ್ನಲೆ

2.2 ಮಂಡ್ಯ ಜಿಲ್ಲೆಯ ಚಾರಿತ್ರಿಕ ಹಿನ್ನಲೆ

ಅಧ್ಯಾಯ –2

ಮಂಡ್ಯ ಜಿಲ್ಲೆಯ ಹಿನ್ನೆಲೆ

2.1 ಮಂಡ್ಯ ಜಿಲ್ಲೆಯ ಭೌಗೋಳಿಕ ಹಿನ್ನೆಲೆ

ಮಂಡ್ಯ ಕರ್ನಾಟಕ ರಾಜ್ಯದ ದಕ್ಷಿಣ ಭಾಗದಲ್ಲಿದೆ. ಕರ್ನಾಟಕ ರಾಜ್ಯ 29 ಜಿಲ್ಲೆಗಳಲ್ಲಿ ಮಂಡ್ಯ ಜಿಲ್ಲೆಯು ಒಂದಾಗಿದೆ. ಮಂಡ್ಯ ಜಿಲ್ಲೆಯ ಕರ್ನಾಟಕದ ಬಯಲು ಪ್ರದೇಶದಲ್ಲಿದೆ. ಇಪ್ಪತ್ತನೇ ಪ್ರಾರಂಭದವರೆಗೂ ಒಣಭೂಮಿ ಪ್ರದೇಶವಾಗಿತ್ತು. ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣವಾದ ನಂತರ ಈ ಜಿಲ್ಲೆಯ ನೀರಾವರಿ ಸೌಲಭ್ಯ ಪಡೆದು ಆರ್ಥಿಕ ಪ್ರಗತಿಯತ್ತ ಸಾಗಿದೆ. ಮಂಡ್ಯದ ಪ್ರಮುಖ ನೀರಾವರಿ ಬೆಳೆ ಕಬ್ಬು ಮತ್ತು ಭತ್ತ ಆದರಿಂದ ಅದನ್ನ ರಾಜ್ಯದ ಸಕ್ಕರೆ ಮತ್ತು ಭತ್ತದ ಕಣಜವೆಂದು ಕರೆಯುತ್ತಾರೆ.

ಮಂಡ್ಯ ಜಿಲ್ಲೆಯ ಭೌಗೋಳಿಕವಾಗಿ ಬಯಲು ಸೀಮೆಯಾಗಿದ್ದು, ಇದರ ವಿಸ್ತೀರ್ಣ 4961 ಚದರ ಕಿಲೋ ಮೀಟರ್‌ಗಳಆಗಿದ್ದು (ಅಂದರೆ 1924 ಚ.ಮೈಲಿಗಳು) ರಾಜ್ಯದ ಭೌಗೋಳಿಕ ವಿಸ್ತೀರ್ಣದ ಶೇ. 2.59 ರಷ್ಟು ಭಾಗವನ್ನು ಹೊಂದಿದೆ. ವಿಸ್ತೀರ್ಣದಲ್ಲಿ ರಾಜ್ಯಜ ಜಿಲ್ಲೆಗಳ ಸ್ಥಾನದಲ್ಲಿ 20ನೇ ಸ್ಥಾನವನ್ನು ಹೊಂದಿದೆ. ಸಮುದ್ರ ಮಟ್ಟಕ್ಕಿಂತ ಸುಮಾರು 762 ರಿಂದ 914 ಮೀಟರ್‌ಗಳಷ್ಟು ಎತ್ತರದಲ್ಲಿದೆ. ಜಿಲ್ಲೆಯ ಸಣ್ಣಪುಟ್ಟ ಬೆಟ್ಟಗಳು ಹೆಚ್ಚು ಎತ್ತರದಲ್ಲಿದೆ. ಗಿರಿಶ್ರೇಣಿಗಳು ಅಲ್ಲಲ್ಲಿ ಕಾಣುತ್ತವೆ. ಕೆರೆಗಳ ನಿರ್ಮಾಣಕ್ಕೆ ಭೂಮಿ ಸಮರ್ಥವಾಗಿದೆ. ಇದರಿಂದ ಕೆರೆಗಳನ್ನು ನಿರ್ಮಿಸಲಾಗಿದೆ.[1]

ಮಂಡ್ಯ ಎಂದು ಹೆಸರು ಪಡೆಯುವ ಮೊದಲು ಇದು ಮೈಸೂರು ಪ್ರಾಂತ್ಯದಲ್ಲಿ ಸೇರಿಕೊಂಡಿತ್ತು. 1939 ರಲ್ಲಿ ಮೈಸೂರಿನಿಂದ ಮಂಡ್ಯಎಂದು ವಿಭಜಿಸಲಾಯಿತು. ಮಂಡ್ಯ ಜಿಲ್ಲೆಯು 7 ತಾಲ್ಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ, ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಪಾಂಡವಪುರ , ನಾಗಮಂಗಲ, ಕೆ.ಆರ್.ಪೇಟೆ, ತಾಲ್ಲೂಕುಗಳ ಪೈಕಿ ನಾಗಮಂಗಲ ತಾಲ್ಲೂಕು, ಶೇ. 21 ರಷ್ಟು ಭಾಗವನ್ನು ಪಡೆದು ಮೊದಲ ಸ್ಥಾನದಲ್ಲಿದ್ದರೆ ಶ್ರೀರಂಗಪಟ್ಟಣ ತಾಲ್ಲೂಕು ಜಿಲ್ಲೆಯ ವಿಸ್ತೀರ್ಣದ 3 ರಷ್ಟು ಹೊಂದಿ ಕೊನೆಯ ಸ್ಥಾನದಲ್ಲಿದೆ.

ಮಂಡ್ಯ ಜಿಲ್ಲೆಯ ಭೌಗೋಳಿಕ ವಿವರಗಳು [2]

ಕ್ರ.ಸಂ	ತಾಲ್ಲೂಕು	ವಿಸ್ತೀರ್ಣ	ಪೂರ್ವ ರೇಖಾಂಶ		ಉತ್ತರ ರೇಖಾಂಶ	
			ಇಂದ	ವರೆಗೆ	ಇಂದ	ವರೆಗೆ
1	ಕೆ.ಆರ್.ಪೇಟೆ	905	76^0 19'	76^0 37'	$12^0$28'	12^0 53'
2	ಮದ್ದೂರು	618	76^0 42'	77^0 06'	$12^0$24'	12^0 47'
3	ಮಳವಳ್ಳಿ	810	76^0 53'	77^0 07'	$12^0$11'	12^0 25'
4	ಮಂಡ್ಯ	716	76^0 42'	76^0 39'	$12^0$22'	12^0 44'
5	ನಾಗಮಂಗಲ	1045	76^0 34'	76^0 54'	$12^0$38'	12^0 00'
6	ಪಾಂಡವಪುರ	540	76^0 28'	76^0 40'	$12^0$21'	12^0 41'
7	ಶ್ರೀರಂಗಪಟ್ಟಣ	357	76^0 34'	76^0 53'	$12^0$51'	12^0 29
	ಒಟ್ಟು	**4961**	**76^0 19'**	**77^0 07'**	**$12^0$11'**	**13^0 00'**

(ಆಧಾರ : ಮಂಡ್ಯ ಜಿಲ್ಲಾ ಅಂಕಿ ಅಂಶಗಳ ನೋಟ 2000-01)

ಜಿಲ್ಲೆಯಲ್ಲಿ 2002 ರಲ್ಲಿದಂತೆ 7 ತಾಲ್ಲೂಕುಗಳು , 31 ಹೋಬಳಿಗಳು, 1365 ಜನವಸತಿ ಇರುವ ಹಾಗೂ 113 ಜನವಸತಿ ಇಲ್ಲಿನ ಗ್ರಾಮಗಳು ಮತ್ತು ಏಳು ಪಟ್ಟಣಗಳನ್ನು ಹೊಂದಿದೆ. ಜಿಲ್ಲೆಯ 2 ಕಂದಾಯ ಉಪ ವಿಭಾಗಗಳಿದ್ದು, ಮಂಡ್ಯ ಉಪ ವಿಭಾಗಕ್ಕೆ ಮಂಡ್ಯ, ಮದ್ದೂರು ಹಾಗೂ ಮಳವಳ್ಳಿ ತಾಲ್ಲೂಕುಗಳು ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳು ಸೇರಿವೆ ಜಿಲ್ಲೆಯ 1479 ಹಳ್ಳಿಗಳನ್ನು ನೋಡಬಹುದು. ಸರ್ಕಾರವು ಮಾರ್ಚ್ 2000 ರಲ್ಲಿ ಕೃಷ್ಣರಾಜ ಸಾಗರ ಅಧಿಸೂಚಿತ ಪ್ರದೇಶವನ್ನು ಗ್ರಾಮ ಪಂಚಾಯಿತಿಯನ್ನಾಗಿ ಮಾರ್ಪಡಿಸಿದೆ. ಆದರೂ 2001 ರ ಜನಗಣತಿಯ ಮೇರೆಗೆ ಕೃಷ್ಣರಾಜ ಸಾಗರವನ್ನು ಅಧಿಸೂಚಿತ ಪ್ರದೇಶವೆಂದು ಪರಿಗಣಿಸಿದೆ. ಪ್ರಸ್ತುತ ಜಿಲ್ಲೆಯಲ್ಲಿರುವ ಒಟ್ಟು 7 ನಗರ ಪ್ರದೇಶದಲ್ಲಿ ಒಂದು ನಗರಸಭೆ (ಮಂಡ್ಯ) ಮೂರು ಪುರಸಭೆ (ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ) ಮತ್ತು ಮೂರು ಪಟ್ಟಣ ಪಂಚಾಯಿತಿಗಳಿವೆ (ಕೃಷ್ಣರಾಜಪೇಟೆ, ಪಾಂಡವಪುರ, ಮತ್ತು ನಾಗಮಂಗಲ).

ಮೇರೆಗಳು :-

ಜಿಲ್ಲೆಯ ವಾಯುವ್ಯದಲ್ಲಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ, ಮತ್ತು ಹೊಳೆನರಸೀಪುರ, ಉತ್ತರ ಮತ್ತು ಈಶಾನ್ಯದಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್, ತುರುವೆಕೆರೆ, ಪೂರ್ವದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ಮತ್ತು ರಾಮನಗರ ಜಿಲ್ಲೆಯ ಚನ್ನಪಟ್ಟಣ, ದಕ್ಷಿಣ ಮತ್ತು ನೈರುತ್ಯದಲ್ಲಿ ಮೈಸೂರು ಜಿಲ್ಲೆಯ ಮೈಸೂರು ತಿರುಮಕೂಡಲು, ನರಸೀಪುರ ಮತ್ತು ಕೃಷ್ಣರಾಜ ನಗರ ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕುಗಳಿವೆ. ಜಿಲ್ಲೆ. 76^0 19' ರಿಂದ 77^0-07' ಪೂರ್ವ ರೇಖಾಂಶ ಹಾಗೂ 12^0 11' ರಿಂದ 13^0 00' ಉತ್ತರ ಅಕ್ಷಾಂಶಗಳ ನಡುವೆ ವಿಸ್ತರಿಸಿದೆ. ಜಿಲ್ಲೆಯ ಗಡಿ ಪ್ರದೇಶವು ಬೇರ್ಯಾವುದೇ ರಾಜ್ಯಗಳ ಗಡಿಗೆ ತಾಗಿಕೊಂಡಿದರೆ ಕರ್ನಾಟಕ ರಾಜ್ಯ ಆರು ಜಿಲ್ಲೆಗಳಿಂದ ಸುತ್ತುವರೆದಿರುವುದು ಒಂದು ವಿಶೇಷವಾಗಿದೆ.

ಜನಸಂಖ್ಯೆ :- 1991 ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ 16,44,374 ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇ. 3.66 ರಷ್ಟಿದೆ. ರಾಜ್ಯದ ಒಟ್ಟು ಜಿಲ್ಲೆಯ ಜನಸಂಖ್ಯೆಯಲ್ಲಿ 9ನೇ ಸ್ಥಾನವನ್ನು ಹೊಂದಿದೆ. 2001 ರ ಜನಗತಿಯ ತಾತ್ಕಾಲಿಕ ಅಂಕಿ ಅಂಶಗಳಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ 17,61,718 ಇದ್ದು, ಇದರಲ್ಲಿ ಪುರುಷರು 8,87,307 ಹಾಗೂ ಮಹಿಳೆಯರು 8,84,411 ಇದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ 14, 79, 534 ಜನರು ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದ್ದಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆ ಶೇಕಡ 23 ರಷ್ಟನ್ನು ಹೊಂದಿರುವ ಮಂಡ್ಯ ತಾಲ್ಲೂಕು ಮೊದಲ ಸ್ಥಾನದಲ್ಲಿದ್ದರೆ ಅತಿ ಚಿಕ್ಕದಾದ ಶ್ರೀರಂಗಪಟ್ಟಣ ತಾಲ್ಲೂಕು ಜಿಲ್ಲೆಯ ಜನಸಂಖ್ಯೆ ಶೇ. 9 ರಷ್ಟನ್ನು ಹೊಂದಿದೆ.

ಭೂ ವಿಜ್ಞಾನ: ಜಿಲ್ಲೆಯ ಭಾಗ ನೈಸ್‌ಶಿಲಾ ಪ್ರದೇಶವಾಗಿದೆ. ಸಾಮಾನ್ಯವಾಗಿ ಈ ಶಿಲೆ ಬೂದುಬಣ್ಣದಾಗಿದ್ದು ಪದರಯುಕ್ತವಾಗಿದೆ. ಚಿನಕುರಳಿಯ ಬೆಳೆ ಇಂತಹ ಶೀಲಾ ಸ್ವರೂಪ ಸ್ಪಷ್ಟವಾಗಿ ಕಾಣುತ್ತದೆ. ಕೆ.ಆರ್.ಪೇಟೆ, ಮೇಲುಕೋಟೆ, ಸಿಂಧಘಟ್ಟ, ಮುಂತಾದೆಡೆಗಳು ಸ್ವಲ್ಪ ಅನ್ಯ ರೀತಿಯ ಶಿಲೆಗಳಿವೆ.

<u>ಭೂ ವಿಕಾಶ :-</u> ಜಿಲ್ಲೆಯ ಭಾರತದ ಪರ್ಯಾಯ ದ್ವೀಪದ ಒಂದು ಭಾಗವಾಗಿದ್ದು, ಅದರ ಭೂ ಚರಿತ್ರೆಯ ಪ್ರಮುಖ ಲಕ್ಷಣಗಳು ಭಾರತರ ಪರ್ಯಾಯ ದ್ವೀಪದ ಚರಿತ್ರೆಯನ್ನು ಹೋಲುತ್ತದೆ. ಜಿಲ್ಲೆಯಲ್ಲಿ ಕಂಡು ಬರುವ ಪ್ರಮುಖ ಶಿಲಾ ಸಮೂಹ ಆರ್ಕಿಯನ್ ಕಲ್ಪಕ್ಕೆ ಸೇರಿದೆ. ಈ ಶಿಲೆಗಳು ವಿಶಾಲವಾದ ಪ್ರದೇಶದಲ್ಲಿ ಹರಡಿದೆ. ಇವು ಅನೇಕ ಹವಾಮಾನಗಳಿಗೆ ತುತ್ತಾಗುಣ (ಎಕ್ಸಪೋಸ್ ಆಗುತ್ತಾ) ವಿವಿಧ ರಾಸಾಯನಿಕ ಸಂಯೋಜನೆಯನ್ನು ಹೊಂದಿದೆ. ಈ ಆರ್ಕಿಯನ್ ಕಲ್ಪದ ಶಿಲಾ ಸಮೂಹದಲ್ಲಿ ಅನೇಕ ಲೋಹಗಳ ಅದಿರುಗಳು, ಅದಿರುಗಳಲ್ಲದ ಖನಿಜಗಳು ದೊರೆತಿದೆ.

<u>ಜಲಸಂಪನ್ಮೂಲಗಳು :</u> ಜಿಲ್ಲೆಯಲ್ಲಿ ಕಾವೇರಿ, ಲೋಕಪಾವನಿ, ಶಿಂಷಾ, ಹೇಮಾವತಿ, ವೀರವೈಷ್ಣವಿ ನದಿಗಳು, ಪ್ರಾಚೀನ ಕಾಲದಿಂದಲೂ ಹರಿದು ಜನ ಜೀವನಕ್ಕೆ ಆಶ್ರಯ ನೀಡಿದೆ. ಜಿಲ್ಲೆಯನ್ನ ಪಂಚನದಿಗಳ ನಾಡು ಎಂದು ಕರೆಯುವುದುಂಟು. ಜಿಲ್ಲೆಯಲ್ಲಿರುವ ಒಟ್ಟು ಜಲಾಶಯಗಳ ಜಲಾವೃತ್ತ ಪ್ರದೇಶವು. 14,735 ಹೆಕ್ಟೆರ್‌ಗಳಾಗಿದ್ದು, ಇದರಲ್ಲಿ ಕೆ.ಆರ್.ಎಸ್. 12,924 ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ 224 ದೊಡ್ಡ ಕೆರೆಗಳಿದ್ದು, ಅವುಗಳ ಜಲಾವೃತ್ತ ಪ್ರದೇಶದಲ್ಲಿ 9779 ಹೆಕ್ಟರ್‌ಗಳಾಗಿದೆ. ಜಿಲ್ಲೆಯಲ್ಲಿರುವ 596 ಸಣ್ಣ ಕೆರೆಗಳ ಜಲಾವೃತ್ತ ಪ್ರದೇಶವು 1,733 ಹೆಕ್ಟರ್‌ಗಳಾಗಿವೆ. ಜಿಲ್ಲೆಯ ಭೂ ಪ್ರದೇಶದ ಪೂರ್ವದೆಡೆಗೆ ಇಳಿಜಾರು ನದಿಯ ನೀರುವ ಬಂಗಾಳಕೊಲ್ಲಿಗೆ ಸೇರುತ್ತದೆ.

ಕಾವೇರಿ ನದಿಯ ನೀರಿನಿಂದ ಏಷ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನೆ ಮಾಡಲಾಯಿತು.[3]

ಮಂಡ್ಯ ಜಿಲ್ಲೆಯು ಅರಣ್ಯ ಪ್ರದೇಶವನ್ನು ಹೆಚ್ಚು ಹೊಂದಿದರು. ಹಲವೆಡೆ ಮೀಸಲು ಹಾಗೂ ರಕ್ಷಿತ ಅರಣ್ಯ ಪ್ರದೇಶಗಳು ಕಂಡು ಬರುತ್ತದೆ. ಜಿಲ್ಲೆಯ ಒಟ್ಟು ಭೌಗೋಳಿಕ ಕ್ಷೇತ್ರದಲ್ಲಿ ಶೇ. 8.14 ರಷ್ಟು ಭಾಗ ಅಂದರೆ 404.6 ಚ.ಕಿ.ಮೀ ಅರಣ್ಯ ಪ್ರದೇಶವಾಗಿದೆ. ಅದರಲ್ಲಿ 240.7 ಚ.ಕಿ.ಮೀ ಮೀಸಲು ಅರಣ್ಯ ಪ್ರದೇಶ. 20.69 ಚ.ಕಿ.ಮೀ ರಕ್ಷಿತ ಅರಣ್ಯ ಪ್ರದೇಶ ಉಳಿದ ಪ್ರದೇಶ ಯಾವುದೇ ವರ್ಗಕ್ಕೂ ಸೇರದ ಸಾಮಾನ್ಯ ಅರಣ್ಯ ಪ್ರದೇಶವಾಗಿದೆ. ದಟ್ಟಕಾಡು ಇಲ್ಲದ ಪ್ರಯುಕ್ತ ಜಿಲ್ಲೆಯಲ್ಲಿ ಕ್ರೂರ ಪ್ರಾಣಿಗಳು ವಿರಳ, ಜಿಲ್ಲೆಯಲ್ಲಿ ಪ್ರಖ್ಯಾತ ರಂಗನತಿಟ್ಟು, ಪಕ್ಷಿಧಾಮ, ಕೊಕ್ಕರೆ ಬೆಳ್ಳೂರು ಪ್ರಸಿದ್ಧವಾಗಿದೆ.

ಹವಾಮಾನ :- ಮಂಡ್ಯ ಜಿಲ್ಲೆಯ ಹವಾಮಾನ ಆಹ್ಲಾದಕರವಾಗಿದೆ. ಜಿಲ್ಲೆಯಲ್ಲಿ 4 ಋತುಗಳನ್ನು ಗುರುತಿಸಲಾಗಿದೆ. ಡಿಸಂಬರ್‌ನಿಂದ ಫೆಬ್ರವರಿ ತಿಂಗಳಿನವರೆಗೆ ಋತುವಿನಲ್ಲಿ ಚಳಿ ಇದ್ದು, ಶುಭ್ರ ವಾತಾವರಣ ಮತ್ತು ಒಣ ಹವೆಯು ಕಂಡು ಬರುತ್ತದೆ. ಮಾರ್ಚ್ ತಿಂಗಳಿನಿಂದ ಮೇ ತಿಂಗಳವರೆಗಿನ ಅವಧಿಯನ್ನು ಬೇಸಿಗೆ ಕಾಲವೆಂದು, ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳವರೆಗಿನ ಅವಧಿಯನ್ನು ಮಳೆಗಾಲವೆಂದು ಹಾಗೂ ಅಕ್ಟೋಬರ್ ನವೆಂಬರ್ ತಿಂಗಳುಗಳ ಅವಧಿಯನ್ನು ಮಳೆಗಾಲೋತ್ತರ ಅವಧಿಯೆಂದು ವಿಭಾಗಿಸಬಹುದು.

ಜಿಲ್ಲೆಯಲ್ಲಿ ಮಳೆಯ ಪ್ರಮಾಣವು ಸರಾಸರಿ ವಾರ್ಷಿಕ 691.2 ಮಿ.ಮಿ ಆಗಿದೆ. ಜಿಲ್ಲೆಯ. ಪಶ್ಚಿಮ ಭಾಗದಲ್ಲಿ ಉಳಿದೆಡೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗುತ್ತದೆ. ಸಾಮಾನ್ಯವಾಗಿ ಏಪ್ರಿಲ್‌ನಿಂದ ನವೆಂಬರ್ ತಿಂಗಳಿನಲ್ಲಿ ಮಳೆಯಾಗಿರುತ್ತದೆ.[4] ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಬಂಗಾಳ ಕೊಲ್ಲಿಯಲ್ಲಿ ಉಂಟಾಗುವ ವಾಯುಭಾರದ ಕುಸಿತದಿಂದ ಜಿಲ್ಲೆಯಲ್ಲಿ ಕೆಲವೊಮ್ಮೆ ಮಳೆಯಾಗುತ್ತದೆ.

ಕಸುಬು ಮತ್ತು ಜಾತಿ ವರ್ಗಗಳು :- ಮಂಡ್ಯ ಜಿಲ್ಲೆಯ ಜನತೆಯ ಮುಖ್ಯ ಕಸುಬು ವ್ಯವಸಾಯ ಮತ್ತು ಹೈನುಗಾರಿಕೆ, ರೇಷ್ಮೆ ಸಾಕಾಣಿಕೆ, ಅಲ್ಲದೆ ಕುರಿ ಸಾಗಣಿಕೆ, ಕೋಳಿ ಸಾಗಣಿಕೆ, ಮುಖ್ಯವಾಗಿದೆ. ಆದರೆ ಜಿಲ್ಲೆಯ ಜನರ ಮುಖ್ಯ ಕಸುಬು ವ್ಯವಸಾಯವಾಗಿದೆ. ಜಿಲ್ಲೆಯಲ್ಲಿ ಹಲವಾರು ಜಾತಿ ವರ್ಗಗಳನ್ನು ನೋಡಬಹುದು. ಅವುಗಳಲ್ಲಿ ಒಕ್ಕಲಿಗರು, ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಹಾಗೆಯೇ ಲಿಂಗಾಯಿತರು, ಬೆಸ್ತರು, ದಲಿತರು, ಮುಸ್ಲಿಂರು, ಕ್ರಿಶ್ಚಿಯನ್ನರು, ಕಮ್ಮಾರ , ಕುಂಬಾರ, ಚಮ್ಮಾರ, ಬ್ರಾಹ್ಮಣರು ಇನ್ನು ಮುಂತಾದ ಜಾತಿ ವರ್ಗಗಳನ್ನು ಕಾಣಬಹುದು.

ಮೈದಾನ ಪ್ರಾಂತ್ಯದಿಂದ ಮಂಡ್ಯ ಜಿಲ್ಲೆಯಾಗಿ 1939 ಜುಲೈ 1 ರಂದು ಮಂಡ್ಯ ಜಿಲ್ಲೆಯಾಗಿ ಹೆಸರಾಯಿತು. ಮೇಲೆ ಹೇಳಿದ ರೀತಿಯಲ್ಲಿ ಮಂಡ್ಯ ಜಿಲ್ಲೆ ಭೌಗೋಳಿಕವಾಗಿ ಮೇಲಿನಂತೆ ಹೊಂದಿ ಇಂದಿಗೂ ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಯಾಗಿದೆ ಎನ್ನಬಹುದು.

2.2 ಮಂಡ್ಯ ಜಿಲ್ಲೆಯ ಚಾರಿತ್ರಿಕ ಹಿನ್ನಲೆ

(ಪ್ರಾಚೀನ ಕಾಲದಿಂದ 1950 ಕಾಲದವರೆಗೆ)

ಭೌಗೋಳಿಕವಾಗಿ ಬಹುತೇಕ ಸಮತಟ್ಟಾದ ಬಯಲು ಪ್ರದೇಶವನ್ನುಳ್ಳ ಈ ಜಿಲ್ಲೆಯು ಬಹಳಷ್ಟು ಮಟ್ಟಿಗೆ ಶುದ್ಧ ವಾತಾವರಣವನ್ನು ವ್ಯಕ್ತಪಡಿಸುತ್ತದೆ. ಆದರೆ ಈ ಜಿಲ್ಲೆಯಲ್ಲಿ ಪ್ರವಹಿಸುವ ನದಿಗಳಿಂದಾಗಿ ಜಿಲ್ಲೆಯ ಆರ್ಥಿಕವಾಗಿ ಸಂಪದ್ಭರಿತವಾಗಿದೆ. ಈ ಪ್ರದೇಶವು ಪ್ರಾಚೀನ ಕಾಲದಿಂದಲೂ ಮಾನವ ನಾಗರೀಕತೆಯ ವಿಕಾಸಕ್ಕೆ ಯೋಗ್ಯಸ್ಥಾನವೆಂದು ಪರಿಗಣಿಸಲ್ಪಟ್ಟಿದೆ. ಈ ಜಿಲ್ಲೆಯಲ್ಲಿ ದೊರಕಿರುವ ಪೂರ್ವೋತಿಹಾಸದ ನೆಲೆಗಳು ತೀರ ವಿರಳವಾದರೂ ಪಾಂಡವಪುರ ತಾಲ್ಲೂಕಿನಲ್ಲಿ ಬೆಳಕಿಗೆ ಬಂದಿರುವ ಹೊಸ ಶಿಲಾಯುಗದ ನೆಲೆಗಳು ಗಮನಾರ್ಹವಾಗಿದೆ. ಪಾಂಡವಪುರ ಬಳಿಯ ಕುಂತಿ ಬೆಟ್ಟ ಮತ್ತು ಶ್ರೀರಂಗಪಟ್ಟಣ, ಬೆಳಕವಾಡಿ, ಮುತ್ತತ್ತಿ ಮುಂತಾದೆಡೆ ಪ್ರಾಗೈತಿಹಾಸಿಕ ನೆಲೆಗಳು ಪತ್ತೆಯಾಗಿದೆ. ಹಳೇ ಶಿಲಾಯುಗ, ನವಶಿಲಾಯುಗ, ಕಬ್ಬಿಣಯುಗ, ಮತ್ತು ಆದಿ ಇತಿಹಾಸಕಾಲ (ಕ್ರಿ.ಪೂ. 500 ರ ನಂತರ) ಸಂಸ್ಕೃತಿಗೆ ಸೇರಿದ ಅವಶೇಷಗಳು ಕುಂತಿಬೆಟ್ಟದಲ್ಲಿ ಶೋಧಿಸಲಾಗಿದೆ. ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕಲ್ಲಿನ ಸೂಕ್ಷ್ಮ ಉಪಕರಣಗಳನ್ನು ಶ್ರೀರಂಗಪಟ್ಟಣ ದಲ್ಲಿ ಪತ್ತೆ ಹಚ್ಚಲಾಗಿದೆ. ಅಗಸ್ತ್ಯ, ಕಣ್ವ, ಗೌತಮ, ಮುಂತಾದ ಮಹಾನ್ ಋಷಿಗಳ ತಪೋಭೂಮಿಯಾಗಿತ್ತೆಂದು ರಾಮಾಯಣ, ಮಹಾಭಾರತಗಳ ಮಹಾನ್ ವ್ಯಕ್ತಿಗಳು ಶ್ರೀರಂಗಪಟ್ಟಣದಲ್ಲಿ ಕೆಲವು ಕಾಲ ಸಂಚರಿಸಿ ತಂಗಿದ್ದರೆಂದು ನಂಬಿಕೆಯಿದೆ.[5]

ಪೌರಾಣಿಕ ಹಿನ್ನಲೆ :- ಸ್ಥಳಪುರಾಣದ ಪ್ರಕಾರ ಮಂಡ್ಯ ನಗರವಿರುವ ಪ್ರದೇಶವು ಕೃತಯುಗದಲ್ಲಿ ಮಹಾರಣ್ಯವಾಗಿದ್ದು, ಇಲ್ಲಿ ತಪ್ಪನ್ನು ಮಾಡುತ್ತಿದ್ದ ಮುನಿಯೋರ್ವನು ಜನಾರ್ಧನ ಅಥವಾ ವರದರಾಜ ಮೂರ್ತಿಯನ್ನು ಪ್ರತಿಷ್ಠಾಪಿಸಿ ಒಂದು ದೇವಾಲಯವನ್ನು ನಿರ್ಮಿಸಿದನೆಂಬ ನಂಬಿಕೆ ಇದೆ. ಪೌರಾಣಿಕ ಕತೆಯ ಪ್ರಕಾರ ದ್ವಾಪರ ಯುಗದಲ್ಲಿ ಸಂತನಾಪೇಕ್ಷೆಯಿಂದ ಈ ಸ್ಥಳಕ್ಕೆ ಬಂದು ಪೂಜಾ ಕೈಂಕರ್ಯದಲ್ಲಿ ತೊಡಗಿದ್ದ ಇಂದ್ರವರ್ಮ ದೊರೆಯು ತನಗೆ ಪರಿಶೋದ್ಧಾರಕ ಪುತ್ರನು ಜನಿಸಿದಾಗ ಆಶಿಶುವಿಗೆ ಸೋಮವರ್ಮನೆಂದು ನಾಮಕರಣ ಮಾಡಿದನು. ನಂತರ ಆ ಸೋಮವರ್ಮನು ಈ ಪ್ರದೇಶವು ಒಂದು ಅಗ್ರಹಾರವಾಗಿ ಮಾರ್ಪಡಿಸಿ ಊರಿನಲ್ಲಿ ಕೋಟೆಯನ್ನು ಕಟ್ಟಿಸಿ ಅದಕ್ಕೆ ಮಂಡೇವೇಮು ಅಥವಾ ಮಂಡೆಯ ಅಭಿಪ್ರಾಯವಿದೆ. ಈ ಪ್ರದೇಶವು ಹಿಂದೆ ಮಾಂಡವ್ಯ ಋಷಿಗಳ ವಾಸಸ್ಥಾನವಾಗಿದ್ದು ಅಲ್ಲಿರುವ

ಲಕ್ಷ್ಮಿ ಜನಾರ್ಧನ ಹಾಗೂ ಸಕಲೇಶ್ವರ ಮೂರ್ತಿಗಳನ್ನು ಮಾಂಡವ್ಯರೇ ಪ್ರತಿಷ್ಠಾಪಿಸಿದರೆಂದು ನಂಬಿಕೆಯಿಂದೆ. ಮಾಂಡವ್ಯ ಮುನಿಗಳಿಂದಾಗಿ ಅದಕ್ಕೆ ಮಂಡೆಯಾ ಎಂಬ ಹೆಸರು ಬಂತೆಂದು ಸ್ಥಳ ಪುರಾಣವು ತಿಳಿಸುತ್ತದೆ. ಇತರೆ ಕಥನಗಳ ಪ್ರಕಾರ ಈ ಜಿಲ್ಲೆಯು ಕದಂಬ ಕಣ್ವ ಮಹಾಋಷಿಗಳ ತಪೋಭೂಮಿಯಾಗಿತೆಂಬ ಪ್ರತೀತಿಯಿದೆ. ಮದ್ದೂರು ಕಂದಬ ಋಷಿಗಳ ಆಶ್ರಮವಾಗಿತೆಂದು ಹಾಗೂ ಆ ಊರಿಗೆ ಕದಂಬ ಕ್ಷೇತ್ರ, ಅರ್ಜುನಪೂರಿ ಎಂಬ ಹೆಸರಿದ್ದು, ಕಣ್ವ ಋಷಿಯ ಹೆಸರಿನಿಂದ ಈ ಪ್ರದೇಶಕ್ಕೆ ಕಣ್ವಪುರಿ (ಈಗಿನ ಕನ್ನಂಬಾಡಿ) ಎಂದು ಗೌತಮ ಋಷಿಯ ನಿವಾಸ ಸ್ಥಳವಾಗಿದ್ದ ಪ್ರದೇಶವನ್ನ ಪಾಂಡವಪುರವೆಂದು ಕರೆದಿರುವುದು ವ್ಯಕ್ತವಾಗುತ್ತದೆ. ತಮ್ಮ ವನವಾಸ ಸಯಮದಲ್ಲಿ ಪಾಂಡವರು ಇಲ್ಲ ಸ್ವಲ್ಪ ಕಾಲ ವಾಸವಾಗಿದ್ದರಿಂದ ಇಲ್ಲಿ ಭೀಮಾ ಬಕಾಸುರನನ್ನು ಸಂಹಾರ ಮಾಡಿದ ಸ್ಥಲ ಇದೇ ಎಂದು ನಂಬಲಾಗಿದೆ (ಚಿಕ್ಕಾಡೆ) ಪಾಂಡವಪುರ ಹೀಗೆ ತನ್ನ ಹಿನ್ನಲೆಯಲ್ಲಿ ಹೊಂದಿರುವ ಕುಂತಿಬೆಟ್ಟವು ಮಹಾಭಾರತದೊಂದಿಗೆ ತನ್ನ ಸಂಬಂಧಪಟ್ಟ ಥಳಕುಹಾಕಿಕೊಂಡಿದೆ.

ಈ ಜಿಲ್ಲೆಯ ಪ್ರಮುಖ ಶ್ರೀ ವೈಷ್ಣವ ಕೇಂದ್ರವಾದ ಮೇಲುಕೋಟೆಯ ಚತುರ ಯುಗಗಳಲ್ಲೂ ಮಹತ್ವ ಪಡೆದಿದೆ.ಪುರಾಣ ಪ್ರಸಿದ್ಧ ಪುರುಷರಿಂದ ಆರಾಧಿಸಲ್ಪಟ್ಟಿರುವ ಅಂಶವನ್ನು ಇಲ್ಲಿರುವ ಸ್ಥಳ ಪುರಾಣಗಳು ದಾಖಲಿಸಿವೆ. ವಿಶಿಷ್ಟಾದ್ವೈತದ ಪ್ರತಿಪಾದಕರಾದ ಶ್ರೀ ರಾಮಾನುಜಾಚಾರ್ಯರು ಇಲ್ಲಿ ಬಂದು ನೆಲೆಸಿದ್ದರು. ರಾಮಾನುಜಾಚಾರ್ಯರು ಮೇಲುಕೋಟೆಯ ಸಮೀಪದಲ್ಲಿರುವ ತೊಂಡನೂರಿನಲ್ಲಿ ತಮ್ಮ ಪ್ರೌಢ ದಿನಗಳನ್ನು ಕಳೆದಿದ್ದರು. ನಂತರ ಅವನು ತಿರುಪತಿಯ ಮೂಲಕ ಕಂಚಿಗೆ ಪ್ರಯಾಣ ಮಾಡಿದರೆಂಬ ನಂಬಿಕೆಯಿದೆ. ಮುತ್ತತ್ತಿ ಜಿಲ್ಲೆಯ ಕಾವೇರಿ ತೀರದಲ್ಲಿರುವ ಒಂದು ಧಾರ್ಮಿಕ ಕೇಂದ್ರವಾಗಿದೆ. ಲಂಕೆಯಿಂದ ಹಿಂದಿರುಗುವಾಗ ರಾಮ, ಲಕ್ಷ್ಮಣ ಸೀತೆ, ಹಾಗೂ ಆಂಜನೇಯ ಇಲ್ಲಿ ಸ್ವಲ್ಪಕಾಲ ತಂಗಿದ್ದರೆಂದು ಸ್ಥಳ ಪುರಾಣ ತಿಳಿಸುತ್ತದೆ. ಈ ಪುರಾಣದ ಪ್ರಕಾರ ಸೀತೆಯು ಕಾವೇರಿ ನದಿಯಲ್ಲಿ ಸ್ನಾನ ಮಾಡುವಾಗ ಅವಳ ಮೂಗುತಿ ನೀರಿನಲ್ಲಿ ಬಿದ್ದು ಹೋಗಿದ್ದರಿಂದ ಸೀತೆ ನೋವುಂಟಾಯಿತು. ಕಡೆಗೆ ಆಂಜನೇಯ ನೀರಿನಲ್ಲಿ ಮುಳುಗಿ ಈ ಮುತ್ತನ್ನು ಹುಡುಕಿ ತಂದನು. ಆಗ ಸೀತೆ ಅವನನ್ನು ಹರಸಿ ಈ ಕ್ಷೇತ್ರವು ಮುತ್ತು ಎತ್ತಿ (ಮುತ್ತತ್ತಿ) ತಂದ ಹನುಮಂತನ ಕ್ಷೇತ್ರವೆಂದು ಪ್ರಸಿದ್ಧಿ ಪಡೆಯಲೆಂದು ನುಡಿದಳೆಂದು ಪ್ರತೀತಿ ಇದೆಯ ಈಗ ಇಲ್ಲೊಂದು ಆಂಜನೇಯ ದೇವಾಲಯವಿದ್ದು, ಅದನ್ನು ಮತ್ತತ್ತಿ ರಾಯ ಎಂದು ಕರೆಯಲಾಗಿದೆ.

ಹೇಮಗಿರಿಯ ಹೇಮಾವತಿ ತೀರದ ಒಂದು ಧಾರ್ಮಿಕ ಕೇಂದ್ರವಾಗಿದ್ದು, ಎತ್ತರದ ಬೆಟ್ಟದ ಮೇಲೆ ರಂಗನಾಥ ದೇವಾಲಯವಿದೆ. ಇಲ್ಲಿಯ ಸ್ಥಳ ಪುರಾಣದ ಪ್ರಕಾರ ಮಹಾ ವಿಷ್ಣು ವೈಕುಂಠದಲ್ಲಿ ಬೇಸರವಾದಾಗ ಕೆಲವು ಕಾಲ ಇಲ್ಲಿ ಬಂದು ವಿಶ್ರಾಂತಿ ಪಡೆದ ಕಾರಣ ಇದನ್ನು ಪುಣ್ಯಕ್ಷೇತ್ರವೆಂದು ಕರೆಯಲಾಗಿದೆ.ಮಾರೇಹಳ್ಳಿ ಲಕ್ಷ್ಮಿ ನರಸಿಂಹನನ್ನು ಹಿಂದೆ ಗಜಾರಣ್ಯದಲ್ಲಿ ಲಂಬ-ಕರ್ಣರೆಂಬ ಮುನಿಗಳು ಪ್ರತಿಸ್ಥಾಪಿಸಿದರೆಂದು ನಂಬಿಕೆ ಇದೆ. ಮಳವಳ್ಳಿಯ ಸಮೀಪದ ಕುಂದೂರು ಬೆಟ್ಟವು ಹಿಂದೆ ಕಶ್ಯಪ ಹಾಗೂ ಅಗಸ್ತ್ಯ ಋಷಿಗಳ ಆಶ್ರಮವಿದ್ದ ಸ್ಥಳವೆಂಬ ನಂಬಿಕೆಯಿದೆ. ನಾಗಮಂಗಲವು ಪುರಾಣ ಪ್ರಸಿದ್ಧ ಸ್ಥಳ ಬಭ್ರುವಾಹನನೊಂದಿಗೆ ಸಂಬಂಧ ಹೊಂದಿದ್ದು, ಸಮೀಪದ ಆಲತ್ತಿ (ಹಾಲ್ತಿ) ಗಿರಿಯ ಪರಶುರಾಮ ಕ್ಷೇತ್ರವಾಗಿತೆಂಬ ದಂತ ಕಥೆಯಿದೆ.'

<u>ಇತಿಹಾಸ ಪೂರ್ವಕಾಲ :-</u>ಪರಿಸರಾತ್ಮಕವಾಗಿ ಪೂರ್ವೇತಿಹಾಸದ ಅಧ್ಯಯನವು ಹಿಂದಿನಿದಲೂ ಮಹತ್ವವನ್ನು ಪಡೆದಿರುವುದರಿಂದ ಇತಿಹಾಸದ ಈ ಹಂತವು ಹೆಚ್ಚು ಆಸಕ್ತಿಯುತವಾಗಿದೆ. ಮನುಕುಲದ ಇತಿಹಾಸ ಹಾಗೂ ಸಂಸ್ಕೃತಿಯ ಬಗ್ಗೆ ಅಧ್ಯಯನ ನಡೆಸುವವರಿಗೆ ಪರಿಸರದ ಪ್ರಾಮುಖ್ಯತೆಯ ಬಗ್ಗೆ ಹೆಚ್ಚಿನ ಅರಿವುಂಟಾಗುತ್ತದೆ. ಭೌಗೋಳಿಕವಾಗಿ ವಿವಿಧ ಪರಿಸರದಲ್ಲಿ ನೆಲೆಸಿರುವ ಮಾನವರು ತಮ್ಮದೆ ಆದ ವೈಶಿಷ್ಟತೆಯನ್ನು ಹೊಂದಿದ್ದದ್ದು ಗೋಚರವಾಗುತ್ತದೆ. ನವದಿಯ ತೀರಗಳಲ್ಲಿ ಲಭ್ಯವಿರುವ ಮೃದುವಾದ ಕಲ್ಲುಗಳು ಆದಿ ಮಾನವರಿಗೆ ಅವಶ್ಯಕವಾದ ಉಪಕರಣ ಸಾಧನಗಳಾದ್ದವು. ಹೀಗಾಗಿ ನದಿಯ ಕಣಿವೆಗಳಲ್ಲಿ ಪೂರ್ವೇತಿಹಾಸದ ನಿವೇಶನಗಳು ಅಧಿಕವಾಗಿ ಕಂಡು ಬರುತ್ತದೆ.

ಪೂರ್ವೇತಿಹಾಸದ ಕಾಲವನ್ನು ಅನುಕ್ರಮವಾಗಿ 1) ಹಳೇ ಶಿಲಾಯುಗ (ಪಾಲಿಯೋಲಿಥಿಕ), 2) ಸ್ಥಿತ್ಯಂತರ ಇಲ್ಲವೇ ಮಧ್ಯ ಶಿಲಾಯುವ (ಮಸೋಲಥಿಕ) 3) ನವಶಿಲಾಯುಗ (ನಿಯೋಲಿಥಿಕ) ಎಂದು ವಿಂಗಡಿಸಲಾಗಿದೆ.

ಹಳೇ ಶಿಲಾಯುಗವನ್ನು ಪುನಃ (ಅ) ಹಳೇ ಶಿಲಾಯುಗ (ಆ) ಮಧ್ಯಶಿಲಾಯುಗ, (ಇ) ಅಂತಿಮ ಹಳೇ ಶಿಲಾಯುಗ ಎಂದು ಅನುಕ್ರಮವಾಗಿ ಮೂರು ಹಂತಗಳನ್ನಾಗಿ ವಿಂಗಡಿಸಲಾಗಿದೆ. ಶಿಲಾಯುಗದ ಪ್ರತಿಯೊಂದು ಹಂತವನ್ನು ಅಂದಿನ ಜನರು ತಮ್ಮ ಕಲ್ಲಿನ ಉಪಕರಣಗಳನ್ನು ತಯಾರಿಸಲು ಬಳಸಿದ ತಂತ್ರಜ್ಞಾನಗಳ ಮತ್ತು ಅವುಗಳನ್ನು ಸಿದ್ಧಪಡಿಸಿದ ಉಪಕರಣಗಳ ಆಕೃತಿಗಳಿಗನುಗುಣವಾಗಿ ನಿರ್ಧರಿಸಲಾಗಿದೆ. ಪ್ರಾಚೀನ ಶಿಲಾಯುಗದ ಉಪಕರಣಗಳು ಮಂಡ್ಯ

ಜಿಲ್ಲೆಯಲ್ಲಿನ ಕಾವೇರಿ ದಂಡೆಯ ಮೇಲಿನ ಹಂಗರಹಳ್ಳಿಯಲ್ಲಿ ದೊರೆತಿದ್ದುದಾಗಿ ವಿದ್ವಾಂಸರಾದ ಶ್ರೀಪಾದರಾವ್ ಅವರು ವರದಿ ಮಾಡಿದ್ದಾರೆ. ಮಳವಳ್ಳಿ ತಾಲ್ಲೂಕಿನ ಹುಲ್ಲಂಬಳ್ಳಿಗೆ 2. ಕಿ.ಮೀ. ದೂರದಲ್ಲಿರುವ ಮರಳಹಳ್ಳಿಯಲ್ಲಿ (ಬೇಚಿರಾಕ) ಇಂಥದ್ದೇ ಒಂದು ಪ್ರಾಚೀನ ನೆಲೆಯಿರುವುದು ಕಂಡು ಬಂದಿದೆ. ಇಲ್ಲಿ ನೂತನ ಶಿಲಾಯುಗ (ಸು. ಕ್ರಿ.ಪೂ. 1800-700) ದ ನೆಲೆ ಮತ್ತು ಬೃಹತ್‌ಶಿಲಾ ಸಂಸ್ಕೃತಿ (ಸು.ಕ್ರಿ.ಪೂ. 400 ರಿಂದ ಕ್ರಿ.ಶ. 1ನೇ ಶತಮಾನದವರೆಗೆ) ಯ ಶಿಲಾ ಗೋರಿಗಳಿರುವುದು ಪತ್ತೆಯಾಗಿದ್ದು, ಇದನ್ನು ಜಿಲ್ಲೆಯ ಮೊದಲನೆ ಜನವಸತಿಯ ನೆಲೆಯೆಂದು ಗುರುತಿಸಲಾಗಿದೆ. ಈ ಜನರು ಉಪಯೋಗಿಸುತ್ತಿದ್ದ ಮಣ್ಣಿನ ಪಾತ್ರೆ ಮತ್ತು ಇತರೆ ಅವಶೇಷಗಳು ಹೇರಳವಾಗಿದ್ದು, ಅವುಗಳು ಕಾಲಕ್ರಮೇಣ ಬಹಳಷ್ಟು ಸವೆದು ಹೋಗಿರುವ ಅಂಶವು ಕಂಡು ಬಂದಿದೆ. ಈ ಸಂಸ್ಕೃತಿಯ ವಿಶಿಷ್ಟವಾದ ಮೃತ್ಪಾತ್ರೆ ಚೂರುಗಳನ್ನು ಗುರುತಿಸಲೂ ಸಾಧ್ಯವಾಗಿದೆ. ನೂತನ ತಾಮ್ರಮಯುಗದ ಮತ್ತೊಂದು ಅತಿ ವಿಶಿಷ್ಟ ಕಪ್ಪು ಕಲ್ಲಿನ ಕೊಡಲಿಗಳನ್ನು ಈ ನೆಲೆಯಲ್ಲಿ ಪತ್ತೆ ಹಚ್ಚಲಾಗಿದೆ. ಈ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗದ ಆರಂಭಕಾಲದ ಹಲವಾರು ನೆಲೆಗಳನ್ನು ಶೋಧಿಸಲಾಗಿದ್ದು, ಬೆಳಕವಾಡಿಯ ಬಳಿಯಲ್ಲಿ ಇಂತಹ ಒಂದು ನಿರ್ದೇಶನವನ್ನು ಪತ್ತೆ ಹಚ್ಚಲಾಗಿದೆ. ಕಳೆದ ಶತಮಾನದ ಕಡೆಯ ವಾರದಲ್ಲಿ ರಾಬರ್ಟ್ ಬ್ರೂಸ್‌ಫೂಟ್ ಈ ಪ್ರದೇಶದಲ್ಲಿ ಪರಿವೀಕ್ಷಣಾ ಕಾರ್ಯವನ್ನು ಕೈಗೊಂಡು ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಅವಶೇಷಗಳನ್ನು ಪತ್ತೆ ಹಚ್ಚಲಾಗಿದೆ. ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಹಲಗೂರಿನಲ್ಲಿ ಬೃಹತ್ ಶಿಲಾಯುಗದ ಎರಡು ಶಿಲಾಗೋರಿಗಳಿರುವ ಅಂಶ ಹಾಗೂ ಕಲ್ಲು ವೃತ್ತಗಳಿರುವುದನ್ನು ಪುರಾತತ್ವ ಶಾಸ್ತ್ರಜ್ಞ ಕೆ.ಆರ್. ಶ್ರೀನಿವಾಸನ್ ಅವರು ದಕ್ಷಿಣ ಭಾರತದ ಬೃಹತ್‌ಶಿಲಾಯುಗ ಸರ್ವೇಕ್ಷಣ (ಪುಟ 102-115) ಎಂಬ ಗ್ರಂಥದಲ್ಲಿ ವರದಿ ಮಾಡಿರುತ್ತಾರೆ. ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿರುವ ಕುಂತಿಬೆಟ್ಟದ ಪರಿಸರವು ನವಶಿಲಾಯುಗ ಮತ್ತು ಬೃಹತ್‌ಶಿಲಾಯುಗಗಳ ಅವಶೇಷಗಳನ್ನು ಹೊಂದಿರುವ ಅಂಶವನ್ನು ಪುರಾತತ್ವ ಶಾಸ್ತ್ರಜ್ಞ ರಾಬರ್ಟ್ ಬ್ರೂಸ್ ಫೂಟು ಅವರು ಶೋಧಿಸಿರುವರು.[7]

ಕುಂತಿ ಬೆಟ್ಟದ ಪೂರ್ವೇತಿಹಾಸದ ನೆಲೆ

ಪಾಂಡವಪುರಕ್ಕೆ ಟಿಪ್ಪುಸುಲ್ತಾನನ ಕಾಲದಲ್ಲಿ ಫ್ರೆಂಚ್ ರಾಕ್ಸ್ ಎಂದು ಹೆಸರು. ಪಾಂಡವಪುರ ತಾಲ್ಲೂಕಿಗೆ ಸೇರಿದ ಕುಂತಿಬೆಟ್ಟವು ಸಮುದ್ರಮಟ್ಟಕ್ಕಿಂತ 2882 ಅಡಿಗಳಷ್ಟು ಎತ್ತರದಲ್ಲಿದೆ. ಇದು ಉತ್ತರದಿಂದ ದಕ್ಷಿಣಕ್ಕೆ ಚಾಚಿಕೊಂಡಿದೆ.ಈ ಬೆಟ್ಟದ ನಡುವೆಯಿರುವ ಚಿಕ್ಕಕೋಡಿನಿಂದ ಬೇರ್ಪಟ್ಟು ಎರಡು ಪ್ರತ್ಯೇಕ ಶಿಖರಗಳಿಂದ ಕೂಡಿದೆ. ಅವುಗಳಲ್ಲಿ ಅಕ್ಕತಂಗಿ ಬೆಟ್ಟ (ಕುಂತಿಬೆಟ್ಟ) ಮತ್ತು ವನಕೆ ಬೆಟ್ಟವೆಂದು ಸ್ಥಳೀಯವಾಗಿ ಕರೆಯಲಾಗುತ್ತದೆ. ಈ ಬೆಟ್ಟದಲ್ಲಿ ನೈಸರ್ಗಿಕ ಗೃಹಗಳಿದ್ದು, ಪ್ರಾಚೀನ ಮಾನವನ ವಾಸಕ್ಕೆ ಅನುಕೂಲವಾಗಿತ್ತು. ಡಾ॥ ಎಂ.ಎಸ್. ಕೃಷ್ಣಮೂರ್ತಿ ಅವರು ನಡೆಸಿರುವ ಸಂಶೋಧನೆಯ ಪ್ರಕಾರ ಇಲ್ಲಿಂದ ಗುಹೆಯೊಂದರಲ್ಲಿ ಅವರಿಗೆ ಆದಿ ಶಿಲಾಯುಗದ ವಸ್ತುಗಳು ಮತ್ತು ನವಶಿಲಾಯುಗದ ಮಡಿಕೆ ಚೂರುಗಳು ದೊರೆತಿವೆ.

ಕುಂತಿ ಬೆಟ್ಟದಲ್ಲಿ ಆದಿ ಶಿಲಾಯುಗ ಮತ್ತು ಮಧ್ಯಶಿಲಾಯುಗದ ಕಲ್ಲಿನ ಉಪಕರಣಗಳು ಕಂಡು ಬಂದಿದೆ. ಅವುಗಳೆಂದಂದರೆ, ಕೈಗೊಡಲಿ, ಸ್ಕ್ರೇಪರ್ , ಡಿಸ್ಕಾಯ್ಡ್ ಮತ್ತು ಫ್ಲೇಕ್ಸ್‌ಗಳು ಇವುಗಳನ್ನು ಬೆಣಚು ಕಲ್ಲಿನಿಂದ ತಯಾರಿಸಿರುವ ಅಂಶ ವ್ಯಕ್ತವಾಗುತ್ತದೆ. ಈ ಆಯುಧಗಳಷ್ಟು ನಂತರ ಕಾಲದಲ್ಲಿ ಉಜ್ಜಿ ನುಣುಪಾಗಿಸಿರುವುದು ಕಂಡು ಬರುತ್ತದೆ. ಫ್ಲೇಕ್ ಮತ್ತು ಕೋರ್‌ಗಳ ಕಾಲಮಾನವನ್ನು ಮಧ್ಯ ಆದಿ ಶಿಲಾಯುಗವೆಂದು ಗುರುತಿಸಬಹುದಾಗಿದೆ. ಈ ವಸ್ತುಗಳಲ್ಲದೆ ಅಗ್ನಿಶಿಲೆ ಮತ್ತು ಬೆಣಚು ಕಲ್ಲುಗಳಲ್ಲಿ ಮಾಡಿದ, ಕೆಲವು ಗುಂಡುಗಳೂ ದೊರೆತಿದೆ. ಈ ಪರಿಸರದಲ್ಲಿ ಸರ್ವೇಕ್ಷಣೆ ಕೈಗೊಂಡಿದ್ದ ರಾಬರ್ಟ್‌ಬ್ರೂಸ್‌ಫ್ರೂಟ್‌ನು ನವಶಿಲಾಯುಗದ ಉಪಕರಣಗಳನ್ನು ಸಂಗ್ರಹಿಸಿದ್ದನು.[8]

ಈ ಪರಿಸರದಲ್ಲಿ ಅಪಾರವಾಗಿ ಕಂಡುಬರುವ ಮಡಕೆಯ ಚೂರುಗಳಿಂದ ಇಲ್ಲಿ ಪೂರ್ವೇತಿಹಾಸ ಸಂಸ್ಕೃತಿಯು ಹಿಂದೆ ಅಸ್ತಿತ್ವದಲ್ಲಿದ್ದ ಅಂಶವನ್ನು ಸಮರ್ಥಿಸಬಹುದಾಗಿದೆ. ಆದರೆ ಒಂದಾದರೂ ಬೃಹತ್ ಶಿಲಾ ಸಮಾಧಿಯು ಈ ಪರಿಸರದಲ್ಲಿ ಸಿಕ್ಕಿಲ್ಲದಿರುವುದು ಆಶ್ಚರ್ಯಕರವಾಗಿದೆ. ಸಾಮಾನ್ಯವಾಗಿ ಈ ಸಮಾದಿಗಳು ಸಹಜವಾಗಿಯೇ ನಿವಾಸಗಳಿಂದ ದೂರವಿರುವುದರಿಂದಲೂ ಹಾಗೂ ಈ ಆವರಣದಲ್ಲಿ ಕೃಷಿ ಚಟುಟಿಕೆ ನಡೆಯುತ್ತಿರುವ ಕಾರಣದಿಂದಲೂ ಈ ಸಮಾದಿಗಳು ನೈಸರ್ಗಿಕವಾಗಿ ನಾಶಕೊಂಡಿರಬೇಕೆಂಬ ಅಭಿಪ್ರಾಯವಿದೆ. ಈ ಸಂಸ್ಕೃತಿಯ ವಿಶಿಷ್ಟವೆನಿಸಿದ ಕಪ್ಪು ಮಡಿಕೆ, ಕಪ್ಪು ಮಿಶ್ರಿತ ಕೆಂಪು ಮಡಿಕೆ ಮತ್ತು ಕೆಂಪು

ಮಡಿಕೆಗಳನ್ನು ಚೆನ್ನಾಗಿ ಹದಮಾಡಿದ ಜೇಡಿ ಮಣ್ಣಿನಿಂದ ತಯಾರಿಸಲಾಗಿರುವುದು ಕಂಡು ಬರುತ್ತದೆ. ಇವುಗಳನ್ನು ಚೆನ್ನಾಗಿ ಸುಟ್ಟಿರುವುದರಿಂದ ಕೆಲವು ಮಡಿಕೆಗಳು ಸಾಕಷ್ಟು ಹೊಳಪುಳ್ಳದ್ದಾಗಿವೆ.

ಹಾಗೆಯೇ ಶ್ರೀರಂಗಪಟ್ಟಣದ ಸೂಕ್ಷ್ಮ ಶಿಲಾಯುಗದ ಉಪಕರಣಗಳನ್ನು ಕಾರ್ಖಾನೆಯು ಇದುದ್ದರಿಂದ ಬಗ್ಗೆ ಸಿ. ಮಹದೇವ್ ವರದಿ ಮಾಡಿದ್ದಾರೆ. ಆದರಿಂದ ಮಂಡ್ಯ ಜಿಲ್ಲೆಯ ಆದಿ ಶಿಲಾಯುಗದ ಪೂರ್ವದಿಂದಲೂ ಮಾನವ ವಾಸಕ್ಕೆ ಯೋಗ್ಯವಾಗಿದ್ದುದೆಂದು ಕುಂತಿ ಬೆಟ್ಟದ ಉದಾಹರಣೆಯಿಂದ ಹೇಳಬಹುದಾಗಿದೆ. ಈ ನೆಲೆಯು ಆದಿಶಿಲಾಯುಗದಿಂದ ಇಂದಿನವರೆಗೆ ಅಳಿಯದೆ ಟೀಕ ಪ್ರಕಾರದ ಸಾಂಸ್ಕೃತಿಕ ಸನ್ನಿವೇಶವನ್ನು ಇನ್ನೂ ಉಳಿಸಿಕೊಂಡು ಬಂದಿರುವ ಒಂದು ಅಪರೂಪದ ನಿವೇಶನವಾಗಿದೆ.

ಬೃಹತ್ ಗಾತ್ರದ, ಬಾರವಾದ, ಕಲ್ಲುಚಪ್ಪಡಿಗಳನ್ನು ಉಪಯೋಗಿಸಿ ಸಮಾಧಿಗಳನ್ನು ನಿರ್ಮಿಸುವ ನೂತನ ಪದ್ಧತಿಯನ್ನು ಆರಂಭಿಸಿದ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ವಿವಿಧ ರೀತಿಯ ಶವಸಂಸ್ಕಾರ ಪದ್ಧತಿಯನ್ನು ಅನುಸರಿಸುತ್ತಿದ್ದು, ಜಿಲ್ಲೆಯ ಮರಳಹಳ್ಳಿ, ಬೆಳಕವಾಡಿ, ಮುತ್ತತ್ತಿ, ಹಲಗೂರು , ಕುಂತಿಬೆಟ್ಟ, ಶೆಟ್ಟಹಳ್ಳಿ ಸಣಬಕೊಪ್ಪಲು, ತೊಣ್ಣೂರು, ಮೇಲುಕೋಟೆ, ಹೊಸಕೋಟೆ ಮತ್ತು ಸಿರಗನಹಳ್ಳಿಗಳಲ್ಲಿ ಈ ಸಂಸ್ಕೃತಿಯ ಕುರುಹುಗಳನ್ನು ಸಂಶೋಧಕರು ಪತ್ತೆ ಹಚ್ಚಿದ್ದಾರೆ. ಹಲಗೂರು , ಸಣಬಕೊಪ್ಪಲುಗಳಲ್ಲ ಶಿಲಾ ಸಮಾಧಿಗಳು ಪತ್ತೆಯಾಗಿವೆ. ಮಂಡ್ಯ ತಾಲ್ಲೂಕಿನ ತೂಬಿನಕೆರೆ ಗುಡ್ಡದಲ್ಲಿ ಚಕ್ರವ್ಯೂಹದಂತಹ ಬಯಲು ಬಂಡೆ ರೇಖಾ ಚಿತ್ರವನ್ನು ಇತ್ತಿಚೆಗೆ ಪತ್ತೆ ಹಚ್ಚಲಾಗಿದೆ. ಜಿಲ್ಲೆಯ ಇನ್ನಷ್ಟು ಸ್ಥಳಗಳಲ್ಲಿ ಶಿಲಾಯುಗದ ಸಂಸ್ಕೃತಿಯ ಅವಶೇಷಗಳು ಪತ್ತೆಯಾಗುವ ಸಾಧ್ಯತೆಗಳಿವೆ. ಸಿಂಧಘಟ್ಟ ಬಳಿಯ ನಾರಾಯಣ ದುರ್ಗದ ಬೆಟ್ಟ ಶ್ರೇಣಿಯ ಮುದಿಬೆಟ್ಟದಲ್ಲಿರುವ ಹಲವಾರು ನೈಸರ್ಗಿಕ ಗವಿಗಳು ಶಿಲಾಯುಗ ಸಂಸ್ಕೃತಿಯ ಕುರುಹುಗಳನ್ನು ಹೊಂದಿರುವ ಸಾಧ್ಯತೆಗಳಿವೆ.'

ಮೌರ್ಯರ ಮತ್ತು ಶಾತವಾಹನರ ಕಾಲಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳಾಗಲಿ ಅಥವಾ ಅವಶೇಷಗಳ ನಿವೇಶನಗಳಾಗಿ ಮಂಡ್ಯ ಜಿಲ್ಲೆಯಲ್ಲಿ ಇದುವರೆಗೂ ದೊರೆತಿಲ್ಲ.

ಬನವಾಸಿಯ ಕದಂಬರು :- ಕರ್ನಾಟಕದಲ್ಲಿ ಶಾತವಾಹನರ ನಂತರ ಕನ್ನಡ ಪ್ರಥಮ ಸ್ವತಂತ್ರ ಕನ್ನಡ ಸಾಮ್ರಾಜ್ಯವೆಂದರೆ ಕದಂಬರು ಇವರು ಉತ್ತರ ಕನ್ನಡದ ಬನವಾಸಿಯಲ್ಲಿ ಕ್ರಿ.ಶ. 325 ರಲ್ಲಿ ಕದಂಬ ವಂಶದ ಸ್ಥಾಪನೆಯಾಯಿತು. ಕದಂಬ ರಾಜ್ಯದ ಎಲ್ಲೆಯನ್ನು ಕಾವೇರಿ ನದಿಯ ತೀರದವರೆವಿಗೂ ವಿಸ್ತರಿಸಿದ್ದನು. ಇವರ ಕಾಲದಲ್ಲಿ ಗಂಗರು ದಕ್ಷಿಣದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಆದ್ದರಿಂದ ಕದಂಬರು ಈ ಕಡೆ ಬರಲಿಲ್ಲವೆಂದು ಹೇಳಬಹುದು.

ತಲಕಾಡಿನ ಗಂಗರು :- ತಲಕಾಡಿನ ಗಂಗರು ಕರ್ನಾಟಕದಲ್ಲಿ ದಕ್ಷಿಣ ಭಾಗದಲ್ಲಿ ಸುಮಾರು ನಾಲ್ಕನೇ ಶತಮಾನದ ಮಧ್ಯಭಾಗದಿಂದ ಹತ್ತನೇ ಶತಮಾನದ ಕೊನೆಯವರೆಗೂ ಆಳ್ವಿಕೆ ಮಾಡಿದರು. ಮೊದಲನೆ ಮಂಡ್ಯ ಜಿಲ್ಲೆಯಲ್ಲಿ ಗಂಗರ ಶಾಸನ ದೊರಕಿದ್ದು, ಶ್ರೀರಂಗಪಟ್ಟಣದಲ್ಲಿ ದೊರೆತಿರುವ ತಾಮ್ರಪಟದಲ್ಲಿ ಕೊಂಗುಣಿವರ್ಮದಿಂದ ಆರಂಭಗೊಂಡ ಗಂಗರ ವಂಶಾವಳಿಯನ್ನು ಕೊಡಲಾಗಿದೆ. ಹರಿವರ್ಮನ ಮಗ ವಿಷ್ಣುಗೋಪನನ್ನು ಹೆಸರಿಸಿರುವ ಈ ಶಾಸನದಲ್ಲಿ ತ್ರಿವಿಕ್ರಮನ ಮಗನನ್ನು ದುಗ್ಗನೆಂದು ಕರೆಯಲಾಗಿದೆ.[10]

ಮಂಡ್ಯ ತಾಲ್ಲೂಕಿನ ಹಲ್ಲೇಗೆರೆ ಶಾಸನವು ಮೊದಲನೆ ಶಿವಮಾದನ ಆಳ್ವಿಕೆಯ ಕಾಲದ ಪ್ರಥಮ ದಾಖಲೆಯಾಗಿದ್ದು, ಶಿವಮಾದನು ಅಧಿಕಾರಕ್ಕೆ ಬಂದ. ವರ್ಷವನ್ನು ಕರಾರುವಕ್ಕಾಗಿ ನಿರ್ಧರಿಸಲು ಸಹಾಯಕವಾಗುತ್ತದೆ. ಈ ಶಾಸನವು ಕ್ರಿ.ಶ. 713 ರ ತಾಮ್ರಪಟವಾಗಿದ್ದು, ಒಂದನೇ ಶಿವಮಾರನು ದುರ್ವಿನೀತನ ಆಳ್ವಿಯೆಕ ನೂರು ವರ್ಷಗಳ ನಂತರ ಪಟ್ಟಕ್ಕೆ ಬಂದುದರ ಬಗ್ಗೆ ಸ್ಪಷ್ಟವಾಗಿ ಉಲ್ಲೆಖಿಸುತ್ತದೆ. ಹಲ್ಲೆಗೆರೆ ಶಾಸನದಲ್ಲಿ ಕೆರಗೋಡು ವಿಷಯದ ವ್ಯಾಪ್ತಿಯಲ್ಲಿದ್ದ ಕೆರಗೋಡುನ್ನು ಒಳಗೊಂಡಂತೆ ಅದರ ಉತ್ತರಕ್ಕೆ ಅಸುಪಾಸಿನಲ್ಲಿದ್ದ ಕೊಳಗಳು, ಬೆಳ್ಕೆರೆ ಮೊದಲಾದ ಗ್ರಾಮಗಳನ್ನು ಸಂಪರ್ಕಿಸುವ ಸೇತುವೆಯ ನಿರ್ಮಾಣದ ಬಗ್ಗೆ ದಾಖಲಿಸಲಾಗಿದೆ. ಈ ಸಂದರ್ಭದಲ್ಲಿ ಪಲ್ಲವ ತಟಾಕ ಎಂದು ಪುನರ್ ನಾಮಕರಣ ಮಾಡಿದ ಗ್ರಾಮವನ್ನು ಮಾರಶರ್ಮನ ಮಗ ಮಾಧವಶರ್ಮ ಮತ್ತು ಆತನ ಮೊಮ್ಮಗ ಭಾವಶರ್ಮನಿಗೂ ದಾನ ನೀಡಿದ ಬಗ್ಗೆ ಶಾಸನವು ಉಲ್ಲೇಖಿಸಿದೆ.[11]

ಶ್ರೀ ಪುರುಷನಿಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲೆಯಲ್ಲಿ 3 ಶಾಸನಗಳು ದೊರಕಿದೆ. ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ದೇವರಹಳ್ಳಿಯ ತಾಮ್ರ ಶಾಸನವು ಪ್ರಮುಖವಾಗಿದೆ. ಇದು ಸಂಸ್ಕೃತದಲ್ಲಿದ್ದು ಜಗಹಿತದೇವ ಎಂಬ ಇನ್ನೊಂದು ಹೆಸರು ಇರುವ ಬಗ್ಗೆ ಉಲ್ಲೇಖವಿದೆ.

ಮಳವಳ್ಳಿ ತಾಲ್ಲೂಕಿನ ಪೂರಿಗಾಲಿ ಗ್ರಾಮದ ಹೊಲವೊಂದರಲ್ಲಿರುವ ಶಾಸನದ ಪ್ರಕಾರ ಶ್ರೀ ಪುರುಷನ ಆಳ್ವಿಕೆಯ ಅವಧಿಯಲ್ಲಿ ತೊಂಗಾಣಿಕೆರೆ ಎಂದು ಕರೆದು ಕೆರೆಯನ್ನು ಕಟ್ಟಿದ ವಿವರಗಳಿದ್ದು, ಕುಂದಸೆಟ್ಟಿ ಎಂಬ ಅಧಿಕಾರಿಯು ವಡಗೆರೆ 300 ಎಂಬ ಆಡಳಿತ ವಿಭಾಗವನ್ನು ಹಾಗೂ ಮುದಗಂದೂರಿನ ಸಿಂಗದೇವರಸನು ಪುರ ಗ್ರಾಮವನ್ನು ಆಳುತ್ತಿದ್ದಾನೆಂದು ಈ ಶಾಸನವು ದಾಖಲಿಸಿದೆ.[12]

ಜಿಲ್ಲೆಯ ಶ್ರೀರಂಗಪಟ್ಟಣದ ಗಂಜಾಮ್ ತಾಮ್ರ ಶಾಸನದಲ್ಲಿ ಹರಿವರ್ಮನ ಮಗ ವಿಷ್ಣುಗೋಪನನ್ನು ಹೆಸರಿಸಿದ್ದು, ತ್ರಿವಿಕ್ರಮನ ಮಗ ದುಗ್ಗನೆಂದು ಹೆಸರಿಸಲಾಗಿದೆ. ಕ್ರಿ.ಶ. 796 ಆಲೂರಿನ ತಾಮ್ರ ಶಾಸನ ಗಂಗರ ಮಾರಸಿಂಹನ ಬಗ್ಗೆ ತಿಳಿಸುತ್ತದೆ. ಮದ್ದೂರು ತಾಲ್ಲೂಕಿನ ತಾಯಲೂರು (ತೈಲೂರು) ಗ್ರಾಮ ಶಾಸನ ಇದು ಇಮ್ಮಡಿ ರಾಚಮಲ್ಲನ ಬಗೆ ತಿಳಿಸುತ್ತದೆ (ಕ್ರಿ.ಶಂ. 895-96) ಪಾಂಡವಪು ತಾಲ್ಲೂಕಿನ ಮಲ್ಲಿಗೆರೆ ಗ್ರಾಮದ ಕ್ರಿ.ಶ. 906-07 ಶಾಸನವು ಇಮ್ಮಡಿ ರಾಚಮಲ್ಲ ಎದೆಯಚ್ಚರಸ ಬಗ್ಗೆ ತಿಳಿಸುತ್ತದೆ.[13]

ಒಟ್ಟಾರೆ ನರಸಿಂಹ, ಮುಮ್ಮಡಿ ರಾಚಮಲ್ಲ, ಇಮ್ಮಡಿ ಬೂತುಗ ಇಮ್ಮಡಿ ನರಸಿಂಹ, ಇಮ್ಮಡಿ ಶಿವಮಾರ ಇನ್ನಿತರ ರಾಜರು ಮಂಡ್ಯದ ವಿವಿಧ ಭಾಗದಲ್ಲಿ ಅವರ ಆಡಳಿತದ ಬಗ್ಗೆ ತಿಳಸುವ ಶಾಸನಗಳು ದೊರಕುತ್ತದೆ.

ಚೋಳರು :- ಚೋಳ ವಂಶದ ರಾಜರು ಈ ಭಾಗದಲ್ಲಿ ಆಳ್ವಿಕೆ ನಡೆಸಿದ ಬಗ್ಗೆ ಉಲ್ಲೇಖವಿದೆ. ಅವುಗಳನ್ನು ಶಾಸನಗಳ ಸಹಾಯದಿಂದ ಅವರ ಆಳ್ವಿಕೆಯ ಬಗ್ಗೆ ತಿಳಿಯಬಹುದು. ಜಿಲ್ಲೆಯಲ್ಲಿ ಚೋಳರ ರಾಜ ರಾಜನಿಂದ ಆರಂಭಗೊಂಡು ಮೊದಲನೆ ಕುಲೋತ್ತುಂಗನವರೆವಿಗೂ ಮುಂದುವರಿಯಿತು. ಜಿಲ್ಲೆಯ ಹಳೇ ಬೂದನೂರು ಶಾಸನವು ಗಂಗರ ಅರಸ ರಕ್ಕಸತಂಗನು 1004 ರಲ್ಲಿ ಚೋಳರ ರಾಜೇಂದ್ರನ ಮಾಂಡಲಿಕನಾಗಿದ್ದನೆಂದು ತಿಳಿಸುತ್ತದೆ. ಒಟ್ಟಾರೆಯಾಗಿ ಚೋಳರು ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಆಳ್ವಿಕೆ ನಡೆಸಿರುವ ಬಗ್ಗೆ ತಿಳಿಸುತ್ತದೆ.[13]

ಹೊಯ್ಸಳರು :- ಗಂಗರ ನಂತರ ಜಿಲ್ಲೆಯಲ್ಲಿ ಹೊಯ್ಸಳರು ಆಳಿದರು. ಇವರಿಗೆ ಸಂಬಂಧಿಸಿದಂತೆ ಕ್ರಿ.ಶ. 1291 ರ ಕೆ.ಆರ್.ಪೇಟೆ ತಾಲ್ಲೂಕಿನ ಅಗ್ರಹಾರ, ಬಾಚಹಳ್ಳಿಯ ಶಾಸನದಲ್ಲಿ ಮುನಿಯೋಬ್ಬನು ಹೊಯ್ಸಳ ಎಂದು ಕೂಗಿದ ತಕ್ಷಣ ಹೆಬ್ಬುಲಿಯನ್ನು ಸಳನು

ಕೊಂದನೆಂದು ಆದ್ದರಿಂದ ಈ ವಂಶಕ್ಕೆ ಹೊಯ್ಸಳ ಎಂದು ಹೆಸರು ಬಂದಿತು ಎಂಬ ಬಗ್ಗೆ ತಿಳಿಸುತ್ತದೆ.[14] ಈ ವಂಶದ ಪ್ರಥಮ ದೊರೆ ವಿನಿಯಾದಿತ್ಯಎಂದು ಖಚಿತ ಪಡಿಸುತ್ತದೆ. ಕೆ.ಆರ್.ಪೇಟೆ ತಾಲ್ಲೂಕಿನ ಮಾರಗೋನಹಳ್ಳಿ ವೀರಗಲ್ಲು ಶಾಸನ 1ನೇ ಬಲ್ಲಾಳನು ಗಂಗವಾಡಿ 96000 ಆಡಳಿತದ ವಿಭಾಗದ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸಿಕೊಂಡ ಬಗ್ಗೆ ವಿವರ ನೀಡುತ್ತದೆ. ಇದರ ನಂತರ ವಿಷ್ಣುವರ್ಧನ ಆಳ್ವಿಕೆಯ ಬಗ್ಗೆ ಜಿಲ್ಲೆಯಲ್ಲಿ ಶಾಸನಗಳು ದೊರಕಿವೆ. ಅಲ್ಲದೆ ಅವನು ಮಾಡಿಸಿದ ಅಭಿವೃದ್ಧಿ ಕಾರ್ಯದ ಬಗ್ಗೆ ತಿಳಿಯಬಹುದು. ಜಿಲ್ಲೆಯ ಮಾರಹಳ್ಳಿ ಶಾಸನದಿಂದ ಅವನು ಸತ್ತ ದಿನಾಂಕವನ್ನು ನಿರ್ಧಾರಿಸಲು ಸಾಧ್ಯವಾಗಿದೆ ಎನ್ನಬಹುದು. ಕೆ.ಆರ್. ಪೇಟೆ ತಾಲ್ಲೂಕಿನ ಮಾಳಗೂರು ಶಾಸನ ವಿಷ್ಣುವರ್ಧನ ಪಟ್ಟದ ರಾಣಿ ಶಾಂತಲೆಯು ತನ್ನ ಮೈದನ ನೆರವಿನಿಂದ ಮಾಳಿಗೆ ಎಂಬ ಆಡಳಿತ ವಿಭಾಗವನ್ನು ಆಳುತ್ತಿದ್ದ ಬಗ್ಗೆ ತಿಳಿಯಬಹುದು. ಮಂಡ್ಯ ಜಿಲ್ಲೆಯಲ್ಲಿಯೇ ಹೊಯ್ಸಳರ ಶಾಸನಗಳೇ ಹೆಚ್ಚು ಇಲ್ಲಿಯವರೆಗೂ 246 ಶಾಸನಗಳು ವರದಿಯಾಗಿದೆ. ವಿಷ್ಣುವರ್ಧನ ಸಹೋದರ ವಿನಿಯಾದಿತ್ಯನು ಕ್ರಿ.ಶ. 1120 ರ ಸುಮಾರಿಗೆ ಶ್ರೀರಂಗಪಟ್ಟಣದಲ್ಲಿ ಅಧಿಕಾರಿಯಾಗಿದ್ದು, ನಂತರ ಚೋಳರ ವಿರುದ್ಧ ಯುದ್ಧದಲ್ಲಿ ಹತನಾದನೆಂದು ತಿಳಿದುಬರುತ್ತದೆ. ಮಂಡ್ಯ ಜಿಲ್ಲೆಯ ತೊಣ್ಣೂರು ಹೊಯ್ಸಳರ ಕಾಲದಲ್ಲಿ ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತು. ತೊಣ್ಣೂರು ಅವರ ದ್ವಿತೀಯ ರಾಜಧಾನಿಯಾಗಿತೆಂಬ ಅಭಿಪ್ರಾಯವಿದೆ. ವಿಷ್ಣುವರ್ಧನನ ನಂತರ 1ನೇ ನರಸಿಂಹ, ಇಮ್ಮಡಿ ಬಲ್ಲಾಳ, ಶ್ರೀರಂಗಪಟ್ಟಣ, ತೊಣ್ಣೂರು, ಕೃಷ್ಣರಾಜಪೇಟೆ ಮುಂತಾದ ಕಡೆ ಆಳಿದ ಬಗ್ಗೆ ತಿಳಿಯಬಹುದು ಮುಮ್ಮಡಿ ನರಸಿಂಹ ಮತ್ತು ಮುಮ್ಮಡಿ ಬಲ್ಲಾಳನು ತೊಣ್ಣೂರು ಮತ್ತು ಮೇಲುಕೋಟೆ ಶಾಸನಗಳು ತಿಳಿಸುತ್ತದೆ.[15]

ಹೊಯ್ಸಳರ ಕಾಲದ ಕಳಲೆ ನಾಡು (ಹಲಗೂರಿನ ಪರಿಸರ) ಕಲ್ಕುಣಿ ನಾಡ (ನಾಗಮಂಗಲ) ಶ್ರೀರಂಗಪಟ್ಟಣ ಸೀಮೆ ಮೊದಲಾದ ಆಡಳಿತ ವಿಭಾಗಗಳಿದ್ದು, ಶಾಸನಗಳಲ್ಲಿ ತಿಳಿಯಬಹುದು. ಒಟ್ಟಾರೆಯಾಗಿ ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಈ ಜಿಲ್ಲೆಯ ಭಾಗದಲ್ಲಿ ಆಡಳಿತ ಆರ್ಥಿಕ ಸಾಮಾಜಿಕವಾಗಿ ಅಭಿವೃದ್ಧಿಯಾಯಿತು ಎಂದು ಹೇಳಬಹುದು.

ವಿಜಯ ನಗರ ಸಾಮ್ರಾಜ್ಯ :- ಹೊಯ್ಸಳರ ನಂತರ ವಿಜಯನಗರ ಅರಸರು ಮಂಡ್ಯವಿಭಾಗಲ್ಲೂ ಆಡಳಿತ ನಡೆಸಿದ ಬಗ್ಗೆ ತಿಳಿಯಬಹುದು ಮಂಡ್ಯ ಜಿಲ್ಲೆಯಲ್ಲಿ ವಿಜನಯನಗರ ಕಾಲಕ್ಕೆ 100 ಕ್ಕೂ ಮೀರಿದ ಶಾಸನಗಳಿದ್ದು, ಮೊದಲನೇ ಹರಿಹರನ ಕಾಲದ ಶಾಸನವಷ್ಟೆ ಮಂಡ್ಯ

ತಾಲ್ಲೂಕಿನಲ್ಲಿ ಕಂಡು ಬರುವುದರಿಂದ ವಿಜಯನಗರ ಸಾಮ್ರಾಜ್ಯಕ್ಕೂ ಮತ್ತು ಜಿಲ್ಲೆಗೂ ಇದ್ದ ಪ್ರಾಚೀನ ಸಂಬಂಧಗಳಿವೆ ಮೂಲ ಆಧಾರವಾಗಿದೆ. ತಾಲ್ಲೂಕಿನ ಬೀಚನಹಳ್ಳಿಯ ಶಾಸನವು ನವಲುವಳಿ ಎಂಬ ಸ್ಥಳದ ಭೀಮನೆಂಬ ವೀರನೆಂಬ ವೀರನ ಪತ್ನಿ ತಿಮ್ಮವ್ವೆಯ ತನ್ನ ಪತಿ ಸ್ಮರಣಾರ್ಥ ಹಾಕಿಸಿದ ವೀರಗಲ್ಲು ಶಾಸನವಾಗಿದ್ದು, ವಿಜಯನಗರದ ವೀರಬುಕ್ಕಣ್ಣ ಒಡೆಯನ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ.

ವಿಜಯನಗರ ಅರಸರ ಅಧಿಕಾರಿಗಳು ಜಿಲ್ಲೆಯ ತಾಲ್ಲೂಕಿನ ಹಲವಾರು ಭಾಗಗಳಲ್ಲಿ ಆಳ್ವಿಕೆ ನಡೆಸಿದ ಬಗ್ಗೆ ಶಾಸನಗಳ ಮೂಲಕ ತಿಳಿಯಬಹುದು (ಮದ್ದೂರಿನ ಅರುವನಹಳ್ಳಿ, ಬೊಪ್ಪಸಮುದ್ರ, ಶಾಸನ) ಹರಿಹರನ ಮಗ ಎರಡನೇ ಬುಕ್ಕರಾಯ ಆಳ್ವಿಕೆಗೆ ಮಳವಳ್ಳಿ ಒಳಪಟ್ಟಿತ್ತು. ಮಾರೇಹಳ್ಳಿಯ ಶಾಸನ ಇವರ ಆಡಳಿತದ ಬಗ್ಗೆ ತಿಳುಸುತ್ತದೆ. ಇಮ್ಮಡಿ ದೇವರಾಯನ ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ದೊರಕಿದೆ.[16]

ಮದ್ದೂರು ತಾಲ್ಲೂಕಿನ ಹಾಗಲಹಳ್ಳಿ ಶಾಸನ ಕ್ರಿ.ಶ. 1420, 2ನೇ ದೇವರಾಯನ ಬಗ್ಗೆ ತಿಳಿಸುತ್ತದೆ. ವಿಜಯನಗರದ ಅರಸರು ಜಿಲ್ಲೆಯ ಹಲವು ಭಾಗಗಳಲ್ಲಿ ದೇವಾಲಯ ಸ್ಥಾಪನೆಗೆ ಕೆರೆಗಳನ್ನು ಕಟ್ಟಲು ದುರಸ್ಥಿಗೊಳಿಸಲು, ಜೀರ್ಣೋದ್ಧಾರಗೊಳಿಸಲು, ದಾನದತ್ತಿಗಳನ್ನು ನೀಡಿದ ಬಗ್ಗೆ ತಿಳಿಯಬಹುದು. ಸಾಮಾನ್ಯವಾಗಿ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳಲ್ಲಿ ಅರಸರೇ ಇಲ್ಲಿ ನೇರವಾಗಿ ಆಡಳಿತದಲ್ಲಿ ಭಾಗಿಯಾಗಿಲ್ಲ ಎಂದು ಹೇಳಬಹುದು. ಅರಸರು ತನ್ನ ಸಾಮಂತರು ಅಧಿಕಾರಿಗಳ ಮೂಲಕ ಇಲ್ಲಿ ಆಡಳಿತ ವ್ಯವಸ್ಥೆ ಮಾಡಿದ ಬಗ್ಗೆ ಶಾಸನಗಳಿಂದ ತಿಳಿಯಬಹುದು.[17]

ತುಳುವ ಸಂತತಿಯ ನರಸನಾಯಕರನ್ನು ಮೈತುಂಬಿ ಹರಿಯುತ್ತಿರುವ ಕಾವೇರಿ ಅಡ್ಡಲಾಗಿ ಕಟ್ಟಲಾದ ತಾತ್ಕಾಲಿಕ ಸೇತುವೆ ಮೂಲಕ ಹೋಗಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಬಗ್ಗೆ ಕ್ರಿ.ಶ. 1509 ರ ಶ್ರೀರಂಗಪಟ್ಟಣದ ತಾಮ್ರಶಾಸನ ತಿಳಿಸುತ್ತದೆ. ತುಳುವ ನರಸನಾಯಕನ ನಂತರ ಶ್ರೀಕೃಷ್ಣದೇವರಾಯ 11 ಶಾಸನಗಳು ಜಿಲ್ಲೆಯಲ್ಲಿ ದೊರಕಿದೆ. ಇವನ ಕಾಲದಲ್ಲಿ ದೇವಾಲಯಗಳ ದುರಸ್ತಿ ಆಡಳಿತ ಕೈಂಕರ್ಯಕ್ಕೆ ಬ್ರಾಹ್ಮಣರಿಗೆ ದಾನದತ್ತಿ ನೀಡಿದ ಬಗ್ಗೆ ಶಾಸನಗಳು ತಿಳಿಸುತ್ತವೆ.[18]

ಕೃಷ್ಣ ದೇವರಾಯನ ನಂತರ ಅಚ್ಚುತರಾಯ ಆಳ್ವಿಕೆಯ ಬಗ್ಗೆ ಮದ್ದೂರು ತಾಲ್ಲೂಕು, ನಾಗಮಂಗಲ ತಾಲ್ಲೂಕಿನ ಶಾಸನಗಳು ತಿಳಿಸುತ್ತದೆ. ನಂತರ ಸದಾಶಿವರಾಯನ 7 ಶಾಸನಗಳು ಜಿಲ್ಲೆಯಲ್ಲಿ ದೊರಕಿವೆ. ಹೀಗೆ ಮಂಡ್ಯ ಜಿಲ್ಲೆ ವಿಜಯನಗರ ಅರಸರ ಆಳ್ವಿಕೆಗೆ ಒಳಪಟ್ಟಿತು.

ಉಮ್ಮತ್ತೂರು ಪಾಳೆಯಗಾರರು :- ವಿಜಯನಗರ ಅರಸರ ಕಾಲದಲ್ಲಿ ಮಂಡ್ಯ ಜಿಲ್ಲೆಯನ್ನು ಹೊಯ್ಸಳರ ನಾಡು ಎಂದು ಕರೆಯಲಾಗಿತು. ವಿಜಯನಗರದ ದುರ್ಬಲವಾದ ಮೇಲೆ ಸ್ಥಳೀಯ ಪಾಳೆಗಾರರು ಮೇಲುಗೈ ಸಾಧಿಸಿದರು. ಅಂತವರಲ್ಲಿ ಉಮ್ಮತ್ತೂರು ಪಾಳೆಗಾರರು ಒಬ್ಬರು. ಅರಸರ ಮುಖ್ಯಕೋಟೆಯ ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದಲ್ಲಿ ದ್ವೀಪದಲ್ಲಿದೆ. ಅದರ ಸಮೀಪವೆ ಅವರ ಕುಲದೈವ ಸೋಮೇಶ್ವರನ ದೇವಾಲಯವು ಇದೆ. ಇವರಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ 5 ಶಾಸನಗಳು ಲಭ್ಯವಿದೆ. ಇದರ ವ್ಯಾಪ್ತಿಯು ಜಿಲ್ಲೆಯನ್ನ ವ್ಯಾಪಿಸಿತ್ತು ಎನ್ನಬಹುದು. ಮುಂದೆ ಉಮ್ಮತ್ತೂರು ಮೈಸೂರು ಒಡೆಯರ ಆಳ್ವಿಕೆಯಲ್ಲಿ ಒಡೆಯರು ಸೇರಿಸಿಕೊಂಡರು.

<u>*ಮೈಸೂರು ಒಡೆಯರು :-*</u> ವಿಜಯನಗರ ದಕ್ಷಿಣದಲ್ಲಿ ಮೈಸೂರು ಒಡೆಯರು ಆಳ್ವಿಕೆಯನ್ನು ನಡೆಸುತ್ತಿದ್ದರು. ವಿಜಯನಗರ ಪತನದ ನಂತರ ಒಡೆಯರು ಮೈಸೂರಿನ ಭಾಗದಲ್ಲಿ ಪ್ರಬಲರಾದರು. ಇವರ ಆಳ್ವಿಕೆಯ ಕಾಲದಲ್ಲಿ ಮಂಡ್ಯ ಸಹ ಇವರ ಭಾಗವಾಗಿತ್ತು ಎನ್ನಬಹುದು. ರಾಜ ರಾಜ ಒಡೆಯರು ಮಂಡ್ಯದ ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಇದರ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ. ಶ್ರೀರಂಗಪಟ್ಟಣವನ್ನು ಇಕ್ಕೇರಿ ನಾಯಕ ಶಿವಪ್ಪನಾಯಕ ಅಲ್ಲದೆ ಬಿಜಾಪುರದ ಆದಿಲ್‌ಷಾಹಿಗಳು ವಶಪಡಿಸಿಕೊಳ್ಳಲು ಬಂದಾಗ ಅವರ ಹಿಮ್ಮೆಟ್ಟಿಸಿದರ ಬಗ್ಗೆ ತಿಳಿಯಬಹುದು. ಮಂಡ್ಯ ಜಿಲ್ಲೆಯಲ್ಲಿ ಅರಸರ 18 ಶಾಸನಗಳು ಸಿಕ್ಕಿವೆ. ಜಿಲ್ಲೆಯಲ್ಲಿ ಅವರ ಆಡಳಿತದ ಬಗ್ಗೆ ತಿಳಿಯಬಹುದು. ಅಲ್ಲದೆ ಜಿಲ್ಲೆಯಲ್ಲಿ ಅವರು ಕೊಟ್ಟ ದಾನದತ್ತಿ, ಮುಂತಾದವುಗಳನ್ನು ಕಟ್ಟಿಸಿದ ಬಗ್ಗೆ ದೇವಾಲಯಗಳ ಕಟ್ಟಿಸಿದ ಬಗ್ಗೆ ತಿಳಿಯಬಹುದು.

ದೊಡ್ಡ ದೇವರಾಜ ಒಡೆಯರ ಮಗ ದೇವರಾಜರು ಕೌಡಲಿ ಗ್ರಾಮವನ್ನು ಕ್ರಿ.ಶ. 1663 ರಲ್ಲಿ ಅಗ್ರಹಾರವಾಗಿ ಪರಿವರ್ತಿಸಿ ದೇವರಾಜಪುರ ಎಂದು ಕರೆದರು. ಮಳವಳ್ಳಿಯಲ್ಲಿ ಚಿಕ್ಕದೇವರಾಜ ಒಡೆಯರು ಈ ಸ್ಥಳದ ನೈರುತ್ಯಕೆ ಕೆರೆ ಕಟ್ಟಿಸಿದ ಬಗ್ಗೆ 1685 ರ ಶಾಸನದಲ್ಲಿ ತಿಳಿಯಬಹುದು. ಹಲವಾರು ಗ್ರಾಮಗಳನ್ನು ಅಗ್ರಹಾರವಾಗಿ ಮಾಡಿರುವ ಬಗ್ಗೆ ತಿಳಿಯಬಹುದು. ಹೀಗೆ ಮೈಸೂರು ಒಡೆಯರು ಹಲವಾರು ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಕೈಗೊಂಡನು.

ಹೈದರಾಲಿ ಮತ್ತು ಟಿಪ್ಪು ಸುಲ್ತಾನ :- ದಳವಾಯಿ ನಂಜರಾಜನ ಸೇನೆಯಲ್ಲಿ ಹೈದರಾಲಿಯು ಸಾಮಾನ್ಯ ಸೈನಿಕನಾಗಿ ವೃತ್ತಿ ಆರಂಭಿಸಿದ ಅವನು ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ವತಂತ್ರವಾಗಿ ಮದ್ದೂರು ಠಾಣ್ಯಕ್ಕೂ ಲತೀಫ ಅಲಿ ಬೇಗ ನಯಾ ನೇಮಿಸಿದನು. ಚಿಕ್ಕಪ್ಪ ಮೀರ ಇಬ್ರಾಹಿಂನನ್ನು ಮಳವಳ್ಳಿ ಠಾಣ್ಯ.ಕ್ಕೂ ನೇಮಿಸಿದನು. ಸೈನದ ಸಹಾಯವನ್ನು ಒಡೆಯರಿಗೆ ನೀಡಿದ್ದನು. ಕೃಷ್ಣರಾಜಪೇಟೆ ತಾಲ್ಲೂಕಿನ ಚಟ್ಟಂಗೆರೆಯ ಶಾಸನವು (1759) ಚಟ್ಟಮಗೆರೆ ಗ್ರಾಮದ ತೋಣ್ಣೂರಿನ ನೀಲಾ ಮಸೂರ ಖಾದ್ರಿ ಪೀಠ ದರ್ಗಾದಲ್ಲಿ ನಡೆಯುವ ವಾರ್ಷಿಕ ಉರುಸ ಸಂದರ್ಭದಲ್ಲಿ ಬಡ ಜನರಿಗೆ ಅನ್ನದಾನಕ್ಕಾಗಿ ಉಂಬಳಿ ಬಿಟ್ಟ ವಿಚಾರವು ತಿಳಿಸುತ್ತದೆ.

ಟಿಪ್ಪುಸುಲ್ತಾನ : ಹೈದರ್‌ನ ಅವನ ಮಗ ಟಿಪ್ಪು ಅಧಿಕಾರಕ್ಕೆ ಬಂದು ಬ್ರಿಟಿಷರ ವಿರುದ್ಧ ಯುದ್ಧ ಮುಂದುವರಿಸಿದ್ದನು. ಇವನ ಕಾಲದಲ್ಲಿಯೂ ಶ್ರೀರಂಗಪಟ್ಟಣ ರಾಜಧಾನಿಯಾಗಿತ್ತು. ಇವನ ಆಡಳಿತವು ಮಂಡ್ಯ ಜಿಲ್ಲೆಯಲ್ಲಿ ಕಾಣಬಹುದು. ಟಿಪ್ಪುಸುಲ್ತಾನ ಹಲವಾರು ಆಡಳಿತಾತ್ಮಕ ಬದಲಾವಣೆಗಳನ್ನು ತಂದನು. ಅಲ್ಲದೆ ಕಾವೇರಿ ನದಿಗೆ ಮೊದಲಬಾರಿಗೆ ಅಣೆಕಟ್ಟನ್ನು ಕಟ್ಟಿದ ಬಗ್ಗೆ ಶಾಸನದಲ್ಲಿ ಕಾಣಬಹುದು. ಜಮೀನುಗಳ ಸುಧಾರಣೆ ಮಾಡಿದನು. ರೇಷ್ಮೆ ಕೃಷಿಗೆ ಒತ್ತು ನೀಡಿದನು. ದೇವಾಲಯಗಳಿಗೆ ದಾನದತ್ತಿ ನೀಡಿದ್ದನು.

ಟಿಪ್ಪುವಿನ ಮರಣದ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರಕ್ಕೆ ಬಂದರು. ದಿನಾವ ಪೂರ್ಣಯ್ಯ ದಿವಾನರಾಗಿ ಆಡಳಿತ ನಡೆಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರವನ್ನು ಕಳೆದುಕೊಂಡು ಬ್ರಿಟಿಷರ ಆಳ್ವಿಕೆ ಪ್ರಾಂತ್ಯದಲ್ಲಿ ಆರಂಭವಾಯಿತೆನ್ನಬಹುದು.

ಮಂಡ್ಯ ಜಿಲ್ಲೆಯನ್ನು ಮುಮ್ಮಡಿ ಮತ್ತು ಇಮ್ಮಡಿ ಕೃಷ್ಣರಾಜ ಒಡೆಯರ್ ಶಾಸನಗಳು ಕಂಡು ಬಂದಿವೆ. ಮುಮ್ಮಡಿರವರ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ನಲ್ಲತಂಬಿ ಅಧಿಕಾರಿ ಶ್ರೀರಂಗನಾಥ ದೇವಾಲಯವನ್ನು ವೇದ ಘೋಷಣೆಯನ್ನು ನಿರ್ಮಿಸಿದ ಬಗೆಗ ವಿವರಿಸಿದೆ.

ಕಮಿಷನ್ನರ ಆಳ್ವಿಕೆಯನ್ನು ವಾಪಸ್ಸು ಪಡೆದ ಬ್ರಿಟಿಷ್ ಸರ್ಕಾರ ಪುನಃ ಮೈಸೂರು ಒಡೆಯರಿಗೆ ಅಧಿಕಾರ ಕೊಟ್ಟಿತು. ಪುನರ್ ದಿವಾನರ ಆಡಳಿತ ರಾಜ್ಯದಲ್ಲಿ ಮುಂದುವರೆಯಿತು. ರಂಗಚಾರ್ಲು ಪ್ರಜಾಪ್ರತಿನಿಧಿ ಸಭೆ ಸ್ಥಾಪಿಸಿದರು. ಸರ್.ಕೆ. ಶೇಷಾದ್ರಿ ಅಯ್ಯರ್‌ರವರು ಮಂಡ್ಯ ಜಿಲ್ಲೆಯ ಶಿವನಸಮುದ್ರದಲ್ಲಿ ಜನ ವಿದ್ಯುತ್ ಯೋಜನೆಗೆ ಚಾಲನೆ ತಂದರು. ಮಂಡ್ಯ ಜಿಲ್ಲೆಯ

ಮಳವಳ್ಳಿ ತಾಲ್ಲೂಕಿನಲ್ಲಿ ಆದಿ ಕರ್ನಾಟಕ ವಿದ್ಯಾರ್ಥಿಗಳಿಗಳಿಗೆ ಪ್ರವೇಶ ಶಾಲೆ ತೆರೆದರು. ದಿವಾನರಾಗಿ ಸರ್.ಎಂ.ವಿಶ್ವೇಶ್ವರಯ್ಯರವರು ಅಧಿಕಾರ ವಹಿಸಿಕೊಂಡಾಗ ಬೆಂಗಾಡಗಿದ್ದ ಮಂಡ್ಯವನ್ನು ಹಸಿರು ತುಂಬಿದ ನಾಡಾಗಿ ಆರ್ಥಿಕ ಪ್ರಗತಿ ನಾಗಲೋಟಕ್ಕೆ ಧೃವತಾರೆಯಾದವರು ಇವರು. ಇವರು ಕನ್ನಂಬಾಡಿಗೆ ಅಣೆಕಟ್ಟನ್ನು ಕಟ್ಟಲು ಯೋಜನೆ ಆರಂಭವಾಗಿ ಮಂಡ್ಯ ಜಿಲ್ಲೆಯ 5 ತಾಲ್ಲೂಕುಗಳಿಗೆ ಕಾವೇರಿ ನೀರನ್ನು ಒದಗಿಸಿಕೊಟ್ಟ ಮಹಾನ್ ಚೇತನ ಎನ್ನಬಹುದು. ಇಲ್ಲಿ ಕಾಲುವೆಗಳಿಗೆ ವಿ.ಸಿ. ನಾಲೆ ಎಂದು ಹೆಸರು ಬಂದಿದೆ.

ನಂತರ ಸರ್. ಮಿರ್ಜಾ ಇಸ್ಮಾಯಿಲ್ ರವರು ದಿವಾನರಾಗಿ ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಯನ್ನು ತೆರೆದರು. ಅಲ್ಲದೆ ಮೇಲ್ಮಟ್ಟದ ನೀರಾವರಿ ಕಾಲುವೆ ನಿರ್ಮಾಣವಾಗಿ ಸು.1200.00 ಎಕರೆ ಭೂಮಿ ನೀರಾವರಿಗೆ ಒಳಪಟ್ಟಿದೆ. ವಿಶ್ವವಿಖ್ಯಾತ ಬೃಂದಾವನ ಕೆ.ಆರ್.ಎಸ್.ನಲ್ಲಿ ಇವರ ಕಾಲದಲ್ಲಿ ನಿರ್ಮಾಣವಾಯಿತು. ಇದಕ್ಕೆಲ್ಲಾ ಸಹಕಾರ ನೀಡಿ ಒಡೆಯರೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರಾದ ಇವರು ಸಹಾಯಇಲ್ಲದೆ ದಿನಾವರು ಯಾವ ಕಾರ್ಯ ಕೈಗೊಳ್ಳಲು ಸಾಧ್ಯವಿರಲಿಲ್ಲ ಎಂದು ಹೇಳಬಹುದು.

ಭಾತರದ ಸ್ವತಂತ್ರ ಹೋರಾಟದಲ್ಲಿಯೂ ಮಂಡ್ಯ ಜಿಲ್ಲೆಯ ಜನತೆ ಪಾಲ್ಗೊಂಡಿದ್ದಾರೆ. 1939 ಕ್ಕೆ ಮೊದಲು ಮಂಡ್ಯ ಮೈಸೂರು ಜಿಲ್ಲೆಯ ಭಾಗವಾಗಿತ್ತು. ಮೈಸೂರು ಪ್ರಾಂತ್ಯದಲ್ಲೆ ಆದ ಸ್ವತಂತ್ರ ಚಳುವಳಿಯಲ್ಲಿ ಮಂಡ್ಯದ ಜನತೆ ಪಾಲ್ಗೊಂಡಿದ್ದಾರೆ ಮತ್ತು ಚಳುವಳಿಗೆ ಧುಮುಕಿದ್ದಾರೆ ಎನ್ನಬಹುದು. ಮಂಡ್ಯದಿಂದ ಹೆಚ್.ಕೆ. ವೀರಣ್ಣಗೌಡರು, ವಿ. ವೆಂಕಟಪ್ಪರವರು, ಎ. ಅರ್ಯಮೂರ್ತಿರವರು ಬೆಳಗಾವಿ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ಅ ವೇಳೆಗಾಗಲೇ ಸಾಬರಮತಿ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದ ರಾಮಂದೂರಿನ ಸಿದ್ದೇಗೌಡರು (ಸೀತಾಸುತ) ಬೆಳಗಾವಿ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ಗಾಂಧಿಜೀಯವರ ಸ್ವತಂತ್ರ ಹೋರಾಟಕ್ಕೆ ಜಿಲ್ಲೆಯಿಂದ ನಿಧಿಯನ್ನು ಕೊಡಲಾಗಿತ್ತು.

ಸ್ವತಂತ್ರ ಹೋರಾಟದಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರ ಧ್ವಜ ಸ್ವತ್ಯಾಗ್ರಹ ಮುಖ್ಯವಾದುದು. ಇಲ್ಲಿ ಮೈಸೂರು ಜಿಲ್ಲಾ ಕಾಂಗ್ರೇಸ್ ಅಧಿವೇಶನ ಕರೆದರು. ಈ ಸತ್ಯಾಗ್ರಹದಲ್ಲಿ ಜಿಲ್ಲೆಯ ವ್ಯಕ್ತಿಗಳು ಭಾಗವಹಿಸಿದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿರುವ ಜಿಲ್ಲೆಯ ಅನೇಕ ನಾಯಕರು ಪಾಲ್ಗೊಂಡಿದ್ದರು. ಛಲೇಜಾವ್ ಚಳುವಳಿಯು ಪ್ರಚಾರ ಭಾಷಣಗಳನ್ನು ಯಶಸ್ವಿಯಾಗಿ ನಡೆಸಿದ್ದರು.

ಮಂಡ್ಯ ಮೈಸೂರು ಪ್ರಾಂತ್ಯದಿಂದ ಬೇರೆಯಾಬೇಕೆಂದು ಹೇಳಿದವರಲ್ಲಿ ಮದ್ದೂರಿನ ಸೋಮನಹಳ್ಳಿ ಎಸ್.ಸಿ. ಮಲ್ಲಯ್ಯ ಪ್ರಮುಖರು ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಯಾಗಿದ್ದರು. ಇದೇ ವಿಭಾಗದ ಎಂ.ಸಿ.ಲಿಂಗೇಗೌಡರವರು ಪ್ರತ್ಯೇಕ ಜಿಲ್ಲೆಗಾಗಿ ದುಡಿದವರು."

ಇರ್ವಿನ್ ನಾಲಾ ಚಳುವಳಿ:- ಇದು ರೈತರು ಪ್ರಥಮ ಚಳುವಳಿಯಾಗಿತ್ತು ಇರ್ವಿನ್ ನಾಲಾ ಇದು ಕೃಷ್ಣರಾಜ ಸಾಗರದಿಂದ ಹರಿದು ಬರುವ ಕಾವೇರಿ ಮತ್ತು ಶಿಂಷಾ ಶಾಖೆಯಾಗಿತ್ತು. ಸರ್ಕಾರ ಅನುಸರಿಸಬೇಕಾದ ವ್ಯವಸಾಯದ ಕ್ರಮ ನೀರಾವರಿ ಜಮೀನಿಗೆ ಕೊಡಬೇಕಾದ ಕಂದಾಯ, ಕಾಣಿಕೆ ಧನ ಕೊಡಲು ತಡವಾದರೆ ಅದಕ್ಕೆ ಬಡ್ಡಿ ಸೇರಿಸಿ ಕೊಡಬೇಕೆಂದು ಇದರ ಬಗ್ಗೆ ಸರ್ಕಾರ ಹೊರಡಿಸಿ ಅಜ್ಞೆ ರೈತರಲ್ಲಿ ಪ್ರಬಲ ಅತೃಪ್ತಿಮೂಡಿಸಿತು. ಇಂತಹ ಸಂದರ್ಭದಲ್ಲಿ ಜಿಲ್ಲೆಯ ಹೆಚ್.ಹೊನ್ನಯ್ಯ, ಹೊನಗಾನಹಳ್ಳಿ ಕೆ. ಪುಟ್ಟಣ್ಣ ಮದ್ದೂರಿನ ಹೆಚ್.ಕೆ. ವೀರಣ್ಣಗೌಡರು ರೈತರ ಸಂಘಟನೆಯಲ್ಲಿ ತೊಡಗಿ14 ತಿಂಗಳ ಕಾಲ ಜನತೆಯಲ್ಲಿ ಅರಿವು ಮೂಡಿಸಿದರು. ಜಿಲ್ಲೆಯ ಅಸಂಖ್ಯಾತ ಜನತೆ ಈ ಚಳುವಳಿಯಲ್ಲಿ ಭಾಗವಹಿಸಿದರು.

ಮಂಡ್ಯ ಜಿಲ್ಲೆಯಲ್ಲಿ 1937- 38 ಕ್ಕೆ ಮೊದಲು ಯಾವುದೇ ಸ್ವತಂತ್ರ ಆಂದೋಲನ ಕಂಡು ಬಂದಿರುವುದಿಲ್ಲ. ಮದ್ದೂರಿನ ಶಿವಪುರ ಧ್ವಜ ಸತ್ಯಾಗ್ರಹವೇ ಈ ಭಾಗದ ಪ್ರಥಮ ಚಳುವಳಿಯಾಗಿದೆ.

ಹೀಗೆ ಮಂಡ್ಯ ಜಿಲ್ಲೆಯ ಚಾರಿತ್ರಿಕ ಹಿನ್ನಲೆಯನ್ನು ಮೇಲೆ ಹೇಳಿದ ರೀತಿಯಲ್ಲಿ ಪರಿಶೀಲಿಸಲಾಗಿದೆ.

ಅಡಿ ಟಿಪ್ಪಣಿಗಳು

1. ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ 2003 — ಪುಟ 3
2 ಅದೇ — ಪುಟ 3
3 ಅದೇ — ಪುಟ 16-18
4. ಅದೇ — ಪುಟ 22
5 ಅದೇ — ಪುಟ 22

6 ಸಕ್ಕರೆ ಸೀಮೆ 1976 ಪುಟ 11

7 ಅದೇ ಪುಟ 35

8. ಕುಂತಿಬೆಟ್ಟದ ಪ್ರಾಕ್ತಾನಾನ್ವೇಷಣೆ
ಇತಿಹಾಸ ದರ್ಶನ ಸಂಪುಟ 4 ಪುಟ 1-4

9 ಶ್ರೀರಂಗಪಟ್ಟಣದ ಪ್ರಾಗೈತಿಹಾಸಿಕ ನೆಲಯ ಶೋಧ
ಇತಿಹಾಸ ದರ್ಶನ ಸಂಪುಟ 13 ಪುಟ - 20-26

10. ಇ.ಸಿ. ಸಂಪುಟ -6 ಪುಟ 397

11 ಇ.ಸಿ. ಸಂಪುಟ -7 ಪುಟ 219

12 ಇ.ಸಿ. ಸಂಪುಟ -7 ಪುಟ 419

13 ಇ.ಸಿ. ಸಂಪುಟ -7 ಪುಟ 233

14 ಇ.ಸಿ. ಸಂಪುಟ -6 ಪುಟ 69

15 ಮುತ್ತಿನ ಹಾರ ಪುಟ 30

16 ಸುವರ್ಣ ಮಂಡ್ಯ ಪುಟ 45

17 ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ ಪುಟ 18

18 ಸಿಂಗಾರ ಪುಟ 71

19 ಸಿಂಗಾರ 109-110

ಅಧ್ಯಾಯ -3

ಪಾರಂಪರಿಕ ಕೆರೆ ನೀರಾವರಿ ವ್ಯವಸ್ಥೆ

(ಶಾಸನಗಳ ಆಧಾರ)

18ನೇಶತಮಾನದವರೆಗೆ

3.1 ಕೆರೆಯ ನಿರ್ಮಾಣದ ಶಾಸನಗಳು

3.2 ಕೆರೆಯ ನಿರ್ವಹಣೆ ದುರಸ್ಥಿಗೆ ಸಂಬಂಧಿಸಿದಂತಹ ಶಾಸನಗಳು

3.3 ಕೆರೆಯ ಕೆಳಗಿನ ಭೂಮಿಯ ದಾನ ದತ್ತಿಕೊಟ್ಟ ಶಾಸನಗಳು

ಅಧ್ಯಾಯ 3

ಪಾರಂಪರಿಕ ಕೆರೆ ನೀರಾವರಿ ವ್ಯವಸ್ಥೆ

ಕೆರೆ ನೀರಾವರಿ ಅಧ್ಯಾಯನದ ಬಗೆ ಸಂಬಂಧಿಸಿದಂತೆ ಶಾಸನಗಳು ಮಾಹಿತಿಯನ್ನು ಒದಗಿಸುತ್ತವೆ. ಜಿಲ್ಲೆಯ ಪಾರಂಪರಿಕ ಕೆರೆ ಬಗ್ಗೆ ತಿಳಿಯಬೇಕಾದರೆ ನಮಗೆ ಶಾಸನದಲ್ಲೇ ಮುಖ್ಯವಾದ ಆಧಾರ. ಜಿಲ್ಲೆಯಲ್ಲಿ ಆಳಿದ ರಾಜರು, ಅವರ ಸಾಮಂತರು, ಅಧಿಕಾರಿಗಳು, ಯಜಮಾನರು, ಊರಿನ ಜನರು ಕೆರೆ ನಿರ್ಮಿಸಿ ನೀರಾವರಿಗೆ ಉತ್ತೇಜನ ನೀಡಿದ ಬಗ್ಗೆ ತಿಳಿಸುತ್ತವೆ. ನೀರಿನ ಸರಬರಾಜಿನ ಕೊರತೆಗಳಿಂದ ಬರುವ ಅನೇಕ ತೊಂದರೆಗಳನ್ನು ತಗ್ಗಿಸಲು ಕೆರೆಗಳನ್ನು ನಿರ್ಮಿಸುವ, ಬಾವಿಗಳನ್ನು ತೋಡಿಸುವ, ಕಾಲುವೆಗಳನ್ನು ಅಗೆಸುವ, ಏರಿಗಳನ್ನು ನಿರ್ಮಿಸುವ ಹಾಗೂ ತೂಬುಗಳನ್ನು ಹಾಕಿಸುವ, ಕೆರೆ-ಕಟ್ಟೆಗಳನ್ನು ದುರಸ್ತಿಗೊಳಿಸುವ ಅನೇಕ ಯೋಜನೆಗಳನ್ನು ರೂಪಿಸಿರುವ ಬಗ್ಗೆ ಶಾಸನಗಳು ತಿಳಿಸುತ್ತವೆ. ಅಲ್ಲದೆ ರಾಜರು, ಸಾಮಂತರು, ಅಧಿಕಾರಿಗಳು, ವ್ಯವಸಾಯ ಅಭಿವೃದ್ಧಿಗಾಗಿ ಕೊಡುತ್ತಿದ್ದ ಗಮನ ಇವೆಕ್ಕಲ್ಲಾ ಸಾಕ್ಷಿಯಾಗಿದೆ. ಒಬ್ಬ ವ್ಯಕ್ತಿಯಾಗಲೀ, ಪಂಚಾಯಿತಿಯಾಗಲೀ, ಜಮೀನನ್ನು ಕೊಡುಗೆ ಕೊಡುವುದರ ಮೂಲಕ, ಇಲ್ಲವೆ ಕಂದಾಯವನ್ನು ಮಾಫಿ ಮಾಡುವುದರ ಮೂಲಕ ಕೆರೆಗಳನ್ನು ನಿರ್ಮಿಸುವ ಪ್ರೋತ್ಸಾಹ ನೀಡಿರುವ ಮಾಹಿತಿಯನ್ನು ತಿಳಿಸಿವೆ. ಇಲ್ಲಿ ಹೆಸರಿಸಬಹುದಾದ ತುಂಬಿ ಹರಿಯುವ ನದಿಗಳಿದ್ದರೂ ಕೆರೆ -ಕಾಲುವೆ, ಕುಂಟೆ, ಹಳ್ಳ ಹಾಗೂ ಬಾವಿಗಳು ಪ್ರಮುಖ ನೀರಾವರಿ ಮೂಲಗಳಾಗಿ ಜಿಲ್ಲೆಯ ಕೃಷಿ ಚಟುವಟಿಕೆಗೆ ಆಸರೆಯಾಗಿವೆ. ಕೆರೆಯನ್ನು ನಿರ್ಮಿಸುವುದು, ಬಾವಿಯನ್ನು ತೋಡಿಸುವುದು ಒಂದು ಧರ್ಮದ ಕಾರ್ಯ. ಇಂತಹ ಕಾರ್ಯಗಳನ್ನು ಕೈಗೊಂಡ ವ್ಯಕ್ತಿ ಹಾಗೂ ವಂಶಸ್ಥರು ಪುಣ್ಯಕ್ಕೆ ಅರ್ಹರಾಗುತ್ತಾರೆ ಎಂಬ ನಂಬಿಕೆ ಗಾಢವಾಗಿತ್ತು. ಹೀಗಾಗಿ ಧಾರ್ಮಿಕ ಮಹೋನ್ನತಿಯ ನಂಬಿಕೆಯ ಹಿನ್ನೆಲೆಯಲ್ಲಿ ನೀರಾವರಿ ವ್ಯವಸ್ಥೆ ಮಾನ್ಯತೆ ಪಡೆಯಿತು.

ಒಡೆದ ಕೆರೆಗಳನ್ನು ದುರಸ್ತಿ ಪಡಿಸುವುದು, ಹೂಳು ತೆಗೆಸುವುದು, ನಷ್ಟವನ್ನು ತಡೆಗಟ್ಟುವುದು, ಗ್ರಾಮ ಸಮಿತಿಯ ಕೆಲಸವಾಗಿತ್ತು. ಕೆರೆಗಳ ನಿರ್ಮಾಣ ನಿರ್ವಹಣೆಗೆ ರಾಜರು, ಸಾಮಂತರು, ಅಧಿಕಾರಿಗಳು, ದೊಡ್ಡ ವ್ಯಕ್ತಿಗಳು ತೆರಿಗೆಯಿಂದ ಬಂದ ಹಣವನ್ನು ಉಪಯೋಗಿಸಲಾಗುತ್ತಿತ್ತು.

ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ದೇವಾಗಾರಮಂ ಮಾಡಿಸೆ!
ಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ತಿಗ್ಗಿಂಬುಕೆಯ್ ನಂಬಿದ!
ಗ್ಗೆರವೆಟ್ಟಾಗಿರು ಶಿಷ್ಯರಂ ಪೊರೆಯನುತ್ತಿ ಯಂತೆಲ್ಲವಂ ಏಂದೆ ತಾ।
ಯೆರೆದಳ್ವಾಲೆರೆನಂದು ತೊಟ್ಟು ಕಿವಿಯೊಳ್ಂ ಲಕ್ಷ್ಮೀಧಾರಾ ಮಾತ್ಯನಾ !!

ಈ ಮೇಲೆ ಉಲ್ಲೇಖಿಸಿದ ಪದ್ಯವನ್ನು ವಿಜಯನಗರದ ಅರಸ ಪ್ರೌಢ ಪ್ರತಾಪ ದೇವರಾಯನು (ಕ್ರಿ.ಶ. 1406-22) ಮಂತ್ರಿ ಲಕ್ಷ್ಮೀಧರನ ಕೂಸಾಗಿದ್ದಾಗ ಅವನ ತಾಯಿ ಹಿಂದೆ ಹಾಲೆರೆಯುತ್ತಿದ್ದಳೆಂದು ಹಂಪೆಯ ಕಡಲೆಕಾಳು ಗಣೇಶನ ಗುಡಿಯ ಮುಂದಿನ ಅಗೆಸಯಲ್ಲಿರುವ ಕ್ರಿ.ಶ. 1411 ಶಾಸನವು ತಿಳಿಸುತ್ತದೆ.[1]

ಈ ಮೇಲೆ ಹೇಳಿದ ಶಾಸನದಿಂದ ಕೆರೆಗಳು ಎಷ್ಟು ಮಹತ್ವವನ್ನು ಹೊಂದಿದೆ ಎಂಬುವುದನ್ನು ತಿಳಿಸುತ್ತದೆ.

ಮಂಡ್ಯ ಜಿಲ್ಲೆಯ ಪ್ರಾಚೀನ ಕೆರೆ ನೀರಾವರಿ ವ್ಯವಸ್ಥೆಯನ್ನು ಅಧ್ಯಯನ ಮಾಡಲಾಗಿದೆ. ಮೈಸೂರಿನ ಒಡೆಯರ ಕಾಲವರೆವಿಗೂ ಅಧ್ಯಯನ ತಿಳಿಸಲಾಗಿದೆ. ಇಲ್ಲಿಯ ನೀರಾವರಿ ಬಗ್ಗೆ ತಿಳಿಯುವ ಮೊದಲು ನಾವು ರಾಜ್ಯಗಳ ಸ್ಥಾಪನೆ ಮೊದಲು ಯಾವ ರೀತಿ ನೀರಾವರಿ ವ್ಯವಸ್ಥೆ ಇತ್ತು ಎಂಬುದನ್ನು ಪರಿಶೀಲಿಸೋಣ. ಮಂಡ್ಯದಲ್ಲೂ ಇತಿಹಾಸ ಪೂರ್ವ ಮಾನವನ ನೆಲೆಗಳನ್ನು ಗುರುತಿಸಬಹುದು. ಆಗ ಯಾವ ರೀತಿ ಜನರು ನೀರಿನ ಅಗತ್ಯವನ್ನು ಪೂರೈಸಿಕೊಳ್ಳುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ಜಿಲ್ಲೆಯಲ್ಲಿಯೂ ವಿಶೇಷವಾಗಿ ಇತಿಹಾಸ ಪೂರ್ವ ಮಾನವ ಸಸ್ಯ ಬೆಳೆಯುವುದರ ರಹಸ್ಯವನ್ನು ಅರಿತುಕೊಂಡು ಬೇಸಾಯಗಾರನಾಗಿ ಪರಿವರ್ತಿತನಾದ ಮೇಲೆಯೂ ಮಳೆಯನ್ನೇ ಪೂರಾ ನೆಚ್ಚಿಕೊಂಡಿದ್ದ. ಅವನ ವಾಸಸ್ಥಳದಲ್ಲಿ ಮಳೆಯೇನೂ ಸಮೃದ್ಧವಾಗಿತ್ತು. ಅದರ ಸಂಖ್ಯೆ ಹೆಚ್ಚಿದಂತೆ ಮೂಲಸ್ಥಳಕ್ಕಿಂತ ಕಡಿಮೆ ಮಳೆ ಆಗುವ ಸ್ಥಳಗಳಿಗೂ ವಲಸೆ ಹೋಗಬೇಕಾಯಿತು. ಆಗ ಆತ ಮಳೆ ಅತ್ಯಲ್ಪವಾಗುವ ಅಥವಾ ಮಳೆಯೆ ಬಾರದಂಥ ಕಾಲದಲ್ಲಿ ತನ್ನ ಅಗತ್ಯವನ್ನು ಪೂರೈಸಲು ಮಳೆ ನೀರನ್ನು ಸಂಗ್ರಹಿಸುವ ತಂತ್ರವನ್ನು ಬೆಳೆಸಿಕೊಂಡ. ಜಲ-ನೆಲ ಎರಡರಲ್ಲೂ ವಾಸಿಸಿ ನೀರಿಗೆ ಅಡ್ಡ ಕಟ್ಟುವ ಬೀವರ್ ಪ್ರಾಣಿಯ ಹಾಗೆ, ಅವನು ಹೊಳೆಗಳಿಗೆ ಅಡ್ಡಲಾಗಿ ರೆಂಬೆ, ಎಲೆ, ಮಣ್ಣುಗಳನ್ನು ಹಾಕಿ ಸಣ್ಣ-ಸಣ್ಣ ಒಡ್ಡುಗಳನ್ನು ಕಟ್ಟಿದ.

ಜೋರಾಗಿ ಮಳೆ ಬಿದ್ದಾಗ ಆ ಒಡ್ಡುಗಳು ಕೊಚ್ಚಿ ಹೋಗುತ್ತಿದ್ದವು. ಅವನು ಮತ್ತೆ ಕಟ್ಟುತ್ತಿದ್ದ. ಅಲ್ಲಿ ಸಂಗ್ರಹವಾದ ನೀರನ್ನು ಸಣ್ಣ ಕಾಲುವೆಗಳನ್ನು ಮಾಡಿ ತನ್ನ ಹೊಲಗಳಿಗೆ ಹಾಯಿಸುತ್ತಿದ್ದ. ಹಾಗೆ ಹಾಯಿಸಲೂ ಆಗದೆ ಇದ್ದ ಕಡೆ ತಾನೇ ನೀರನ್ನು ಎತ್ತಿ ಹೊಲಗಳಿಗೆ ಬಿಡುತ್ತಿದ್ದ. ಸಾಮಾನ್ಯವಾಗಿ ಬೆಟ್ಟ-ಗುಡ್ಡಗಳ ಕಡೆಯಿಂದ ನೀರು ಹರಿದು ಬರುತ್ತಿದ್ದ ಕಡೆ ಆ ಕಾಲದ ಮಾನವ ಜೀವಿಸುತ್ತಿದ್ದ ಎಂದು ಹೇಳಬಹುದು.

ಸಾರ್ವಜನಿಕ ಜೀವನದ ಸುಖ-ನೆಮ್ಮದಿಗಾಗಿ ಅನೇಕ ಜನರು ರಾಜರು, ಗಣ್ಯರು, ದೊಡ್ಡ ತ್ಯಾಗದ ಮೂಲಕ ಕೆರೆ-ಕಾಲುವೆಗಳನ್ನು ನಿರ್ಮಿಸಿದ್ದರು. ಇದರ ಬಗ್ಗೆ ಶಾಸನಗಳ ಮೂಲಕ ತಿಳಿಸುತ್ತವೆ.

ನಮ್ಮ ದೇಶದ ಮಹಾಕಾವ್ಯಗಳು ಮಹಾಭಾರತ ಮತ್ತು ರಾಮಾಯಣ ಮಹಾಭಾರತದ ಅನುಶಾಸನಿಕ ಪರ್ವವು ಮಹಾರಾಜನಾದಂತಹವನು ಕೈಗೊಳ್ಳಬೇಕಾದ ಪ್ರಜಾಹಿತಾತ್ಮಕ ಕಾರ್ಯಗಳಲ್ಲಿ ಕೆರೆಗಳ ನಿರ್ಮಾಣವು ಒಂದು ಎಂದು ಹೇಳಿದೆ. ಆಗಿಯೇ ನಾಲೆಗಳ ನಿರ್ಮಾಣ ಪ್ರಜಾಹಿತಾತ್ಮಕ ಕೆಲಸವೆಂದು ವಿವರಿಸುತ್ತದೆ. ಹಾಗೆಯೇ ಇದರಲ್ಲಿ ನಾರದನು, ಧರ್ಮರಾಜನಿಗೆ ಎಚ್ಚರಿಸಿ, ''ಮಳೆಯನ್ನೇ ನೆಚ್ಚಿಕೊಂಡು ಬೇಸಾಯಕ್ಕೆ ತೊಡಗಬಾರದೆಂತಲೂ ಹಾಗೂ ಕೆರೆ ಮತ್ತು ಸರೋವರಗಳನ್ನು ನಿರ್ಮಿಸಿಕೊಂಡು ಬೇಸಾಯಕ್ಕೆ ತೊಡಗಬೇಕು ಎನ್ನುತ್ತಾನೆ. ಮಳೆಯ ನೀರಿನ ಪರ್ಯಾಯ ವ್ಯವಸ್ಥೆಯಾಗಿ ಕೆರೆ ಮತ್ತು ಸರೋವರಗಳ ನಿರ್ಮಾಣಗಳ ಕಾರ್ಯವನ್ನು ಅಂದಿನ ರಾಜರು ಕೈಗೆತ್ತಿಕೊಳ್ಳುತ್ತಿದ್ದರು. ಇವುಗಳು ಪ್ರಾಚೀನ ಭಾರತದ ಕೆರೆಗಳ ನಿರ್ಮಾಣವನ್ನು ಕುರಿತಂತೆ ನಮಗೆ ಸಿಗುವ ಪುರಾತನ ದಾಖಲೆಗಳು.[2]

ಮಂಡ್ಯ ಜಿಲ್ಲೆಯಲ್ಲಿ ಒಟ್ಟಾರೆ ಶಾಸನಗಳಲ್ಲಿ 110 ಶಾಸನಗಳ ಕೆರೆ ನಿರ್ಮಾಣ, ದುರಸ್ತಿ ಮತ್ತು ಕೆರೆಯ ಕೆಳಗಿನ ಭೂಮಿಯನ್ನು ಕೊಡುಗೆ ದಾನದತ್ತಿಯ ರೂಪದಲ್ಲಿ ನೀಡಿರುವ ಬಗ್ಗೆ ಶಾಸನ ತಿಳಿಸುತ್ತದೆ. ಈ ಶಾಸನಗಳು ಗಂಗರು, ಹೊಯ್ಸಳರು, ಚೋಳರು, ವಿಜಯನಗರ ಅರಸರು, ಮೈಸೂರಿನ ಒಡೆಯರ ಕಾಲದ ಶಾಸನಗಳು ಜಿಲ್ಲೆಯಲ್ಲಿ ದೊರಕಿದೆ. ಈ ಆಧಾರದ ಮೇಲೆ ಜಿಲ್ಲೆಯ ಕೆರೆ ನೀರಾವರಿ ಬಗ್ಗೆ ಪರಿಶೀಲಿಸಬಹುದು. ಮಂಡ್ಯ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿ ರಾಜರುಗಳ ಕಾಲದ ಶಾಸನಗಳು ದೊರಕಿದೆ.

ಶಾಸನಗಳಲ್ಲಿ ಕೆರೆಗಳನ್ನು ನಾನಾ ಹೆಸರುಗಳನ್ನು ಉಲ್ಲೇಖಿಸಿದೆ. ಕೆರೆ, ತಟಾಕ, ಸಮುದ್ರ,ಹಳ್ಳ, ಸರೋವರ ಇನ್ನು ಮುಂತಾದ ಹೆಸರುಗಳು ಉಲ್ಲೇಖಿತವಾಗಿದೆ. ಕೆರೆಗಳ ವಿಸ್ತೀರ್ಣದ ಆಧಾರದ ಮೇಲೆ ಕೆರೆಗಳಿಗೆ ಹೆಸರು ಇಟ್ಟಿರಬಹುದೆಂದು ಹೇಳಬಹುದು.

3.1 *ಕೆರೆಯ ನಿರ್ಮಾಣಕ್ಕೆ ಸಂಬಂಧಿಸಿದ ಶಾಸನಗಳು :*

ಮಂಡ್ಯ ಜಿಲ್ಲೆಯಲ್ಲಿ ಗಂಗರು ಆಡಳಿತ ನಡೆಸಿರುವ ಬಗ್ಗೆ ತಿಳಿದಿದೆ. ಇವರ ಕಾಲಕ್ಕೆ ಸಂಬಂಧಿಸಿದಂತೆ ಅನೇಕ ಶಿಲಾಶಾಸನಗಳು, ತಾಮ್ರದ ಶಾಸನಗಳು ಆ ಕಾಲದಲ್ಲಿದ್ದು, ಕೆರೆ ನೀರಾವರಿ ಪದ್ಧತಿಯನ್ನು ಕುರಿತು ಮಾಹಿತಿಗಳನ್ನು ತಿಳಿಸುತ್ತದೆ. ಕೆಲವು ಶಾಸನವು ಕೆರೆ, ಮಡವು, ದೋಣಿ, ಗೂಡು ಜಲಾಶಯ, ಕೊಳ ಎಂದು ಉಲ್ಲೇಖಿಸಿದೆ. ಮೊದಲ ಬಾರಿಗೆ ಕೆರೆಗೆ ಸಂಬಂಧಿಸಿದಂತೆ ಶಾಸನ ಗಂಗರ ಶ್ರೀ ಪುರುಷನ ಕಾಲದಲ್ಲಿ 776-77 ರ ತಾಮ್ರ ಶಾಸನ. ಆರು ಕೆರೆಗಳ ಸರಹದ್ದು ಹೊಂದಿದ ಪೊನ್ನಳ್ಳಿಯ ದಾನದ ಬಗ್ಗೆ ತಿಳಿಸುತ್ತದೆ.[3] ಒಂದು ಹಳ್ಳಿಯಲ್ಲಿ ಇಷ್ಟು ಕೆರೆ ಇರುವ ಬಗ್ಗೆ ತಿಳಿಸುವ ಶಾಸನ ಇದೆ. ಆ ಕೆರೆಗಳೆಂದರೆ, ಬೆಳಗಲಿ ಕೆರೆ, ಪೊನ್ನೆವಿ ತಾರ್ರುವಾಯರ ಕೆರೆ, ಸಾಮಕೆರೆ, ಕಾಲಂಭಟ್ಟಕೆರೆ, ಪುಲಿಗೆರೆ ಹಾಗೆಯೇ ಮತ್ತೊಂದು ಶಾಸನ ಪೂರಿಗಾಲಿ ಶಾಸನ (ಮಳವಳ್ಳಿ) ಕೆರೆ ಕಟ್ಟಿಸಿದ ಬಗ್ಗೆ ತಿಳಿಸಿದೆ. ಅದರ ಹೆಸರು 'ಕೊಂಗಿಣಿಕೆರೆ' ಎಂದು ಹೆಸರು. ಕುಂದಸೆಟ್ಟಿ ಎಂಬಾತನು ವಡಗೆರೆನಾಡಿನ ಗೌರ್‍ನರ್ ಆಗಿದನು ಎಂದು ಶಾಸನ ತಿಳಿಸುತ್ತದೆ.[4]

ಮತ್ತೆ ಇವರ ಕಾಲದ ಅದೆ ಹುಳ್ಳೇನಹಳ್ಳಿ ಶಾಸನ (ಮಂಡ್ಯ) ತಮ್ಮ ಸಹಾಯಕಾರದ ಬಾಣ ಕುಟುಂಬದ ದಿಣ್ಣಗರರವರಿಗೆ ಭೂಮಿಯನ್ನು ನೀಡುವಾಗ ಬೆದಿಕೆರೆ ಎಲ್ಲೆಯನ್ನು ಗುರುತಿಸುವಾಗ ಕೆರೆಯ ಹೆಸರನ್ನು ಹೇಳಿದೆ.[5] ರಾಜರು ಕೆರೆಗಳನ್ನು ಕಟ್ಟಿಸುವಾಗ, ಅಥವಾ ಕೆರೆಯ ಕೆಳಗಿನ ಭೂಮಿಯನ್ನು ಕೊಡುವಾಗ ಕೆರೆ ನೀರಾವರಿ ವ್ಯವಸ್ಥೆಯ ಬಗ್ಗೆ ತಿಳಿಯಬಹುದು.

ರಾಷ್ಟ್ರಕೂಟರ ಅರಸ ಕನ್ನರ ದೇವ ಕೃಷ್ಣ. ಇವನು ಆತಗೂರಿನ ಚಲೇಶ್ವರ ದೇವರಿಗೆ ಹಿರಿಯಕೆರೆಯ ಕೆಳಗಿನ ಎರಡು ಕೊಳಗ ಭೂಮಿಯನ್ನು ದಾನವಾಗಿ ಬಿಟ್ಟ ಉಲ್ಲೇಖವಿದೆ. ಇದನ್ನು ಆತಗೂರು ಶಾಸನ (ಮದ್ದೂರು) ತಿಳಿಸುತ್ತದೆ.[6] ಗಂಗರ ಅರಸ ರಾಚಮಲ್ಲ 11ನೇ ಕಾಲದ ರಾಂಪುರ ಶಾಸನ (ಶ್ರೀರಂಗಪಟ್ಟಣ) ನೀರಾವರಿ ದೃಷ್ಟಿಯಿಂದ ಪೆರ್ಬಾಣನ ಪಳ್ಳಿಯ ತಲೆನೆರಿಯಲ್ಲಿ ಕಟ್ಟೆ ಕಟ್ಟಿರುವ ಬಗ್ಗೆ ಉಲ್ಲೇಖಿಸಿದೆ.[5] ತೈಲೂರು ಶಾಸನ (ಮದ್ದೂರು) ಕಚ್ಚವರ

ಪೊಲಲಸೆಟ್ಟಿಯು ತಾಯಲೂರ ಕೆರೆಯನ್ನು ಕಟ್ಟಿಸಿದನು. ಅದಕ್ಕಾಗಿ ಗಾವುಂಡರು ಮತ್ತು ರೈತರು ಅವನಿಗೆ ಭೂಮಿಯನ್ನು ಹಣ ನೀಡಿದ ಬಗ್ಗೆ ತಿಳಿಸುತ್ತದೆ.[8] ಈ ಕೆರೆ ಇಂದಿಗೂ ಅಸ್ತಿತ್ವದಲ್ಲಿ ದೆ. ಇಂದಿಗೂ ಪ್ರಮುಖ ನೀರಾವರಿ ಮೂಲವಾಗಿದೆ. ಬೇಲೂರು ಶಾಸನವು (ಮಂಡ್ಯ) ಕುಂದೂರ ನಾಡ ಗೌರ್‍ನರ್ ಮಲ್ಲಿನಾಯಕಚಾರಿ ಕೆರೆಯನ್ನು ಕಟ್ಟಿಸಿದ ಬಗ್ಗೆ ಉಲ್ಲೇಖಿಸಿದೆ.[9]

ಶ್ರೀರಂಗಪಟ್ಟಣದ ನೆಲೆಮನೆ ಶಾಸನ 9-10ನೇ ಶತಮಾನದಲ್ಲಿ ಕೆರೆ ಇರುವ ಬಗ್ಗೆ ತಿಳಿಸಿದೆ.[10] ಹೊಯ್ಸಳ ಅರಸ ಹೊಯ್ಸಳ ದೇವ ಆಳ್ವಿಕೆ ಕಾಲದಲ್ಲಿ (ಕೆ.ಆರ್. ಪೇಟೆ) ಕಿಕ್ಕೇರಿ ಶಾಸನದಲ್ಲಿ ಕನ್ನೆಕೆರೆ ಎಂಬ ಕೆರೆಯನ್ನು ಕಟ್ಟಿಸಿ ಅದನ್ನು ಮಹಾದೇವರಿಗೆ ಬಿಟ್ಟ ವಿಷಯವನ್ನು ತಿಳಿಸುತ್ತದೆ[11]. ಈ ಕೆರೆಯನ್ನು ಬ್ರಹ್ಮರಾಶಿಯ ಪಂಡಿತನ ಮಗ ಪೆಗ್ಗರಡೆ ಮಲ್ಲಿಯಣ್ಣ ಕಟ್ಟಿಸಿದ.

ಕೊತ್ತತ್ತಿ ಶಾಸನವು (ಮಂಡ್ಯ) ಕೊತ್ತತ್ತಿಯಲ್ಲಿ ಹಲವಾರು ಗೌಡರು ಸೇರಿಕೊಂಡು ಆಲದಹಳ್ಳಿಯ ಕೆರೆಯನ್ನು ಕಟ್ಟಿಸಿದ್ದರು. ಇದು ಹೊಯ್ಸಳರ ವೀರಬಲ್ಲಾಳನ ಕಾಲದ್ದು.[12] ಇಲ್ಲಿ ಊರಿನ ಜನರೆ ಕೆರೆಯನ್ನು ನಿರ್ಮಿಸಿದರು. ಊರಿಗೆ ಬೇಕಾದ ನೀರಿನ ಸೌಲಭ್ಯವನ್ನು ಮತ್ತು ವ್ಯವಸಾಯದ ಉದ್ದೇಶಕ್ಕೆ ಈ ಕೆರೆಯ ನೀರನ್ನು ಉಪಯೋಗಿಸಿದ್ದಾರೆ. ಮತ್ತೆ ಅದರ ಉಸ್ತುವಾರಿಗೆ ಜನರೆ ಕೆಲವು ವ್ಯಕ್ತಿಗಳನ್ನು ನಿಯೋಜಿಸಿದ ಬಗ್ಗೆ ಹೇಳಿದೆ.

ಶ್ರೀರಂಗಪಟ್ಟಣದ ಅರಕೆರೆಯ ಶಾಸನ ಇಡೆಯನಾದ ಅರಕೆರೆಯ ವಿಟುಕನ ಬಿದಯ್ಯನ ಕಾಚಿಗೊಣ್ಣ ಪಲ್ಲವರಾಯ ರಾಜ ವಿದ್ಯಾಧರ ಅಯಿರಮೆನಾಯಕನರಿ ಕುಂಟೆದಮ್ಮಿಸೆಟ್ಟಿಯ ಮಗ ಒಡೆಯ ನಂಬಿಯಾದ ಉದಯಾದಿತ್ಯ ಪಲ್ಲವರಾಯ ಕಟ್ಟಿಸಿದ ಕೆರೆಯ ಬಗ್ಗೆ ತಿಳಿಸುತ್ತದೆ. ಇಲ್ಲಿಯ ಜನರ ಜೀವನ ಸಾಗಿಸಲು ಕೆರೆಯನ್ನು ನಿರ್ಮಿಸಿದ್ದನು.[13] ಇದಕ್ಕಾಗಿ ಅದರ ನಿರ್ವಹಣೆಗೆ ಭೂಮಿಯನ್ನು ಕೊಟ್ಟ ಬಗ್ಗೆ ತಿಳಿಸಿದೆ. ಹೊಯ್ಸಳರ ದೊರೆ ವಿಷ್ಣುವರ್ಧನ ಕಾಲದಲ್ಲಿ ಕಿಸೆಟ್ಟಿ ಎಂಬುವನು ಸುಖಧರೆಯನ್ನು ಆಳುತ್ತಿದ್ದ ಮಚೋಡ ಮತ್ತು ಮಾಕವ್ವೆ ಹುಟ್ಟಿದ್ದರು. ಕಶ್ಯಾಪ್ಪಗೋತ್ರದ ಕೇಸವಾದಿರ ತನ್ನ ತಂದೆ ಹೆಸರಿನಲ್ಲಿ ಮಾಚ ಸಮುದ್ರ, ತಾಯಿಯ ಹೆಸರಿನಲ್ಲಿ ಮಾಕಸಮುದ್ರ ಎಂಬ ಎರಡು ಕೆರೆಗಳನ್ನು ನಿರ್ಮಿಸಿದನು.[14] ರಾವಂದೂರು ಶಾಸನ (ಮಳವಳ್ಳಿ) 8-9ನೇ ಶತಮಾನದ ಶಾಸನ. ಗಂಗರಸ ನೀತಿ ಮಾರ್ಗ ಪೆರ್ಮಾಡಿ ಕಾಲದ್ದು. ಈ ಶಾಸನದಲ್ಲಿ ಕೆರೆ ನಿರ್ಮಿಸಿದ ಬಗ್ಗೆ ಉಲ್ಲೇಖಿಸಿದೆ.[15]

ಹಳೇಬೂದನೂರು ಶಾಸನ (ಮಂಡ್ಯ) 10-11ನೇ ಶತಮಾನದ್ದು. ಈ ಶಾಸನವು ಸೋಮರಸ ಭಟ್ಟಾರಕ ಕೆರೆಯನ್ನು ನಿರ್ಮಿಸಿದನು. ಅದಕ್ಕಾಗಿ ಬೂದನೂರಿನ ಗ್ರಾಮದ ಚಾವಯ್ಯ ಮತ್ತು ಜಯಮ್ಮ ಇವನಿಗೆ ಬಿತ್ತುವಷ್ಟು ಜಮೀನನ್ನು ನೀಡಿದ್ದರು. ಅಂದರೆ ಕೆರೆಯ ಕೆಳಗಿನ ನೀರಾವರಿ ಜಮೀನನ್ನು ಅವನಿಗೆ ನೀಡಿದ ಮಾಹಿತಿಯನ್ನು ಇದರಲ್ಲಿ ತಿಳಿಯಬಹುದು.[16] ಗಂಗರ ಸತ್ಯವಾಕ ಗೋವಿಂದ ಆಳುತ್ತಿದ್ದನು. ಹೊಯ್ಸಳರ ವಿಷ್ಣುವರ್ಧನ ಕಾಲಕ್ಕೆ ಸೇರಿದ ಸುಕದರೆ ಶಾಸನ (ನಾಮಂ) ಸುಕಧರೆಯಲ್ಲಿ ಬಸದಿಯನ್ನು ನಿರ್ಮಿಸಿದ್ದನು ಮತ್ತು ಪೂರ್ವ ದಕ್ಷಿಣವಾಗಿ ಕೆರೆಯನ್ನು ಜಕ್ಕಿಸೆಟ್ಟಿ ಎಂಬುವವನು ನಿರ್ಮಿಸಿದನು. ಅದಕ್ಕಾಗಿ ಭೂಮಿಯ ಆದಾಯ ಪಡೆದನು. ಅಲ್ಲದೆ ದಕ್ಷಿಣ ಪೂರ್ವವಾಗಿ ಚಿಕ್ಕಕೆರೆ ನಿರ್ಮಿಸಿದ ಬಗ್ಗೆ ತಿಳಿಸಿದೆ. ದ್ರಾವಿಲ ಸಂಘದ ದಯಪಾಲದೇವನಿಗೆ ಭೂಮಿಯನ್ನು ನೀಡಿದ ಬಗ್ಗೆ ಉಲ್ಲೇಖವಿದೆ.17. ತಿಪ್ಪೂರು ಶಾಸನ. (ಮದ್ದೂರು) ಹೊಯ್ಸಳರ ವೀರಬಲ್ಲಾಳ II ಕಾಲಕ್ಕೆ ಸೇರಿದ ಶಾಸನ. ಈ ಶಾಸನದಲ್ಲಿ ಪಟ್ಟಣ ಸ್ವಾಮಿಗಳಿಗೆ ನೀಡಿದ ಭೂಮಿಯ ಬಗ್ಗೆ ತಿಳಿಸುವಾಗ ಕೆರೆಯ ಹೆಸರುಗಳನ್ನು ಉಲ್ಲೇಖಿಸಿದೆ. ಕೆರೆಗಳೆಂದರೆ ಚಿಕ್ಕಕಾಟಣಕೆರೆ ಮತ್ತು ಹಿರಿಯ ಕಟಣ ಕೆರೆಯ ಬಗ್ಗೆ ಉಲ್ಲೇಖಿಸಿದೆ. ಸಾಮಾನ್ಯವಾಗಿ ಭೂಮಿಯನ್ನು ಯಾರಿಗೆ ನೀಡಿದರು ಕೆರೆಯ ಕೆಳಗಿನ ಭೂಮಿಯನ್ನು ನೀಡುತ್ತಿದ್ದರು. ಕಾರಣ ಅದು ನೀರಾವರಿಗೆ ಉಪಯೋಗಿಸಲಾಗುತ್ತಿತ್ತು. ಕೆರೆಗಳು ಅಂದಿನ ಜನರು ಜೀವವಾಗಿದ್ದವು ಎನ್ನಬಹುದು.[18]

ಹೊಯ್ಸಳರ ಸಾಮಂತ ಚಂಗಿಕುಲದ ಭರತೇಯ ನಾಯಕ ಹಿರಿಯ ಕೆರೆ ಕಟ್ಟಿಸಿದ. ಇದು 12ನೇ ಶತಮಾನಕ್ಕೆ ಸೇರಿದ ಶಾಸನ.[19] ಮಾಳನಹಳ್ಳಿ ಶಾಸನ (ಶ್ರೀರಂಗಪಟ್ಟಣ) ಇದು ಹೊಯ್ಸಳ ದೊರೆ ವೀರಬಲ್ಲಾಳನ ಕಾಲದ್ದು. ಮಾಳನಹಳ್ಳಿಯಲ್ಲಿ ಚಾಕಗಾವುಂಡನ ಮಗ ಹರದಗಾವುಂಡನು ಹರಜ ಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದನು ಮತ್ತು ಹರದೇಶ್ವರ ಎಂಬ ದೇವಾಲಯವನ್ನು ನಿರ್ಮಿಸಿದ.[20] ಹೊಯ್ಸಳರ ಮಹಾಸಾಮಂತ ದುಮೆಯನಾಯಕನು ದುಮ್ಮ ಸಮುದ್ರಯೂಡೆಯರ ಹಳ್ಳಿಯ ಹೊಸಕೆರೆ ತಟ್ಟಹಳ್ಳದ ಮಸಣ ಸಮುದ್ರ ಕಟ್ಟಿಸಿದ ಬಗ್ಗೆ ದೊಡ್ಡ ಜಟಕ ಶಾಸನ (ನಾ.ಮಂ) ತಿಳಿಸಿದೆ.[21] ವೈದ್ಯನಾಥಪುರದ ಶಾಸನ (ಮದ್ದೂರು) ಹೊಯ್ಸಳ ದೊರೆ ವೀರನರಸಿಂಹನ ಕಾಲದ್ದು. ಈ ಶಾಸನದಲ್ಲಿ ಹದಲಿಯ ಕೆರೆಯ ಬಗ್ಗೆ ಉಲ್ಲೇಖವಿದೆ.22. ಹೊಯ್ಸಳರ ರಾಜನ ನರಸಿಂಹನ ಕಾಲದ ಹೊಸಬೂದನೂರು ಶಾಸನ (ಮಂಡ್ಯ) ಇಲ್ಲಿಯ

ಮಹಾಜನಗಳು ಭೂಮಿಯ ಉಳುಮೆ ಮಾಡುತ್ತಿದ್ದರು, ನಂಬಿಪಿಳ್ಳೆಯ ಮಗ ಪುರುಷೋತ್ತಮ ದೇವನು ಒಂದು ದೊಡ್ಡ ಕೆರೆ ಕಟ್ಟಿಸಿ, ಅದಕ್ಕೆ ಕಾಲುವೆಯನ್ನು ನಿರ್ಮಿಸಿದನು. ಅಲ್ಲಿಯ ಮಹಾಜನಗಳು ಭೂಮಿಯನ್ನು ಸಾಗುವಳಿ ಮಾಡಲು ಅನುಕೂಲ ಮಾಡಿಸಿಕೊಟ್ಟನು.[23]

ಶ್ರೀರಂಗಪಟ್ಟಣದ ಪೊಡೇರಿ ಶಾಸನ ಇದು11ನೇ ಶತಮಾನಕ್ಕೆ ಸೇರಿದೆ. ಈ ಶಾಸನದಲ್ಲಿ ತಿರಿಯಮ್ಮ ಎಂಬುವವರು ದೇವಕೆರೆ ಎಂಬ ಕೆರೆಯನ್ನು ನಿರ್ಮಿಸಿದ.[24] ಕೆರೆ ನಿರ್ಮಿಸಲು ಸ್ಥಳವನ್ನು ತಿಮ್ಮಯ್ಯನು ಬಿಟ್ಟುಕೊಟ್ಟ. ಶ್ರೀರಂಗಪಟ್ಟಣದ ಅರಕೆರೆ ಶಾಸನ ತಮಿಳು ಶಾಸನವಾಗಿದ್ದು, ಆಯಿರಮೆನಾಯಕ ಉದಯ್ಯಾದಿತ್ಯ ಪಲ್ಲವರಾಯನ ಕೆರೆಗೆ ಏರಿಯನ್ನು ಕಟ್ಟಿಸಿದನು. ಇದು 11ನೇ ಶತಮಾನದ ಶಾಸನ.[25]

ಹರಿಹರಪುರ ಶಾಸನ (ಕೃ.ರಾ.ಪೇಟೆ) ಹೊಯ್ಸಳ ಕಾಲದ ಶಾಸನ. ಈ ಶಾಸನದಲ್ಲಿ ಹರಿಹರ ಭಟ್ಟೋಪಾಧ್ಯರಿಗೆ ಕೆರೆ ಮತ್ತು ಕಾಲುವೆ ನಿರ್ಮಿಸಿದ್ದಕ್ಕಾಗಿ ಅದರ ನಿರ್ವಹಣೆಗಾಗಿ ರಾಜನು ಪ್ರತಿವರ್ಷ ಅದರ ದುರಸ್ತಿಗೆ ಹಳ್ಳಿಗಳ ಹೆಜ್ಜುಂಕ ಮತ್ತು ನಾಡ ಸುಂಕ ಕೊಟ್ಟ ಬಗ್ಗೆ ಉಲ್ಲೇಖಿಸಿದೆ. ಹರಿಹರ ಪುರದ ಮಹಾಜನಗಳಿಗೆ ಬಲ್ಲಾಳ ದೇವರು ನಾಡ ಸುಂಕ ಕರುಣಿಸಿದ ಬಗ್ಗೆ ತಿಳಿಸುತ್ತದೆ.[26] ಮದ್ದೂರಿನ ಅರುವನಹಳ್ಳಿ ಶಾಸನ ಹೊಯ್ಸಳ ಅರಸ ವೀರಬಲ್ಲಾಳ -III ಕಾಲಕ್ಕೆ ಸೇರಿದ್ದು. ಬಡವರ ಕುಟುಂಬಕ್ಕೆ ಸೇರಿದ ಕೀರ್ತಿರಾಯರಿಗೆ ಕೆರೆಗಳಿಗೆ ಕಾಲುವೆಯನ್ನು ನಿರ್ಮಿಸಲು ಭೂಮಿಯನ್ನು ಅಥವಾ ಸ್ಥಳವನ್ನು ಕೊಟ್ಟ ಬಗ್ಗೆ ಹೇಳಿದೆ.[27]

ಬೆಳ್ಳೂರು ಶಾಸನ (ನಾಮಂ) ಹೊಯ್ಸಳರ ನರಸಿಂಹ-III ಕಾಲದ್ದು. ಬೆಳ್ಳೂರಿನ ಮಹಾಜನಗಳಿಗೆ ಪೆರುಮಾಲೆದೇವ ಡಣ್ಣಾಯನಾಯಕರು ಧ್ರುವನಾರಾಯಣ ಪುರವಾದ ಬೆಳ್ಳೂರು ಅಲ್ಲಾಳಸಮುದ್ರ, ಅಪ್ಪೆಯಕೆರೆ, ತಗಚೆಗೆರಿ ಗದ್ದೆ ಕಾಲುವೆಗಳನ್ನು ಧ್ರುವ-ಜಲವ ಹಂತವಾಗಿ ಕಟ್ಟಿಸಿರುವುದಾಗಿ, ಈ ಕೆರೆಗಳ ಕಟ್ಟೆ ಕಾಲುವೆಯ ಪಥದಲ್ಲಿ ಬೆಡ್ಡಲು ಭೂಮಿಯನ್ನು ಅವನಿಗೆ ಬಿಟ್ಟರು. ಈ ಕೆರೆಗಳಿಂದ ಮಾಧವ ದೇವರ ಗದ್ದೆಗೆ ನೀರು ಕೊಡುತ್ತಿದ್ದ ಬಗ್ಗೆ ತಿಳಿಸಿದೆ.[28]

ದೊಡ್ಡ ಗರುಡನಹಳ್ಳಿ ಶಾಸನ (ಮಂಡ್ಯ) ಹೊಯ್ಸಳ ವೀರ ನರಸಿಂಹನ ಕಾಲದ್ದು. ಈ ಶಾಸನದಲ್ಲಿ ಮರಡೀಪುರ ಮತ್ತು ಗರುಡನಹಳ್ಳಿ ಗಡಿ ಬಗ್ಗೆ ವಿವಾದ ಉಂಟಾದಾಗ ಊರಿನ ಗಡಿಯನ್ನು ಗುರುತಿಸುವಾಗ ಕೆರೆಯ ಬಗ್ಗೆ ಹೇಳಿದೆ. ಆ ಕಾಲದಲ್ಲಿ ವಿವಾದವನ್ನು ಪರಿಹರಿಸುವಲ್ಲಿ ಕೆರೆಗಳನ್ನು ಗಡಿಯ ರೇಖೆಗಳಾಗಿ ಗುರುತಿಸುತ್ತಿದ್ದರು.[29] ಮದ್ದೂರಿನ ಅರುವನಹಳ್ಳಿ ಶಾಸನ ವಿಜಯನಗರ ಕಾಲದ್ದು. ಬುಕ್ಕರಾಯ ಮಹಾರಾಯರು ಆಡಳಿತ ನಡೆಸುತ್ತಿದ್ದರು. ಅರುವನಹಳ್ಳಿಯಲ್ಲಿ ಬಾಚಪ್ಪ ಎಂಬುವನ್ನು ಕೆರೆಗಳಿಗೆ ಏರಿಯನ್ನು ಕಟ್ಟಿಸಿ, ಆ ಏರಿಯಲ್ಲಿ ಸಾಲು ಮರಗಳನ್ನು ನಡೆಸಿದನು.[30] ಮದ್ದೂರಿನ ಆತಗೂರಿನ ಶಾಸನ ಹೊಯ್ಸಳರ ರಾಜ ವೀರಬಲ್ಲಾಳ ಕಾಲದ್ದು. ಆತಗೂರಿನಲ್ಲಿ ಹಿರಿಯ ಕೆರೆಯನ್ನು ಕಟ್ಟಿಸಿದ ಬಗ್ಗೆ ಉಲ್ಲೇಖಿಸಿದೆ. ಅಲ್ಲದೆ ಆ ಕೆರೆಯ ಉಸ್ತುವಾರಿಗೆ ಭೂಮಿಯನ್ನು ಬಿಟ್ಟ ಬಗ್ಗೆ ತಿಳಿಸುತ್ತದೆ. ಜೊತೆಗೆ ಅರಮನೆಯ ಕಟ್ಟಿಸಿದ ಬಗ್ಗೆ ಹೇಳಿದೆ.[31]

ಮದ್ದೂರಿನ ಅರುವನಹಳ್ಳಿಯ ಮತ್ತೊಂದು ಶಾಸನ ವಿಜಯನಗರ ಅರಸ ವೀರನರಸಿಂಹನ ಕಾಲದಲ್ಲಿ ಭಟ್ಟರ ಬಾಚಿಯಪ್ಪನ ಮಗ ಕೀರ್ತಿದೇವ ಹೊಸ ಕೆರೆಗಳನ್ನು ಕಟ್ಟಿಸಿದ. ಅವನು ರಾಜನ ಹೆಸರಿನಲ್ಲಿ, ತಾಯಿಯ ಹೆಸರಿನಲ್ಲಿ, ತಂದೆಯ ಹೆಸರಿನಲ್ಲಿ ಇನ್ನು ಮುಂತಾದ ಹೆಸರಿನಲ್ಲಿ ಕೆರೆಗಳನ್ನು ನಿರ್ಮಿಸಿದನು. ಕೆರೆಗಳೆಂದರೆ ಬುಕ್ಕರಾಯ ಸಮುದ್ರ, ಕೀರ್ತಿ ಸಮುದ್ರ, ಮಾಳವೆಯಕೆರೆ, ನಾಗವ್ವೆಯ ಕೆರೆ, ಬಾಚಪ್ಪನ ಕೆರೆ, ಚೌಡಪ್ಪನ ಕೆರೆಯನ್ನು ನಿರ್ಮಿಸಿದ್ದನು.[32] ದಡಗ ಶಾಸನ (ನಾಮಂ) ದಲ್ಲಿ ಶ್ವರಪುರವಾದ ನಹಳ್ಳಿಯಲ್ಲಿ ಕ್ಷಮನ ಕೆರೆಯನ್ನು ಕಟ್ಟಿಸಿ ಅದು ಚತುರ್ಸೀಮೆಯಲ್ಲಿ ಎಲ್ಲಾ ಧರ್ಮದ ಜನರು ಅನುಭವಿಸಿಕೊಂಡು ಬರಲು ಈ ಶಾಸನದಲ್ಲಿ ಬರೆಸಲಾಗಿದೆ.[33]

ಶ್ರೀರಂಗಪಟ್ಟಣದ ಶಾಸನದಲ್ಲಿ ವಿಜಯನಗರದ ಅರಸ ದೇವರಾಯ-II ಆಳ್ವಿಕೆಯ ಕಾಲಕ್ಕೆ ಸೇರಿದೆ. ಆಗಿನ ಅಗ್ರಹಾರಗಳ ಗಡಿಯನ್ನು ಗುರುತಿಸುವಾಗ ಆದಿಗುಡಯ್ಯ ಕೆರೆ ಬಗ್ಗೆ ಉಲ್ಲೇಖಿಸಿದೆ. ಅಲ್ಲಿ ಕೆರೆ ಇದ್ದ ಬಗ್ಗೆ ಮಾಹಿತಿ ಲಭಿಸುತ್ತದೆ. ಚಂದಗಾಲು ಮತ್ತು ಪ್ರತಾಪ ದೇವರಾಯಪುರ, ಚಂದಗಾಲು ಮತ್ತು ಬೆಳಗೊಳ ಸೀಮೆ ಹೀಗೆ ಶಾಸನದಲ್ಲಿ ಉಲ್ಲೇಖಿಸಿದೆ.[34] ನಾಗಮಂಗಲ ಬೆಳ್ಳೂರು ಶಾಸನ ಕೃಷಿ ಉದ್ದೇಶದಿಂದ ಕೆರೆಗಳಿಗೆ ಕಾಲುವೆಗಳನ್ನು ನಿರ್ಮಿಸಿದ .

ಆದರ ಮೂಲಕ ಗದ್ದೆಗಳಿಗೆ ನೀರನ್ನು ಉಪಯೋಗಿಸಿಕೊಂಡು ಜನರು ಕೃಷಿ ಚಟುವಟಿಕೆಯನ್ನು ಮಾಡಲು ಅನುಕೂಲ ಮಾಡಿಕೊಟ್ಟ. [35]

ಮದ್ದೂರು ಶಾಸನ 13ನೇ ಶತಮಾನಕ್ಕೆ ಸೇರಿದೆ. ತ್ರಿಭುವನ ಚಕ್ರವರ್ತಿ ಕೊನೇರಿಮ್ಮೆ ಕೊಣ್ಡಾನು ಮದ್ದೂರು ಮಹಾಜನರು ಕೆರೆಯನ್ನು ನಿರ್ಮಿಸಿದಕ್ಕೆ, ಜೊತೆಗೆ ಕಾಲುವೆಯನ್ನು ತೋಡಿಸಿದಕ್ಕೆ, ಏರಿಯನ್ನು ನಿರ್ಮಿಸಿದ ಬಗ್ಗೆ ಮಾಹಿತಿ ಇದೆ. ಇದಕ್ಕಾಗಿ ಬಿತುವಟ್ಟ ಭೂಮಿಯನ್ನು ನೀಡಿದ್ದಾರೆ.[36] ಗುತ್ತಲು ಶಾಸನ (ಮಂಡ್ಯ) ದಲ್ಲಿ ಚಾಮಯ ಕೆರೆ ಎಂಬ ಹೆಸರು ಇದೆ. ಇದು 13-14ನೇ ಶತಮಾನದ್ದು. ಬಗಾಡಿ ಧರ್ಮಕ್ಕೆ ಈ ಕೆರೆಯ ಕೆಳಗಿನ ಭೂಮಿಗೆ ತೂಬಿನ ಮೂಲಕ ನೀರನ್ನು ಒದಗಿಸಲಾಯಿತು.[37] ಪಾಂಡವಪುರದ ಹರವು ಶಾಸನವು 13-14ನೇ ಶತಮಾನಕ್ಕೆ ಸೇರಿದ್ದು, ಇಲ್ಲಿ ಪಿರಿಯನ ಒಡೆಯ ಸೀತಾರಾಮ ಎಂಬುವರು ಚನ್ನರಾಯ ಸಾಗರಕ್ಕೆ ತೂಬನ್ನು ಅಳವಡಿಸಿದ ಬಗ್ಗೆ ಹೇಳುತ್ತದೆ. ಇಲ್ಲಿ ಕೆರೆಗೆ ತೂಬನ್ನು ನಿರ್ಮಿಸಿ ಕೆರೆಯ ಕಳಗಿನ ಬಯಲಿಗೆ ನೀರನ್ನು ಒದಗಿಸುವ ಕೆಲಸ ಮಾಡಲಾಯಿತು.[38] ನಾಗಮಂಗಲ ಶಿವನಹಳ್ಳಿ ಶಾಸನವು ಕದರನಾಯಕನ ಮಗ ಬಲಿಗುಂದಿ ತಿಪ್ಪಯ್ಯನು ಕೆರೆಯನ್ನು ಕಟ್ಟಿಸಿದನು. ಕ್ರಿ.ಶ. 1453 ರಲ್ಲಿ ಕಟ್ಟಿಸಿದ ಬಗ್ಗೆ ತಿಳಿಸುತ್ತದೆ.[39] ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಕೆರೆಗಳು ಇರುತ್ತಿದ್ದವು.

ನಾಗಮಂಗಲದ ಕೆಳಗೆರೆ ಶಾಸನ ವಿಜಯನಗರ ಅರಸ ದೇವರಾಯನ ಕಾಲಕ್ಕೆ ಸೇರಿದೆ. ಕೆಳಂಗೆರೆ ವರದಯ್ಯ ನಾಯಕನ ಮಗ ಹಿರಿಯ ಹೊನ್ನಯ್ಯ ನಾಯಕನು ಶೂದ್ರವಾಡವಾಗಿದ್ದನು. ಅಗ್ರಹಾರವಾಗಿ ಮಾಡಿ ಕೆರೆಯನ್ನು ಜೀರ್ಣೋದ್ಧಾರ ಮಾಡಿದನು. ನಂತರ ಕೆರೆಗೆ ವರದರಾಜ ಸಮುದ್ರ ಎಂದು ಕರೆದನು.[40] ಮಳವಳ್ಳಿಯ ನೆಟ್ಟಕಲ್ಲು ಶಾಸನ ಇದು ವಿಜಯನಗರ ಅರಸ ಅಚ್ಚುತರಾಯನ ಕಾಲದ್ದು. ಧನಗೂರು ಸೀಮೆಯ ಸಿದ್ದಪ್ಪ ಒಡೆಯನ ಮಗ ಚಿಕ್ಕಸಿದ್ದಪ್ಪನಿಗೆ ಗ್ರಾಮದ ಶಿಲಾಶಾಸನವೆಂದರೆ ತಲಕಾಡು ಸೀಮೆಗೆ ಸಲ್ಲುವ ಧನಗೂರು ಸೀಮೆಯೊಳಗಿನ ನೆಟ್ಟಗಲ್ಲು ಗ್ರಾಮವನ್ನು ನಿನಗೆ ಪಾಲಿಸಿ ಅಥವಾ ಕರುಣಿಸಿ ಮಾಯಣ್ಣನ ಪುರದ ಕೆರೆಯ ಕೆಳಗೆ ಬರುವ ಗದ್ದೆಯನ್ನು ನೀಡಿದ ಬಗ್ಗೆ ಉಲ್ಲೇಖಿಸಲಾಗಿದೆ.[41] .

ಮೇಲುಕೋಟೆ ಶಾಸನ (ಪಾಂಡವಪುರ) ವಿಜಯನಗರದ ಮಲ್ಲಿಕಾರ್ಜುನ ಕಾಲದ್ದು ಮತ್ತು ಪ್ರೌಢದೇವರಾಯನ ಕಾಲದಲ್ಲಿ ಮತ್ತಷ್ಟು ವಿಷಯವನ್ನು ಸೇರಿಸಲಾಗಿದೆ. ಮೇಲುಕೋಟೆಯ ಕಾಲಾವಳಿ ಕುಳ ಬಲ್ಲೇನಹಳ್ಳಿ, ಯಲದಹಳ್ಳಿಯ ಗ್ರಾಮಗಳೆರಡು. ಇವೆರಡರ ನಡುವ ಇರುವ ಕೆರೆಯ ಕೆಳಗೆ ಈ ಗ್ರಾಮಗಳ ಕೆರೆ ನೀರಾವರಿಯಲ್ಲಿ ಬಲ್ಲೇನಹಳ್ಳಿ ಸೀಮೆಯಲ್ಲಿ ಹಂಗಾಮಿಯಾಗಿ ಬೆಳೆಯನ್ನು ಮಠದ ಧರ್ಮಕಾರ್ಯಕ್ಕೆ ಬಳಸುವ ಬಗ್ಗೆ ಹೇಳಲಾಗಿದೆ. ಇಲ್ಲಿ ಮಠಗಳಿಗೆ (ತರೀಭೂಮಿ) ನೀರಾವರಿ ಜಮೀನನ್ನು ಅದರ ಉಪಯೋಗಕ್ಕೆ ಬಿಟ್ಟಿರುವುದನ್ನು ಹೇಳಲಾಗಿದೆ.[42]

ಮೇಲುಕೋಟೆಯ ಶಾಸನ (ಪಾಂಡವಪುರ) ವಿಜಯನಗರದ ಅರಸ ವಿರೂಪಾಕ್ಷನ ಕಾಲದ್ದು. ಈ ಶಾಸನದಲ್ಲಿ ವೈಷ್ಣವರಿಗೆ ಕುಲಿಯ ಕೆಲೆಯ ಕಾಲಾವಳಿ ನಳಿನಹಳ್ಳಿ ಗ್ರಾಮದ ನಿವೇಶನ ಮತ್ತು ಪರಂಕುಶ ಸಮುದ್ರದ ಕೆರೆಯ ಕೆಳಗಿನ ಭೂಮಿಯನ್ನು ಇವರಿಗೆ ಕೊಟ್ಟ ಬಗ್ಗೆ ತಿಳಿಸಲಾಗಿದೆ.[43] ಕುಲಿಯ ಕೆರೆಯಲ್ಲಿ ಪರಂಕುಶ ಸಮುದ್ರ ಇದ್ದ ಬಗ್ಗೆ ನಾವು ಗುರುತಿಸಬಹುದು. ಮಂಡ್ಯದ ಹೊಳಲಿನ ಶಾಸನ 14-15 ಶತಮಾನಕ್ಕೆ ಸೇರಿದೆ. ಇದು ವಿಜಯನಗರ ಅರಸರ ಬುಕ್ಕಣ್ಣ ಒಡೆಯರ ಕಾಲದ್ದು. ಬೆಯಿರೆಯ ದಂಡ್ನಾಯಕರಿಗೆ ಹೊಳಲಿನ ಬಲಿಯ ಕೆರೆಯನ್ನು ನೋಡಿಕೊಳ್ಳಲು ಹೇಳಿದನು. ಇಂದಿಗೂ ಹೊಳಲಿನಲ್ಲಿ ಈ ಕೆರೆ ಇದೆ. ಇದಕ್ಕೆ 'ತೊಂಡೆ ಕೆರೆ' ಎಂದು ಹೆಸರು. ಇದು ಇಲ್ಲಿಯ ಜನರಿಗೆ ನೀರನ್ನು ಒದಗಿಸುವ ಕೆರೆಯಾಗಿದೆ.[44]

ಮಂಡ್ಯದ ಬಸರಾಳು ಶಾಸನ ಹೊಯ್ಸಳರ ವೀರನರಸಿಂಹನ-II ಕಾಲಕ್ಕೆ ಸೇರಿದೆ. ಈ ಶಾಸನದಲ್ಲಿ ಬಸರಾಳುವಿನಲ್ಲಿ ಹೊಯ್ಸಳರ ಪ್ರಧಾನ ತೆನಡನ್ನಕ ಕುಟುಂಬದವರು ಕೆರೆಯನ್ನು ಕಟ್ಟಿಸಿದರು. ಇವರ ಮೂರು ಜನ ಅಣ್ಣಂದಿರು ಮಲ್ಲಿಕಾರ್ಜುನ ದೇವಾಲಯ ಮತ್ತು ಕೆರೆ ಕಟ್ಟಿಸಿದರು. ನಂತರ ಅವರು ತನ್ನ ತಂದೆ ತಾಯಿ ಹೆಸರನ್ನು ಕೆರೆಗೆ ಇಟ್ಟರು. ಅದರ ಹೆಸರು 'ಬಸರುವಾಳ' ಎಂದು. ಇದರಿಂದ ರಾಜನು ಅವರಿಗೆ ಭೂಮಿಯನ್ನು ಕೊಟ್ಟ ನೀಡಿದ್ದನು.[45]

ಮಂಡ್ಯದ ಕಿರಗಂದೂರು ಶಾಸನ 15-16ನೇ ಶತಮಾನಕ್ಕೆ ಸೇರಿದೆ. ಈ ಶಾಸನದಲ್ಲಿ ಕಿರಗಂದೂರು ಗುಳ್ಳಯ್ಯನ ಮಗ ಲಕ್ಕಯ್ಯ, ಮಂಚಯ್ಯನ ಮಗ ಆದಿಮಂಡಲ, ಕಾಜನ ಮಗ

ಕಾಳೋಜ ಕಟ್ಟಿಸಿದ ಕೆರೆ. ಈ ಕೆರೆಗೆ ಕಿರಗಂದೂರು ಗಾವುಂಡರು ಅವರ ಹೆಸರಿನ ಕಿರುಗೌಡರ ಕೆರೆ ಕಟ್ಟದಕ್ಕೆ ಭೂಮಿಯನ್ನು ಅದರ ನಿರ್ವಹಣೆಗೆ ಕೊಟ್ಟ ಬಗ್ಗೆ ಶಾಸನದಲ್ಲಿ ತಿಳಿಸುತ್ತದೆ.[46]

ಕೆರಗೋಡು ಶಾಸನ (ಮಂಡ್ಯ) 15-16ನೇ ಶತಮಾನಕ್ಕೆ ಸೇರಿದೆ. ಹರಬಾನೂರು ಚಿಕ್ಕಪ್ಪಯ್ಯನಿಗೆ ಹುಣಗನ ಕೆರೆ ತೂಬನ್ನು ಹಾಕಿದ್ದಕ್ಕೆ ಭೂ ದಸವಂದ ತೆರಿಗೆಯ ಹಣವನ್ನು ಕೊಟ್ಟ ಬಗ್ಗೆ ತಿಳಿಸಿದೆ. 47. ನಾಗಮಂಗಲದ ಮಾದಹಳ್ಳಿ ಶಾಸನ 16ನೇ ಶತಮಾನಕ್ಕೆ ಸೇರಿದೆ. ಈ ಶಾಸನ ಭೂಮಿಯನ್ನು ಕೊಡುಗೆಯಾಗಿ ನೀಡಿದೆ. ಇಲ್ಲಿ ಪ್ರಧಾನ ಬೆನಕರಸನ ಕೆತ್ತಿಯಪ್ಪನಿಗೆ ಕೆರೆಯನ್ನು ಕಟ್ಟುವ ಸಲುವಾಗಿ ಭೂಮಿಯ ಕೊಟ್ಟ ಬಗ್ಗೆ ಈ ಶಾಸನ ತಿಳಿಸುತ್ತದೆ.[48] ನಾಗಮಂಗಲದ ರಾಮಚಂದ್ರಪುರ ಶಾಸನ 16-17ನೇ ಶತಮಾನಕ್ಕೆ ಸೇರಿದೆ. ಈ ಶಾಸನದಲ್ಲಿ ಕೆರೆ ಕಟ್ಟಿದ ಬಗ್ಗೆ ತಿಳಿಸಿದೆ. ಇಲ್ಲಿ ಕೆರೆಯನ್ನು ರಾಮಚಂದ್ರ ಹೆಬಾರು ನಿರ್ಮಿಸಿದನು.[49]

ದೊಂದೆ ಮಾದಹಳ್ಳಿ (ನಾಗಮಂಗಲ) ಶಾಸನ. ನೀರಾವರಿಯ ಉದ್ದೇಶದಿಂದ ಕೆರೆಯನ್ನು ನಿರ್ಮಿಸಿದ. ಕೆರೆಯ ಹೆಸರು ಮಾಯಿದೇವಿಯ ಕೆರೆ. ಕೆರೆಯನ್ನು ಜಂನಿಕೋಚಿ ಮಗ ವಿರಣ್ಣ ಕಟ್ಟಿಸಿದ್ದನು. ಈ ಕೆರೆಯು ಹೊಸಹಳ್ಳಿಯಲ್ಲಿದೆ. ಇದನ್ನು ನಾಗಮಂಗಲ ಮಹಾಜನತೆಗೆ ಕೊಡುಗೆಯಾಗಿ ಕೊಟ್ಟ ಕೆರೆಯಾಗಿದೆ.[50] ಪಾಂಡವಪುರದ ಮೇಲುಕೋಟೆ ಶಾಸನ ಮೈಸೂರಿನ ಒಡೆಯ ಕೃಷ್ಣರಾಜ ಒಡೆಯರ ಕಾಲದ್ದು. ಕಂಚಿಯ ವರದರಾಜ ಸ್ವಾಮಿಯವರಿಗೆ 12 ಗ್ರಾಮಗಳು ಮತ್ತು 1 ಕೆರೆಯನ್ನು ನೀಡಿದ ಬಗ್ಗೆ ಉಲ್ಲೇಖಿಸಲಾಗಿದೆ. ಆ ಗ್ರಾಮ ಮತ್ತು ಕೆರೆ ಜೀರ್ಣೋದ್ಧಾರ ಪೂರಕವಾಗಿ ದಾನ ಮಾಡಿದ ಬಗ್ಗೆ ತಿಳಿಸುತ್ತದೆ. ಕೆರೆಯ ಜೊತೆ ಕೃಷಿ ಯೋಗ್ಯ ಭೂಮಿಯನ್ನು ದಾನವಾಗಿ ನೀಡಲಾಗಿದೆ.51. ಕಬ್ಬಾರೆ ಶಾಸನವು (ಮದ್ದೂರು) ಕೆರೆಗೆ ತೂಬನ್ನು ಹಾಕಿಸಿದ್ದನು. ತೂಬನ್ನು ಹಾಕಿಸಿದವನು ಬೀರಣ್ಣಗೌಡರ ಮಗ ಶಿವನಪ್ಪಗೌಡ. ಆದ್ದರಿಂದ ಅವನಿಗೆ ಭೂಮಿಯನ್ನು ಕೊಡುಗೆಯಾಗಿ ನೀಡಲಾಗಿದೆ.[52]

ಹೀಗೆ ಮೇಲೆ ಹೇಳಿದ ಶಾಸನಗಳ ವಿವರಗಳು ಮಂಡ್ಯ ಜಿಲ್ಲೆಯಲ್ಲಿ ವಿವಿಧ ರಾಜಮನೆತನಗಳ ಕಾಲದಲ್ಲಿ ಅವರ ಪ್ರಧಾನರಿಂದ,ಸಾಮಂತರಿಂದ ಜಿಲ್ಲಾದ್ಯಂತ ಕೆರೆ ನಿರ್ಮಾಣ ಮತ್ತು ಕೆರೆಗಳಿಗೆ ತೂಬು ನಿರ್ಮಿಸುವ, ಕಾಲುವೆಗಳನ್ನು ನಿರ್ಮಿಸಿರುವ ಬಗ್ಗೆ

ಹೇಳಲಾಗಿದೆ. ಈ ಕೆರೆಯ ನಿರ್ಮಾಣ ಕೇವಲ ರಾಜರು, ಅಧಿಕಾರಿಗಳು ಮಾತ್ರವಲ್ಲದೆ ಗಣ್ಯ ವ್ಯಕ್ತಿಗಳು, ಊರಿನ ಮಂಡಲಗಳು, ಗ್ರಾಮಗಳ ಜನತೆ ಒಟ್ಟಿಗೆ ಸೇರಿ ನಿರ್ಮಿಸಿದ ಬಗ್ಗೆ ತಿಳಿಯಬಹುದು.

3.2 *ಕೆರೆಗಳ ನಿರ್ವಹಣೆ ದುರಸ್ಥಿ ಗಡಿ ಸೀಮೆಗಳಿಗೆ ಸಂಬಂಧಿಸಿದ ಶಾಸನಗಳು:*

ಕೆರೆಗಳ ದುರಸ್ತಿ ನಿರ್ವಹಣೆ ಎಂದರೆ ಕೆರೆಯಲ್ಲಿ ಹೂಳು ತುಂಬಿದರೆ ಅದನ್ನು ತೆಗೆಸುವ ಕೆರೆ ಒಡೆದುಹೋಗಿದ್ದರೆ ಅದನ್ನು ರಿಪೇರಿ ಮಾಡಿಸುವ, ಕಾಲುವೆಗಳಿಲ್ಲದಿದ್ದರೆ ಅದನ್ನು ತೋಡಿಸುವ, ತೂಬುಗಳು ಕೆಟ್ಟು ಹೋಗಿದ್ದರೆ ಅದನ್ನು ರಿಪೇರಿ ಮಾಡಿರುವ, ದುರಸ್ತಿ ಪಡಿಸುವ ಬಗ್ಗೆ ಶಾಸನಗಳಿಂದ ತಿಳಿಯಬಹುದು. ಜೊತೆಗೆ ಕೆರೆಗಳನ್ನು ಗಡಿಸೀಮೆಯನ್ನು ಗುರುತಿಸಲು ಉಪಯೋಗಿಸಿರುವ ಬಗ್ಗೆ ತಿಳಿಯಬಹುದು. ಅಂತಹ ಶಾಸನಗಳನ್ನು ಈ ಕೆಳಗಿನಂತೆ ಪರಿಶೀಲಿಸಲಾಗಿದೆ.

ನಾಗಮಂಗಲದ ಬಿಳಗುಂದ ಶಾಸನ. ಈ ಶಾಸನ 9-10ನೇ ಶತಮಾನಕ್ಕೆ ಸೇರಿದೆ. ಈ ಶಾಸನದಲ್ಲಿ ಬಿಳಿಯ್ಯ ಎಂಬ ವ್ಯಕ್ತಿ ಕರಿಯ್ಯ ಬಿಳಿಗುಂದ ಎಂಬ ವ್ಯಕ್ತಿಗೆ ಕೆರೆಯ ನಿರ್ವಹಣೆಗಾಗಿ ಬಿತ್ತುವಟ್ಟು ಜಮೀನನ್ನು ಆ ವ್ಯಕ್ತಿಗೆ ಕೊಟ್ಟ ಬಗ್ಗೆ ತಿಳಿಸುತ್ತದೆ. ಆ ಜಮೀನು ಪಡೆದ ವ್ಯಕ್ತಿ ಕೆರೆಗೆ ಸಂಬಂಧಿಸಿದಂತೆ ಅದರ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿದ್ದನು. ಅವನು ವಂಶಪಾರಂಪರ್ಯವಾಗಿ ಅನುಭವಿಸಲು ಅವನಿಗೆ ಭೂಮಿಯನ್ನು ಕೊಡಲಾಗಿತ್ತು.[53]

ಹಟ್ಣ ಶಾಸನ (ನಾಗಮಂಗಲ) ಇದು ಹೊಯ್ಸಳರ ವಂಶವೃಕ್ಷವನ್ನು ಬಲ್ಲಾಳ-II ರವರೆಗೆ ಹೇಳಿದೆ. ಪಟ್ಟಣ ಸ್ವಾಮಿ ಸೋವಿ ಶೆಟ್ಟಿಯು 3 ಕೆರೆಗಳನ್ನು ಕಟ್ಟಿಸಿದನು. ಜೊತೆಗೆ ಬಸದಿ ಜೀರ್ಣೋದ್ಧಾರ ಮಾಡಿಸಿದ್ದಾನೆ.[54] ಬೆಳ್ಳೂರು ಶಾಸನ (ನಾಗಮಂಗಲ) ಹೊಯ್ಸಳ ಕಾಲದ್ದು. ಇಲ್ಲಿ ಹೊಯ್ಸಳ ಸಾಮಂತರ ಬಗ್ಗೆ ತಿಳಿಸುತ್ತದೆ. ಮಾಚ ಸಮುದ್ರದ ಅದರ ನಿರ್ವಹಣೆಗಾಗಿ ಭೂಮಿಯನ್ನು ಬಿಟ್ಟ ಬಗ್ಗೆ ತಿಳಿಸಿದೆ.[55]

ಬೆಳ್ಳೂರು ಶಾಸನ (ನಾಗಮಂಗಲ) ಹೊಯ್ಸಳರ ನರಸಿಂಹ-III ಕಾಲಕ್ಕೆ ಸೇರಿದ ಶಾಸನ. ಕೆರೆ ಕಾಲುವೆ ದುರಸ್ತಿಗಾಗಿ ಮಹಾಜನರಿಗೆ ಅಂದರೆ ಮಂಡಲಕ್ಕೆ ಭೂಮಿಯನ್ನು ಬಿಟ್ಟ ಬಗ್ಗೆ ಹೇಳಿದೆ. ಇದು ಬೆಳ್ಳೂರಿನ ಅಲ್ಲಾಳ ಸಮುದ್ರ ಮತ್ತು ಇನ್ನಿತರೆ ಕೆರೆಗಳ ಬಗ್ಗೆ ಉಲ್ಲೇಖಿಸಿದೆ.[56]

ಮದ್ದೂರಿನ ಶೆಟ್ಟಹಳ್ಳಿ ಶಾಸನ. ಇದರಲ್ಲಿ ಕೆರೆಯ ಉಸ್ತುವಾರಿಗಾಗಿ ಆಸೆವಯ್ಯನ ಮಗ ಅರಿಯಮ್ಮ ಶೆಟ್ಟಿಗೆ ಬಿತ್ತುವಟ್ಟ ಜಮೀನನ್ನು ನೀಡಿದ ಬಗ್ಗೆ ಈ ಶಾಸನ ತಿಳಿಸುತ್ತದೆ.[57] ಮದ್ದೂರಿನ ದುಂಡೇನಹಳ್ಳಿ ಶಾಸನ ಹೊಯ್ಸಳರ ಕಾಲಕ್ಕೆ ಸೇರಿದೆ. ಹಿರಿಯ ಕೆರೆಯ ತೂಬನ್ನು ದುರಸ್ತಿ ಮಾಡಿದ್ದಕ್ಕೆ ಅಲ್ಲದೆ ಅದರ ನಿರ್ವಹಣೆಗೆ ಭೂಮಿಯನ್ನು ಕೊಟ್ಟ ಬಗ್ಗೆ ವಿವರಿಸಿದೆ.[58] ಪಾಂಡವಪುದ ಸೀತಾಪುರ ಶಾಸನ. ಈ ಶಾಸನವು ನೀರಾವರಿ ವ್ಯವಹಾರ ಒಂದರ ಬಗ್ಗೆ ಬೆಳಕು ಚೆಲ್ಲುತ್ತದೆ. ನಾಗಮಂಗಲ ಸಿಂಗಣ್ಣವೊಡೆಯರ ಮಗ ದೇವರಾಜನು ಕಾವೇರಿ ನದಿಗೆ ಹೊಸದಾಗಿ ಕಾಲುವೆಯನ್ನು ತೋಡಿಸಲು ತೊಡಗಿದನು. ಸ್ವಲ್ಪ ದೂರದಲ್ಲೇ ಇದ್ದ ಹರವು ಗ್ರಾಮಸ್ಥರು ಕಾಲುವೆಯನ್ನು ತಮ್ಮ ಗ್ರಾಮದವರೆಗೂ ತೋಡಿಸಿಕೊಡಬೇಕೆಂದು ಅಪೇಕ್ಷಿಸಿದರು. ಇದಕ್ಕೆ ಆತ ಒಪ್ಪಿ ಕಾಲುವೆಯನ್ನು ತನ್ನ ವೆಚ್ಚದಲ್ಲೇ ನಿರ್ಮಿಸಿದನು. ಇದಕ್ಕಾಗಿ ಹರವು ಗ್ರಾಮಸ್ಥರು ಅವನಿಗೆ ಕೃತಜ್ಞತೆಯನ್ನು ಸಲ್ಲಿಸಿದರು.[59]

ನಾಗಮಂಗಲದ ದೇವಲಾಪುರ ಶಾಸನ. ದೇವಲಾಪುರ ಕೆರೆಯ ಕೆಳಗಿನ ಭೂಮಿಯಲ್ಲಿ ತೋಟ ನಿರ್ಮಿಸಿಲು ಆದೇಶಿಸಿರುವ ಬಗ್ಗೆ ಶಾಸನದಲ್ಲಿ ಹೇಳಲಾಗಿದೆ. ಇದನ್ನು ಗೋಪಿನಾಥನ ದೇವರಿಗೆ ಅರ್ಪಿಸುವ ಬಗ್ಗೆ ತಿಳಿಸಿದೆ. ಪಾಂಡವಪುರದ ಮೇಲುಕೋಟೆಯ ಶಾಸನ ವಿಜಯನಗರರದ ಅರಸು ಶ್ರೀ ಕೃಷ್ಣ ದೇವರಾಯನ ಕಾಲದ್ದು. ಲಕ್ಷ್ಮಿಪತಿ ಶೆಟ್ಟರಿಗೆ ಬರೆಸಿಕೊಟ್ಟ ಶಾಸನವೆಂದರೆ ಚಲ್ಲಾಪಿಳಿ ರಾಯರ ಭಂಡಾರಿಕೆಗೆ ಸಲ್ಲುವ ತಿರುವರಿಯಾಟದೆ ಪುರದ ಗ್ರಾಮದ ಹೊಸ ಕೆರೆಯು ಹೊಡೆದು ಹೋಗಿರುತ್ತದೆ. ಅದರ ಸಂಬಂಧ ಆ ಕೆರೆಯ ಏರಿಯನ್ನು ನೀವು ಕಟ್ಟಿಸಿ ತೂಬನ್ನು ನಿಲ್ಲಿಸಿ ಕೋಡಿಯ ಕಡುವನ್ನು ತೆಗೆಸಿ ಆ ಕೆರೆಯನ್ನು ಜೀರ್ಣೋದ್ಧಾರ ಮಾಡಿಸಲು ಅವರಿಗೆ ಭೂಮಿಯನ್ನು ಬಿಟ್ಟ ಬಗ್ಗೆ ಲೇಖಿಸಿದೆ.[60] ಮೇಲುಕೋಟೆಯ ಶಾಸನ (ಪಾಂಡವಪುರ) ಇದು ಅಚ್ಚುತ ದೇವರಾಯನ ಕಾಲದ್ದು. ಪೆರಿರಾಜರ ಮಗ ಹರಿಗಿಲ ಅಬ್ಬರಾಜ ಹೊಸಕೆರೆ ಮತ್ತು ಕೃಷ್ಣ ದೇವಒಡೆಯರ ಕೆರೆ ರಿಪೇರಿಗಾಗಿ 150 ಗಣಸ, ಹೊಸಕೆರೆಗೆ 100, ಕೃಷ್ಣದೇವ ಒಡೆಯರ ಕೆರೆ 50 ನೀಡಿದ ಬಗ್ಗೆ ತಿಳಿಸುತ್ತದೆ.[61] ನಾಗಮಂಗಲದ ಹಾಲ್ತಿ ಶಾಸನವು ಮುದ್ದಣ್ಣನ ಮಗ ಚಿಕ್ಕಯ್ಯ ಕೆರೆಯ ನಿರ್ವಹಣೆಗಾಗಿ ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ.

ಬೀಚನಹಳ್ಳಿ ಶಾಸನ (ಮಂಡ್ಯ) ಇದು 16-17ನೇ ಶತಮಾನಕ್ಕೆ ಸೇರಿದ ಶಾಸನ. ನಾಗನಚಾರಿ ವೀರಪ್ಪ ಒಡೆಯರು ಕಂದಾಚಾರದ ತಿಪ್ಪೂರ ಸಯ್ಯನಿಗೆ ದೊಡ್ಡ ಕೆರೆಯ

ಉಸ್ತುವಾರಿಯನ್ನು ಕೊಟ್ಟ ಬಗ್ಗೆ ತಿಳಿಸುತ್ತದೆ.[62] ಪಾಂಡವಪುರ ತೊಣ್ಣೂರು ಶಾಸನವು ಮೈಸೂರಿನ ಒಡೆಯ ಕೃಷ್ಣರಾಜ-II ರ ಕಾಲದ್ದು. ಇದು ಚನ್ನನಕಟ್ಟೆ ಬಗ್ಗೆ ಹೇಳಿದೆ. ಹಳ್ಳಿಗೆ ಗಡಿ ಸೀಮೆಯನ್ನು ಗುರುತಿಸುವಾಗ ಕೆರೆಯನ್ನು ಗಡಿಸೀಮೆಯಾಗಿ ಗುರುತಿಸಿರುವುದನ್ನು ಕಾಣಬಹುದು.[63] ಮಳವಳ್ಳಿಯ ನಡಗಲ ಪುರ ಶಾಸನ. ವೀರಚಾರಿ ಯವರು ಕೊರಟಹಳ್ಳಿ ಸೋಮೇಶ್ವರ ದೇವರಿಗೆ ಭೂಮಿಯನ್ನು ಕೊಟ್ಟ ಬಗ್ಗೆ ತಿಳಿಸಿದೆ. ಅಲ್ಲದೆ ಈ ಪುರದ ಎಲ್ಲೆಯನ್ನು ಗುರುತಿಸುವಾಗ ಹದಲ ಕೆರೆಯ ಬಗ್ಗೆ ಉಲ್ಲೇಖಿಸಿದೆ.[64]

ಹೀಗೆ ಮೇಲೆ ವಿವರಿಸಿದಂತಹ ಶಾಸನಗಳು ಕೆರೆಗಳ ದುರಸ್ತಿ, ನಿರ್ವಹಣೆ, ಗಡಿ ಸೀಮೆಗಳಾಗಿ ಕೆರೆಗಳನ್ನು ಗುರುತಿಸಿದ ಬಗ್ಗೆ ಈ ಮೇಲಿನ ಶಾಸನಗಳಿಂದ ತಿಳಿಯಬಹುದು.

3.3 *ಕೆರೆಯ ಕೆಳಗಿನ ಭೂಮಿಯನ್ನು ಕೊಟ್ಟ ಬಗ್ಗೆ ಇರುವ ಶಾಸನಗಳು :*

ಮತ್ತೆ ಜಿಲ್ಲೆಯ ಕೆಲವು ಶಾಸನಗಳು ಕೆರೆಯ ಕೆಳಗಿನ ಭೂಮಿಯನ್ನು ಉಂಬಳಿಯಾಗಿ, ದಾನವಾಗಿ, ವ್ಯಕ್ತಿಗಳಿಗೆ ಇಲ್ಲವೆ ದೇವಾಲಯಗಳಿಗೆ, ಮಂಡಲಗಳಿಗೆ ಇನ್ನೂ ಮುಂತಾದ ರೀತಿಯಲ್ಲಿ ಕೆರೆಯ ಕೆಳಗಿನ ಭೂಮಿಯನ್ನು ದಾನ ದತ್ತಿ ನೀಡಿದ ಬಗ್ಗೆ ಈ ಶಾಸನಗಳಲ್ಲಿ ಕೆರೆ ಕೆಳಗಿನ ಭೂಮಿಯನ್ನು ದಾನದತ್ತಿ ನೀಡಿದ ಬಗ್ಗೆ ಉಲ್ಲೇಖವಿದೆ. ಕೆರೆಯಲ್ಲಿ ಶೇಖರಣೆಯಾದ ನೀರಿನ ಮೂಲಕ ಭೂಮಿಯನ್ನು ವ್ಯವಸಾಯಕ್ಕೆ ಉಪಯೋಗಿಸಿ ಆ ಮೂಲಕ ಬೆಳೆಗಳನ್ನು ಬೆಳೆದು ಜೀವನ ಸಾಗಿಸುತ್ತಿದ್ದರು ಮತ್ತು ಆದಾಯ ಗಳಿಸುತ್ತಿದ್ದರು. ಒಣಭೂಮಿಯನ್ನು ದಾನವಾಗಿ ಕೊಟ್ಟರೆ ಅದಕ್ಕೆ ನೀರಾವರಿ ಸೌಲಭ್ಯ ಲಭ್ಯವಿಲ್ಲದ ಕಾರಣ ಅದರಿಂದ ಯಾವುದೇ ಆದಾಯ ನಿರೀಕ್ಷಿಸುವ ಹಾಗೆ ಇರಲಿಲ್ಲ. ಈ ಕಾರಣದಿಂದಲೂ ಹಿಂದಿನ ಕಾಲದಲ್ಲಿ ಕೆರೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುವುದನ್ನು ನೋಡಬಹುದು. ೯ ಕೆಳಗೆ ಹೇಳಿದಂತಹ ಶಾಸನಗಳು ಕೆರೆಯ ಕೆಳಗಿನ ಭೂಮಿಯನ್ನು ದಾನದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ.

ಹೊಸಹಳ್ಳಿ ಶಾಸನ (ಮಳವಳ್ಳಿ). ಈ ಶಾಸನದಲ್ಲಿ ಬಾಚ್ಚೆಯ್ಯನ ದರವಾಗಿಲಿ ಕಾಲುವೆಯ, ಬೆಳತೂರು ಕೆರೆಯ ಕೆಳಗಿನ ಭೂಮಿಯನ್ನು ಕೊಡುಗೆಯಾಗಿ ನೀಡಿದೆ.[65] ಮದ್ದೂರು ವೈದ್ಯನಾಥಪುರ ಶಾಸನದಲ್ಲಿ ಪೆರುಮಾಡಿ ದೇವನು ದಳಳ ಕೆರೆಯ ಕೆಳಗಿನ ಭೂಮಿಯನ್ನು (4 ಕಂಡಿಗ) ಕೊಟ್ಟನು.[66] ಮಳವಳ್ಳಿಯ ದುಗ್ಗನಹಳ್ಳಿ ಶಾಸನವು ತಿಪ್ಪರವಳ್ಳಿಯ ಆದಿಯ ಮಂಡಲ ಸ್ವಾಮಿಯ

ಮಗ ಮಂಡಲ ಸ್ವಾಮಿಗೆ ದುಗ್ಗನಹಳ್ಳಿಯ ಮತ್ತು ನೀರಾವರಿಯಲ್ಲದ ಒಣಭೂಮಿಯನ್ನು ನೀಡಿರುವುದನ್ನು ಉಲ್ಲೇಖಿಸಿದೆ.[67] ಮದ್ದೂರಿನ ದೊಡ್ಡರಸಿನಕೆರೆ ಶಾಸನ ಧಮ್ಮಿಗೆರೆ ಕೆಳಗಿನ ಭೂಮಿಯನ್ನು ದಾನವಾಗಿ ನೀಡಿದ ಬಗ್ಗೆ ಶಾಸನದಲ್ಲಿ ಉಲ್ಲೇಖಿಸಿದೆ.[68] ನಾಗಮಂಗಲದ ಆರಣಿ ಶಾಸನ ಇದು ಗಂಗರ ಕಾಲದ್ದು, ಮಾರಸಿಂಹ -II ಮಹಾಬಲಯ್ಯ ಎಂಬ ಮಂತ್ರಿ ಆರಣಿಕೆರೆಗೆ 'ಬಿತ್ತುವಟ್ಟು' ಜಮೀನನ್ನು ಬಿಟ್ಟ ಬಗ್ಗೆ ತಿಳಿಸುತ್ತದೆ.[69] ಮದ್ದೂರಿನ ಆಬಲವಾಡಿ ಶಾಸನ , ಹೊಯ್ಸಳರ ವಿಷ್ಣುವರ್ಧನನ ಕಾಲದ್ದು. ದೇವರ ಪೂಜೆಗೆ ಖಂಡಸ್ಪಟಿಕ ಜೀರ್ಣೋದ್ಧಾರಕ್ಕೆ ದೇವರ ಕೆರೆಯ ಕೆಳಗಿನ 12 ಸಲಗೆ ಗದ್ದೆಯನ್ನು ಬಸದಿಗೆ ಬಿಡಿಸಿದ ಬಗ್ಗೆ ಹೇಳಿದೆ.[70] ನಾಗಮಂಗಲದ ಎಲೆಕೊಪ್ಪ ಶಾಸನ, 11ನೇ ಶತಮಾನಕ್ಕೆ ಸೇರಿದೆ. ಈ ಶಾಸನದಲ್ಲಿ ಮಣಿಯಮರಸನ ಕೆರೆ ಕೆಳಗೆ ಇರುವ ಭೂಮಿಯನ್ನು ಬಸದಿಗೆ ಕೊಡಲಾಯಿತು.[71]

ಕೆ.ಆರ್. ಪೇಟೆಯ ಹೊಸಹೊಳಲು ಶಾಸನ ಹೊಯ್ಸಳ ಕಾಲದ್ದು. ಶಾಸನದಲ್ಲಿ ಎರಡು ಕೆರೆಗಳ ನೀರಾವರಿ ಭೂಮಿಯನ್ನು ಬೆಟ್ಟನಾಯಕನ ಮಗ ಗಂಡನಾರಾಯಣ ಸೆಟ್ಟಿಗೆ ಕೊಟ್ಟ ಬಗ್ಗೆ ವಿವರಿಸಿದೆ.[72] ನಾಗಮಂಗಲದ ಬೋಗಾಧಿಶಾಸನ ಹೊಯ್ಸಳರ 1ನೇ ನರಸಿಂಹನ ಕಾಲದ್ದು. ಈ ಶಾಸನದಲ್ಲಿ ಲೋಕನ ಕೆರೆ, ತಲೆಯ ಕೆರೆ, ಬಲಶೆಟ್ಟಿಹಳ್ಳದ ಕೆರೆ, ದೊಡ್ಡಿನ ಕೆರೆ ಬಗ್ಗೆ ತಿಳಿಸುತ್ತದೆ. ಈ ಕೆರೆಯ ಕೆಳಗಿನ ಭೂಮಿಯನ್ನು ಜಿನಾಲಯಕ್ಕೆ ಕೊಟ್ಟಿದ್ದಾರೆ.[73] ಮದ್ದೂರು ಚೆನ್ನನ ದೊಡ್ಡಿ ಶಾಸನ ಕೆರೆಯ ಕೆಳಗಿನ ಭೂಮಿಯನ್ನು ಬಮ್ಮಾಗಾವುಂಡ ಎಂಬ ವ್ಯಕ್ತಿ ಚಿಂಬಿಶೆಟ್ಟಿಯ ಮಗ ಕೋಟೆಯಪ್ಪನಿಗೆ ದಾನವಾಗಿ ನೀರಾವರಿ ಜಮೀನನ್ನು ನೀಡಿದ ಬಗ್ಗೆ ತಿಳಿಸುತ್ತದೆ.[74]

ಬೈರಾಪುರ ಶಾಸನ ಕೆ.ಆರ್. ಪೇಟೆ. ಹೊಯ್ಸಳರ 3ನೇ ನರಸಿಂಹನ ಕಾಲದ್ದು. ಈ ಶಾಸನ ರೇಕವ್ವೆದಂಡ್ನಾಯಕತ್ತಿಯರು ತಾವು ಮಾಡಿದ ಅಗ್ರಹಾರ, ಶಿವಾಲಯ ಭೈರಾವೇಶ್ವರ ದೇವಾಲಯವನ್ನು ಕಟ್ಟಿಸಿದಕ್ಕೆ ಬೈರವಪುರದ ಹಿರಿಯ ಕೆರೆ ಮತ್ತು ಬೊಮ್ಮಿಯ ಕೆರೆ ಕೆಳಗಿನ ಭೂಮಿಯನ್ನು ತಿಪ್ಪವ್ವೆ ದಾನವಾಗಿ ಕೊಟ್ಟ ಬಗ್ಗೆ ತಿಳಿಸುತ್ತದೆ.[75] ಸುಜ್ಜಲೂರು ಶಾಸನ (ಮಳವಳ್ಳಿ) ಹೊಯ್ಸಳರ ಕಾಲದ ಶಾಸನ. ಸಿಂದರ ಮಲ್ಲಶೆಟ್ಟಿಯ ಕೌಲಿಶೆಟ್ಟಿಗೆ ಕೆರೆಯ ಕೆಳಗಿನ ಭೂಮಿಯನ್ನು ಕೊಡಲಾಗಿದೆ.[76] ಹುಸ್ಕೂರು ಶಾಸನ ಮಳವಳ್ಳಿ ಹೊಯ್ಸಳರ ಕಾಲದ್ದು. ಶಾಸನದಲ್ಲಿ ಹಿರಿಯ ಕೆರೆ ಕೆಳಗಿನ ಭೂಮಿಯನ್ನು ಸೇನಾಪತಿ ಸೀನಣ್ಣನಿಗೆ ಕೊಡುಗೆಯಾಗಿ ನೀಡಿದ ಬಗ್ಗೆ ಉಲ್ಲೇಖಿಸಿದೆ.[77] ಮಳವಳ್ಳಿ ಶಾಸನ ಇದು ವಿಜಯನಗರ ಅರಸ ದೇವರಾಯನ ಕಾಲಕ್ಕೆ ಸೇರಿದೆ. ಅಪ್ಪಯ್ಯ, ನಾಗಣ್ಣ

ಮತ್ತು ಮಹಾ ಜನಗಳು ಅರ್ಕನಾಥ ದೇವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದಕ್ಕೆ ಮತ್ತು ದೇವಾಲಯದ ದೀಪ ಉರಿಸಲು ಕೆರೆಯ ಕೆಳಗಿನ ಭೂಮಿಯನ್ನು ನೀಡಲಾಗಿದೆ.[78] ಮಳವಳ್ಳಿಯ ಸುಜ್ಜಲೂರು ಶಾಸನ ವಿಜಯನಗರದ ಅರಸ ವಿರೂಪಾಕ್ಷನ ಕಾಲದ್ದು. ಇದು ಗಡಿ ಸೀಮೆಯನ್ನು ಗುರುತಿಸುವಾಗ ಹಿರಿಯ ಕೆರೆಯ ಬಗ್ಗೆ ಉಲ್ಲೇಖಿಸಿದೆ. ಅಲ್ಲದೆ ಕಟ್ಟೆಕೆರೆ, ಕೂಳಿಕೆರೆ, ನೀರಾವರಿ ಗದ್ದೆಯನ್ನು ತಿಳಿಯಬಹುದಾಗಿದೆ.[79] ಮಳವಳ್ಳಿಯ ನಡಗಲಪುರ ಶಾಸನದಲ್ಲಿ ಹೇಳಿರುವುದೇನೆಂದರೆ, ಕೊರಟಹಳ್ಳಿಯ ಸ್ಕಂ ಕಾಮಯ್ಯನವರಿಗೆ ಕೊಟ್ಟ ಶಾಸನದ ಉಲ್ಲೇಖವೇನೆಂದರೆ, ವಿಲಾಸಗೆರೆ ಕೊಡಗೆದೆರೆ ದಾನದ ಗದ್ದೆ ಸೀಮೆಯನ್ನು ಗುರುತಿಸುವಾಗ ಕೆರೆಯನ್ನು ಮೇರೆಗಳಾಗಿ ಗುರುತಿಸಲಾಗಿದೆ.

ಹೊಸಹೊಳಲು (ಕೆ.ಆರ್. ಪೇಟೆ) ಶಾಸನದಲ್ಲಿ ಹೇಳುವುದೇನೆಂದರೆ, ಸೋಮಯ್ಯನಿಗೆ ಕೆರೆಯ ಕೆಳಗಿನ ಭೂಮಿಯನ್ನು ದಾನವಾಗಿ ನೀಡಿರುವುದನ್ನು ತಿಳಿಸಿದೆ.[80] ಮಳವಳ್ಳಿಯ ಮುಟ್ಟನಹಳ್ಳಿ ಶಾಸನ, ಉಮ್ಮತ್ತೂರಿನ ಒಡೆಯ ಚಿಕ್ಕರಾಯ ಇವರು ನಾಗಭಟ್ಟರಿಗೆ ಬರೆದುಕೊಟ್ಟ ಶಿಲಾಶಾಸನ, ಚೆಟ್ಟದನೀರು, ವಟ್ಟ, ಕೆರೆ, ಕಟ್ಟೆ ಕಾಲುವೆ ಎಲ್ಲವನ್ನು ಅನುಭೋಗಿಸಲು ಚಿಕ್ಕರಾಯಸಾಗರ ಎಂಬ ಅಗ್ರಹಾರವನ್ನು ಕೊಟ್ಟನು. ಈ ಶಾಸನ ವಿಜಯನಗರದ ನರಸಿಂಹರಾಜನ ಕಾಲದ್ದು (ತುಳುವ ಸಂತತಿ).[81] ಮಂಡ್ಯದ ಬಸರಾಳು ಶಾಸನ 14-15 ನೇ ಶತಮಾನಕ್ಕೆ ಸೇರಿದ ಕಲಿಯ ಬಯಿರಸ ನಾಯಕನ ಮಗ ಕೆಂಪ ಬಯಿರಸನಾಯಕನ 'ಯಕಟ್ಟೆ' ಎಂಬ ಕೆರೆಯ ಕೆಳಗಿನ ಭೂಮಿಯನ್ನು ಮಲ್ಲಿಕಾರ್ಜುನ ದೇವರಿಗೆ ದಾನವಾಗಿ ಕೊಟ್ಟ ಬಗ್ಗೆ ಉಲ್ಲೇಖಿಸಿದೆ.[82] ಮಂಡ್ಯದ ಚಾಮಲಾಪುರ ಶಾಸನದಲ್ಲಿ ತಿಮ್ಮರಸನು ಹುಲಿವಾನವನ್ನು ಹೊರಿನಿದೇವೊಡೆಯರಿಗೆ ಇಲ್ಲಿಯ ಕೆರೆಕಟ್ಟೆ ಕಾಲುವೆ ಅಚ್ಚುಕಟ್ಟು ಪ್ರದೇಶವನ್ನು ಅನುಭವಿಸುವುದಕ್ಕೆ ಕೊಟ್ಟ ಬಗ್ಗೆ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[83] ಹೊನ್ನೇನಹಳ್ಳಿ ಶಾಸನ (ನಾಗಮಂಗಲ). ವಿಜಯನಗರದ ಅರಸ ಸದಾಶಿವರಾಯನ ಕಾಲದ್ದು. ಇದು ತಾಮ್ರ ಶಾಸನ. ಬ್ರಾಹ್ಮಣರಿಗೆ ಗ್ರಾಮವನ್ನು ದಾನವಾಗಿ ನೀಡುವಾಗ ಎಲ್ಲೆ ಗುರುತಿಸಲು ಕೆರೆಗಳ ಬಗ್ಗೆ ತಿಳಿಸಿದೆ. ಆ ಕೆರೆಗಳೆಂದರೆ, ಹೊಡುಕೆ ಕಟ್ಟೆ ಕೆರೆ, ಮಲ್ಲಯ್ಯನ ಹಳ್ಳಿ ಕೆರೆ ಕೋಡಿಯ ಬಗ್ಗೆ ತಿಳಿಸುತ್ತದೆ.[84]

ನಾಗಮಂಗಲದ ಸುಬ್ಬರಾಯನ ಕೊಪ್ಪಲು ಶಾಸನ ಬುವನಹಳ್ಳಿಯ ಅವಸಗೌಡ ಚೌಡೇಗೌಡರಿಗೆ ಹಿರಿಯ ಕೆರೆ ಕೆಳಗೆ ಮೇಲ್ ಕೊಡುಗೆ ಭೂಮಿಯನ್ನು ನೀಡಿದನು.[85]

ಶ್ರೀರಂಗಪಟ್ಟಣದ ಶಾಸನ ಅರವಿಡು ಶ್ರೀರಂಗರ ದೇವರಾಯನ ಕಾಲದ್ದು. ಚೆಲುಕೆರೆ ಕೆಳಗಿನ ಭೂಮಿಯನ್ನು ತಿರುವೆಂಕಟಯ್ಯನ ಮಗ ಚೆಲ ವೆಂಕಟಪತಿಗೆ ಭೂಮಿಯನ್ನು ನೀಡಿದ ಬಗ್ಗೆ ತಿಳಿಸುತ್ತದೆ.[86] ಶ್ರೀರಂಗಪಟ್ಟಣದ ಅರಕೆರೆ ಶಾಸನ ಮೇಲುಕೋಟೆಯ ಚೆಲ್ಲ ಪಿಳ್ಳೆ ರಾಯರಿಗೆ ಚೆಂಗಾಳವೀರ ಮಡುವಿನ ಸೇವೆಗೆ ಅದಟ ರಾಯರು ಚಿಕ್ಕಸಿಂಗರಾಯರಿಗೆ ಕೆರೆಯ ಕೆಳಗಿನ ಜಮೀನನ್ನು ನೀಡಿದರು.[87] ಶ್ರೀರಂಗಪಟ್ಟಣ ಅರಕೆರೆಯ ಶಾಸನ ಅರಕೆರೆಯ ಪ್ರಭು ದಾಸಪ್ಪ ನಾಯಕರು ಹಿರಿಯ ಕೆರೆಯ ಕೆಳಗಿನ ಗದ್ದೆಯನ್ನು ತನ್ನ ಸೇವಕಿಗೆ ಕೊಟ್ಟ ಬಗ್ಗೆ ಉಲ್ಲೇಖಿಸಿದೆ.[88] ಮಂಡ್ಯದ ದುದ್ದ ಶಾಸನ, ಅಬ್ಬಸಮುದ್ರ ಎಂಬ ಕೆರೆಯ ಕೆಳಗೆ ಭೂಮಿಯನ್ನು ದೇವರಿಗೆ ಕೊಡುಗೆಯಾಗಿ ನೀಡಿದ ಬಗ್ಗೆ ತಿಳಿಸಿದೆ, ದೇವರ ದಿನನಿತ್ಯದ ಕಾರ್ಯಕ್ಕೆ ಅದರಿಂದ ಬರುವ ಆದಾಯವನ್ನು ಉಪಯೋಗಿಸಲಾಗುತ್ತದೆ.[89] ಮದ್ದೂರಿನ ಹೆಮ್ಮನಹಳ್ಳಿ ಶಾಸನ ಕದಿರಿಯೂರ ಕೆರೆಯನ್ನು ದಾನವಾಗಿ ಅಂಬಾದೇವಿಗೆ ನೀಡಿದರು.[90] ಕೆಸ್ತೂರು ಶಾಸನ (ಮದ್ದೂರು) ಕೆಸ್ತೂರು ಕೆರೆ ಮತ್ತು ವರದರಾಜನ ಕೆರೆ ಕೆಳಗಿನ ಭೂಮಿಯನ್ನು ಅಂಕುಶರಾಯ ಒಡೆಯರು ಹನುಮಂತ ದೇವರಿಗೆ ಕೊಡುಗೆಯಾಗಿ ನೀಡಿದ್ದಾರೆ.[91] ಬೆಳ್ಳೂರಿನ ನಾಗಮಂಗಲ ಶಾಸನ ಹೊಯ್ಸಳ ರಾಜ ನರಸಿಂಹ-III ಕಾಲಕ್ಕೆ ಸಂಬಂಧಿಸಿದೆ, ಅಲ್ಲಾಲ ಸಮುದ್ರದ ಕೆರೆಯನ್ನು ಪುನರ್ ರಚನೆ ಮಾಡಿದ ಕಾರಣಕ್ಕೆ ಆ ಕೆರೆಯ ಕೆಳಗಿನ ಭೂಮಿಯನ್ನು ಪೆರುಮಾಳ ದೇವನಿಗೆ ಕೊಡಲಾಗಿದೆ. ಅಲ್ಲದೆ ನಿರಂತರ ನೀರಾವರಿ ಪಡೆಯಲು ಅವಕಾಶ ಮಾಡಲಾಗಿದೆ.[92]

ಹೀಗೆ ಮೇಲೆ ಹೇಳಿರುವ ಶಾಸನಗಳು ಕೆರೆಯ ಕೆಳಗಿನ ಭೂಮಿಯನ್ನು ದಾನ ಕೊಡುಗೆಯ ಮೂಲಕ ವ್ಯಕ್ತಿಗಳಿಗೆ, ದೇವಾಲಯಗಳಿಗೆ ಬಸದಿಗಳಿಗೆ ಮುಂತಾದವುಗಳಿಗೆ ಕೆರೆಯ ಕೆಳಗಿನ ಭೂಮಿಯನ್ನು ರಾಜರು, ಮಂತ್ರಿಗಳು, ಗಣ್ಯ ವ್ಯಕ್ತಿಗಳು ನೀಡುತ್ತಿದ್ದನ್ನು ಪರಿಶೀಲಿಸಲಾಗಿದೆ. ಮೇಲೆ ಹೇಳಿರುವಂತೆ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರಿನ ಒಡೆಯರು ಜಿಲ್ಲೆಯ ಆಳ್ವಿಕೆಯ ಸಮಯದಲ್ಲಿ ಕೆರೆಗಳನ್ನು ನಿರ್ಮಾಣ ಮಾಡಿರುವ ಬಗ್ಗೆ ತಿಳಿಸಲಾಗಿದೆ. ಜಿಲ್ಲೆಯಲ್ಲಿ ಹೊಯ್ಸಳರ ಕಾಲದ ಅತಿ ಹೆಚ್ಚು ಶಾಸನ ದೊರಕಿದ್ದು, ಕೆರೆ ನಿರ್ಮಾಣ, ಕಾಲುವೆ ನಿರ್ಮಾಣದ ದುರಸ್ಥಿಗೆ ಸಂಬಂಧಿಸಿದೆ. ಜಿಲ್ಲೆಯಲ್ಲಿಯೇ ಅತಿ ಹೆಚ್ಚಿನ ಕೆರೆಗಳನ್ನು ನಿರ್ಮಿಸಲು ಆದ್ಯತೆ ನೀಡಿರುವುದನ್ನು ಶಾಸನಗಳಲ್ಲಿ ಉಲ್ಲೇಖಿಸಿದೆ. ಹೀಗೆ ಜಿಲ್ಲೆಯಲ್ಲಿ

ರಾಜರುಗಳು ಪ್ರಜೆಗಳ ನೀರಾವರಿ ಕಾರ್ಯಕ್ಕೆ ಪ್ರೋತ್ಸಾಹ ಕೊಟ್ಟಿದ್ದರು. ಉದಾಹರಣೆಗೆ ಕೆ.ಆರ್. ಪೇಟೆಯ ಹರಿಹರಪುರ ಶಾಸನವು ಹರಿಹರ ಭಟ್ಟೋಪಾಧ್ಯಾಯರಿಗೆ ಗ್ರಾಮಗಳನ್ನು ನೀಡಿ ಕೆರೆ ಕಟ್ಟೆಯನ್ನು ಕಟ್ಟ -ಕಾಲುವೆ ತೋಡಿಸಿ ನೀರಾವರಿಗೆ ಆದ್ಯತೆ ನೀಡಿದ ಬಗ್ಗೆ ಆ ಶಾಸನದಲ್ಲಿ ಉಲ್ಲೇಖಿಸಿದೆ. ಶ್ರೀ ಸಾಮಾನ್ಯರು ಕೆರೆಗಳನ್ನು ನಿರ್ಮಿಸುವಲ್ಲಿ ಮುಂದಾಗಿದರು. ಒಬ್ಬ ವ್ಯಕ್ತಿ ಕೆರೆಯನ್ನು ನಿರ್ಮಿಸಿದಾಗ ಅವನ ಉದ್ದೇಶ ಏನಿತ್ತು ಬೆಟ್ಟು ಮಾಡಿ ಹೇಳುವುದು ಸರಿಯಲ್ಲ. ಆದರೆ ಒಬ್ಬ ಧಾರ್ಮಿಕ ಪುರುಷ ಅಥವಾ ಮುಖಂಡ ಅಂಥ ಕೆರೆ ನಿರ್ಮಿಸಿದಾಗ ಅಂತಹ ಸಂಶಯಕ್ಕೆ ಅವಕಾಶವಿರುವುದಿಲ್ಲ. ಪಾಂಡವಪುರ ತಾಲ್ಲೂಕಿನಲ್ಲಿರುವ ಕ್ಯಾತನಹಳ್ಳಿಯಿಂದ 5 ಕಿ.ಮೀ. ದೂರದಲ್ಲಿರುವ ತೊಣ್ಣೂರಿನ ಮೋತಿ ತಲಾಬನು ರಾಮನುಜಾಚಾರ್ಯರು ಮೇಲುಕೊಟೆಯಲ್ಲಿ ಇದ್ದಾಗ ಕಟ್ಟಿಸಿದರು ಅಥವಾ ದುರಸ್ತಿ ಮಾಡಿಸಿದರು ಎನ್ನಲಾಗಿದೆ. ಇದಕ್ಕೆ ಮತ್ತೊಂದು ಹೆಸರು ಮುತ್ತಿನ ಕೆರೆ ಎಂದು ಹೆಸರು . ಇದು ಸಹ ಹೊಯ್ಸಳರ ಕಾಲದಲ್ಲಿ ನಿರ್ಮಿಸಲಾಗಿದೆ. ಹೊಯ್ಸಳರ ನಂತರ ವಿಜಯನಗರದ ಅರಸರ ಕಾಲದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕೆರೆಗಳ ನಿರ್ಮಾಣವಾಗಿವೆ. ಮೈಸೂರಿನ ಒಡೆಯರು ಸಹ ಜಿಲ್ಲೆಯಲ್ಲಿ ಕೆರೆಗಳ ನಿರ್ಮಾಣ ಕಾರ್ಯಗಳಲ್ಲಿ ಮುಂದಾಗಿರುವ ಬಗ್ಗೆ ತಿಳಿಯಬಹುದು. ಮೈಸೂರಿನಲ್ಲಿ ಹೈದರ್ ಮತ್ತು ಟಿಪ್ಪು ಆಳ್ವಿಕೆಗೆ ಬಂದಾಗ ಜಿಲ್ಲೆಯ ಅನೇಕ ಕೆರೆಗಳು ನಾಶವಾಗಿದೆ ಎಂದು ಹೇಳಬಹುದು. ಕಾರಣ ಯುದ್ಧ ಅಕ್ರಮಣಗಳನ್ನು ತಡೆಯಲು ಅಂದರೆ ಶತ್ರು ಸೇನೆಗಳಿಗೆ ನೀರು ಸಿಗದಂತೆ ಮಾಡಲು ನೀರಾವರಿ ಕೆರೆಗಳನ್ನು ನಾಶಮಾಡಲಾಗಿದೆ.

ಮರಾಠರ ಆಕ್ರಮಣ ಕಾಲದಲ್ಲಿ ಹೈದರ್‌ತನ್ನ ಅಧಿಕಾರಿಗಳಿಗೆ ಕೊಟ್ಟಿದ್ದ ಆಜ್ಞೆಗಳನ್ನು ನೋಡಿದರೆ ಈ ಹಾನಿಯ ಬಗ್ಗೆ ಒಂದು ಕಲ್ಪಿನ ಬಂದಿತು. ಹೈದರ್‌ನ ಆಜ್ಞೆ ಹೀಗಿತ್ತು. " ಮರಾಠ ಸೇನೆ ಬಂದಾಗ ಜಲಾಶಯಗಳ ದಡಗಳನ್ನು ಹೊಡೆದು ಹಾಕತಕ್ಕದ್ದು. ಮೇವನ್ನೆಲ್ಲ ಸುಟ್ಟು ಹಾಕತಕ್ಕದ್ದು. ಅಹಾರ, ನೀರು ಸಿಗದಂತೆ ಮಾಡಬೇಕು ಎಂಬ ನೀತಿ ಅವನದಾಗಿತ್ತು." ಟಿಪ್ಪುವಿನ ಕಾಲದಲ್ಲಿ ಕೆರೆ ತೊಣ್ಣೂರು ಜಲಾಶಯ ಇವನಿಂದಲೇ ನಾಶವಾಯಿತು. ಜಲಾಶಯ ರಾಜಧಾನಿ ಶ್ರೀರಂಗಪಟ್ಟಣಕ್ಕೆ ಅನುಕೂಲವಾಗಿದ್ದರೂ ಹಿಂದೆ ಆಗಿಂದ್ದಾಗೆ ಹಲವಾರು ಶತ್ರು ಸೇನೆಗಳಿಗೆ ನೀರು ಒದಗಿಸಿತ್ತು ಎಂಬುದನ್ನು ತಿಳಿದ ಟಿಪ್ಪು. ಈಗ ಸಾಮ್ರಾಜ್ಯ ಅಥವಾ ಸಾವು ಎಂದು ನಿಶ್ಚಯಿಸಿದ.ಯುದ್ಧದಲ್ಲಿ ಕೆರೆಗಳು ಉಳಿಯಬಾರದು ಎಂದು ತೀರ್ಮಾನಿಸಿದ ತೊಣ್ಣೂರು ಕೆರೆ ಏರಿಯನ್ನು ಒಡೆದು ಬರಿದು ಮಾಡಲಾಯಿತು." ನಂತರ ಮೈಸೂರು ರಾಜ್ಯ ಒಡೆಯರ ಅಧೀನಕ್ಕೆ ಬಂದ ಮೇಲೆ ಕೆರೆಗಳ ಜೀರ್ಣೋದ್ದಾರವಾಯಿತು.

ಮಂಡ್ಯ ಜಿಲ್ಲೆಯು 1939 ರವರೆ ಮೈಸೂರು ಪ್ರಾಂತ್ಯದಲ್ಲಿತ್ತು. ಹಿಂದೆ ಮಂಡ್ಯ ಎಂದು ವಿಭಾಗಿಸಿ ಆಡಳಿತ ನಡೆಯುತ್ತಿರಲಿಲ್ಲ. ಟಿಪ್ಪುವಿನ ಮರಣದ ನಂತರ ಮೈಸೂರು ಅರಸರು ಪುನಃ ಅಧಿಕಾರಕ್ಕೆ ಬಂದರು. ಬ್ರಿಟೀಷರ ಕಾಲಕ್ಕೆ ಮೊದಲು ಇದ್ದ ಕೆರೆಗಳ ಸಂಖ್ಯೆಯನ್ನು ಅವುಗಳಿಂದ ಆಗುತ್ತಿದ್ದ ನೀರಾವರಿ ಪ್ರದೇಶದ ಮತ್ತು ಅವುಗಳ ನಿರ್ಮಾಣ ಅಥವಾ ಸಂರಕ್ಷಣೆ ಮಾಡಿದ ವೆಚ್ಚ ಈ ಬಗ್ಗೆ ಯಾವ ದಾಖಲೆಯು ಇಲ್ಲ ಏಕೆಂದರೆ ಸಾಮಾನ್ಯವಾಗಿ ಹಿಂದಿನವರು ಶಾಸನದಲ್ಲಿ ಕೆಲವೊಂದು ವಿವರಗಳನ್ನು ಮಾತ್ರ ಬರೆಸುತ್ತಿದ್ದರು. ಮೈಸೂರು ರಾಜ್ಯದ ಕೆರೆಗಳು ಎಂದರೆ ಮಂಡ್ಯ ಜಿಲ್ಲೆಯ ಕೆರೆಗಳು ಸಹ ಸೇರಿಕೊಂಡಿದ್ದವು. ಆದರೂ ಟಿಪ್ಪು ಕೆರೆಗಳ ಸಂರಕ್ಷಣೆಗೆ ಸಂಬಂಧಿಸಿದಂತೆ 1788 ರಲ್ಲಿ ಆದೇಶ ಹೊರಡಿಸಿದ್ದನು. ಇದರಿಂದ ಕೆರೆಗಳ ಸಂರಕ್ಷಣೆಗೆ ನೀಡಿದ ಮಹತ್ವವನ್ನು ಕಾಣಬಹುದು (ರೈಸ್ ಪ್ರಕಾರ ಈ ಆದೇಶಗಳು ಚಿಕ್ಕದೇವರಾಯ ಹೊರಡಿಸಿದನು. 1672 –1754 ಅದನ್ನೇ ಸುಲ್ತಾನ ಮರು ಪ್ರಕಟಣೆ ಮಾಡಿದ್ದು) ಸ್ಥಳೀಯರೇ ಕಟ್ಟಿ ಇನಾಂ ಕೆಟು ಕೊಡುಗೆಯಾಗಿ ಇಟ್ಟುಕೊಂಡಿದ್ದ ಕೆರೆಗಳನ್ನು ಇನಾಂದಾರರೇ ಸಂರಕ್ಷಿಸಬೇಕಾಯಿತು. ಅವರೆ ಕೆರೆಯಿಂದ ಹೂಳನ್ನು ಅಗೆದು ತೆಗೆದು ಏರಿಗೆ ಬಳಸಬೇಕಾಗಿತ್ತು. ಹಾಳು ಬಿದ್ದ ಕೆರೆಗಳ ದುರಸ್ತಿ ಮಾಡಲು ಇನಾಂದಾರ ಸಾಧನ ಇಲ್ಲದಿದ್ದರೆ ಅದನ್ನು ಸರ್ಕಾರ ಮಾಡಬೇಕಾಗಿತ್ತು ಮತ್ತು ದುರಸ್ತಿ ವೆಚ್ಚಕ್ಕೆ ಅನುಗುಣವಾಗಿ ಮಾಡುವ ವಾರ್ಷಿಕ ಕಂದಾಯವನ್ನು ಇನಾಂದಾರರ ಮೇಲೆ ಹಾಕಬೇಕಾಗಿತ್ತು. ಸರ್ಕಾರ ನಿರ್ಮಿಸಿದ ಕೆರೆಗಳ ಬಗ್ಗೆ ಅಮಲ್ದಾರರು ಮುತ್ಸದ್ಧಿ ಹಾಗೂ ಹರಿಕಾರ ಮುಂತಾದ ಕಂದಾಯ ಅಧಿಕಾರಿಗಳು ತಾವೇ ಹೋಗಿ ಕೆರೆಗಳನ್ನು ಪರಿಶೀಲಿಸಿ ಮತ್ತು ದುರಸ್ತು ಮಾಡಿಸುವುದರಲ್ಲೂ ಅವುಗಳಿಂದ ಸರ್ಕಾರಕ್ಕೆ ಸಿಗುವ ಲಾಭ ಮತ್ತು ಉತ್ಪನ್ನದ ಹೆಚ್ಚಳ ಇವುಗಳ ಬಗ್ಗೆ ವಿಶೇಷ ಗಮನ ನೀಡಬೇಕು ಎಂದು ಆದೇಶದಲ್ಲಿ ಹೊರಡಿಸಲಾಯಿತು. ಮಣ್ಣನ್ನು ಏರಿಯ ಮೇಲಕ್ಕೆ ಸಾಗಿಸಲು ಎಮ್ಮೆಗಳನ್ನು ಬಳಸಬೇಕು ಮತ್ತು ಏರಿಯ ಸುತ್ತ ಪ್ರತಿನಿತ್ಯವು ಹಾಕಲಾದ ಮಣ್ಣಿನ ಪ್ರಮಾಣ ಲೆಕ್ಕವನ್ನು ಶಾನುಬೋಗ ಇಡಬೇಕು. ಎನ್ನುವ ಅಪ್ಪಣೆಯಿಂದ ಅಂಥಾ ದುರಸ್ತಿ ವರ್ಷಪ್ರತಿ ನಡೆಯುತ್ತಿತ್ತು. ಎನ್ನುವುದು ಸ್ಪಷ್ಟವಾಗುತ್ತದೆ.[95] ಒಟ್ಟಾರೆ ಮಂಡ್ಯ ಜಿಲ್ಲೆಯು ಅವನ ಕೆರೆಗಳ ಸಂರಕ್ಷಣೆ ವಿಧಾನದಲ್ಲಿ ಸೇರಿಕೊಂಡಿತ್ತು. ಅದೇ ನಿಯಮ ಜಿಲ್ಲೆಯ ಕೆರೆಗಳಿಗೂ ಅನ್ವಯಿಸುತ್ತಿತ್ತು.

ಮಂಡ್ಯ ಜಿಲ್ಲೆಯ ಪ್ರಾಚೀನದಿಂದ ಟಿಪ್ಪುವರೆಗಿನನ ಕೆರೆಗಳ ಬಗ್ಗೆ ಪರಿಶೀಲಿಸಲಾಗಿದೆ. ಅದರಂತೆ ಮಂಡ್ಯ ಜಿಲ್ಲೆಯಲ್ಲಿ ಸಿಕ್ಕಿರುವ ಶಾಸನಗಳಲ್ಲಿ ಕೆಲವು ವಿಶೇಷ ಹೆಸರಿನ ಶಬ್ದಗಳನ್ನು ನೋಡಬಹುದು ಅಂತಹ ಶಬ್ದಗಳೆಂದರೆ ಬಿತ್ತುವಟ್ಟು, ದಶವಂದ , ಕಟ್ಟುಕೊಡಿಗೆ, ರಕ್ತಸಿಕ್ತ ಅವುಗಳು ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಇವುಗಳನ್ನು ಒಂದು ರೀತಿಯ ತೆರಿಗೆಯಂತೆ ಕಾಣಬಹುದು. ಕೆರೆಗಳ ನಿರ್ಮಾಣ, ದುರಸ್ತಿ ನಿರ್ವಹಣೆ ,ಸಂರಕ್ಷಣೆ ಮಾಡಿದಕ್ಕಾಗಿ ಕಟ್ಟಿದ ವ್ಯಕ್ತಿಗಳಿಗೆ ದುರಸ್ತಿ ಮಾಡಿಸಿದ ವ್ಯಕ್ತಿಗಳಿಗೆ ಕೆರೆಯನ್ನು ನೋಡಿಕೊಳ್ಳುವವರಿಗೆ ಮುಂತಾದ ಕಾರ್ಯಗಳಿಗೆ ಈ ಮೇಲೆ ಹೇಳಿದ ರೀತಿಯಲ್ಲಿ ಭೂಮಿಯನ್ನುಅವರಿಗೆ ಕೊಡಲಾಗುತ್ತಿತ್ತು. ಅವುಗಳ ಅರ್ಥವೆಂದರೆ ಕೆರೆಯ ನಿರ್ಮಾಣ ಸಂರಕ್ಷಣೆಯ ಕೆಲಸ ಮಾಡಿದಕ್ಕಾಗಿ ಕಟ್ಟಿದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಭೂಮಿಯನ್ನು ದಾನ ವೀಯುವುದಕ್ಕೆ ಬಿತ್ತುವಟ್ಟ ಎಂದು ಹೇಳಲಾಗಿದೆ. ದಾನದತ್ತಿ ಭೂಮಿ ಯಾವಾಗಲೂ ಆ ಕೆರೆಯ ನೀರಿನಿಂದಲೆ ನೀರಾವರಿ ಆಗುತ್ತಿದ್ದ ಭೂಮಿ. ಹತ್ತನೆಯ ಒಂದು ಪಾಲು ಭೂಮಿಯೇ (ದಶ್ಯವ) '' ಬಿತ್ತುವಟ್ಟ '' ಎಂದು ಹೇಳಬಹುದು. ರೈಸ್‌ನ ಪ್ರಕಾರ ಅದು ಬಿತ್ತು ಎಂದರೆ ಬೀಜ ಬಿತ್ತುವಿಕೆ ಅಥವಾ ಬೇಸಾಯದ ಮೇಲಿನ ವಟ್ಟ ಎಂದರೆ ಕೆರೆಯ ನಿರ್ಮಾಣ ಅಥವಾ ರಿಯಾಯಿತಿ ಎಂದಿರಬಹುದು. ಆದರಿಂದ ಬಿತ್ತುವಟ್ಟ ಎಂದರೆ ಕೆರೆಯ ನಿರ್ಮಾಣ ಅಥವಾ ಸಂರಕ್ಷಣೆಯ ಕಾರ್ಯಕ್ಕೆ ಪ್ರತಿಫಲವಾಗಿ ಕೆರೆಯ ಕೆಳಗೆ ಕೊಂಚ ಭೂಮಿಯನ್ನು ಕಡಿಮೆ ಕಂದಾಯದ ಮೇಲೆ ನೀಡುವುದು ಎಂದು ಅರ್ಥೈಸಬಹುದು. ಬಿತ್ತುವಟ್ಟದ ಹಾಗೆಯೆ 'ದಶವಂದ' ಕೆರೆಯ ದುರಸ್ತಿ ಅಥವಾ ನಿರ್ಮಾಣಕ್ಕಾಗಿ ನೀಡಲಾಗುವ ಭೂಮಿಯನ್ನು ಸೂಚಿಸಲು ಸಾಮಾನ್ಯವಾಗಿ ಬಳಸುವ ಶಬ್ದ ರೈಸ್‌ನ ಪ್ರಕಾರ ಅದರ ಅರ್ಥ ಒಬ್ಬಾತ ಕೆರೆಯನ್ನು ನಿರ್ಮಿಸಿದ ಅಥವಾ ದುರಸ್ತಿ ಮಾಡಿದರ ಪ್ರತಿಫಲವಾಗಿ ಸಾಮಾನ್ಯ ಕಂದಾಯದ ಹತ್ತನೆಯ ಒಂದರಷ್ಟು ಕಂದಾಯದ ಭೂಮಿಯನ್ನು ಆತನಿಗೆ ನೀಡುವುದು ಮಂಡ್ಯದ ಕೆರಗೋಡು ಶಾಸನ ದಶವಂದ ಸುಂಕದ ನೀಡಿಕೆಯನ್ನು ಪ್ರಸ್ತಾಪಿಸಿದೆ. ಅದೇ ರೀತಿ ಕೊಡುಗೆ ಅಥವಾ ಕಟ್ಟುಕೊಡಿಗೆ ಇನ್ನೊಂದು ಸಾಮಾನ್ಯ ಬಳಕೆಯ ಶಬ್ದ ಬತ್ತುವಟ್ಟ ಹಾಗೂ ದಶವಂಶಗಳ ಹಾಗೆಯೇ ಇದು ಕೊಡುಗೆ ಅಥವಾ ಕೊಡಿಗೆ ಬಹುಮಾನ ಅಥವಾ ದಾನ ಕೆರೆಯ ಜೀರ್ಣೋದ್ದಾರ ಇಲ್ಲವೆ ನಿರ್ಮಾಣ ಅಥವಾ ಸುಸ್ಥಿತಿಯಲ್ಲಿ ರಕ್ಷಿಸಿದ ಸೇವೆಗಾಗಿ ನೀಡಲಾದ ಭೂಮಿದಾನ" ಹೀಗೆ ಮೇಲೆ ಹೇಳಿದ ಹಾಗೆ ವಿಶೇಷ ಪದಗಳ ಅರ್ಥವನ್ನು ನೋಡಬಹುದು.

ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಪದ್ಧತಿಯನ್ನು ಪಾರಂಪರಗತದಿಂದ ಬ್ರಿಟಿಷ್‌ರು ಮೈಸೂರಿನಲ್ಲಿ ಅಧಿಕಾರ ಸ್ಥಾಪಿಸುವವರೆಗೆ ನೋಡಲಾಗಿದೆ. ಇಲ್ಲಿ ಮುಖ್ಯವಾಗಿ ಟಿಪ್ಪು ಸುಲ್ತಾನನ ಕಾಲದಲ್ಲಿ ಕೆರೆಗಳು ನಾಶವಾಗಿದೆ ಎಂದು ಹೇಳಿದರು ಸಹ ಅವನು ನೀರಾವರಿ ವ್ಯವಸ್ಥೆಗೆ ಸಹಕರಿಸಿದನು. ಟಿಪ್ಪುಸುಲ್ತಾನ ತೊಣ್ಣೂರು ಕೆರೆಯ ಏರಿಯನ್ನ ಹೊಡೆಸಿದ ಬಗ್ಗೆ ಹೇಳಲಾಗಿದೆ. ಅದಕ್ಕೆ ಕಾರಣವೇ ಬೇರೆಯಾಗಿತ್ತು ಎಂದು ಹಲವಾರು ಇತಿಹಾಸ ತಜ್ಞರು ಹೇಳಿದ್ದಾರೆ. ಫ್ರೆಂಚರ ಸೇನೆ ಅಲ್ಲಿ ನೆಲೆ ನಿಲ್ಲಲ್ಲು ಮುಂದಾದಾಗ ಅದನ್ನ ಮನಗಂಡ ಅವನು ಅವರಿಗೆ ಕುಡಿಯಲು ನೀರು ಸಿಗದಂತೆ ಮಾಡಲು ಆ ಕೆರೆ ಏರಿ ಹೊಡೆಸಿದ ಎಂದು ಇತಿಹಾಸಕಾರರು ಹೇಳುತ್ತಾರೆ. ಟಿಪ್ಪುವಿನ ನಂತರ ಪೂರ್ಣಯ್ಯರವರು ಅದನ್ನ ಜೀರ್ಣೋದ್ಧಾರ ಮಾಡಿಸಿದನು. ಟಿಪ್ಪುವಿನ ಕನ್ನಂಬಾಡಿ ಪರ್ಷಿಯನ ಶಾಸನ ಕಾವೇರಿಗೆ ಕನ್ನಂಬಾಡಿಯಲ್ಲಿ ಅಣೆಕಟ್ಟನ್ನು ನಿರ್ಮಿಸುವ ಉದ್ದೇಶವನ್ನು ಟಿಪ್ಪು ಹೊಂದಿದ ಎಂಬುದನ್ನು ಹೇಳಿದೆ. ಇದೇ ನೀರಾವರಿಗೆ ಸಂಬಂಧಿಸಿದಂತೆ ಇರುವ ಶಾಸನವಾಗಿದೆ.

ಈ ಮೇಲಿನ ವಿಷಯಗಳಿಂದ ನಾವು ಮಂಡ್ಯ ಜಿಲ್ಲೆ ಪಾರಂಪರಿಕ ನೀರಾವರಿ ಪದ್ಧತಿಯನ್ನು ನೋಡಬಹುದು. ಹಿಂದಿನ ರಾಜರುಗಳು ತಮ್ಮ ಸಾಮಂತರಿಂದ ಅಥವಾ ಪ್ರಧಾನರಿಂದ ಅಥವಾ ಅಧಿಕಾರಿಗಳು ಹಳ್ಳಿಗಳ ಮುಖಂಡರು, ಗಣ್ಯವ್ಯಕ್ತಿಗಳು ಕೆರೆಯನ್ನು ನಿರ್ಮಾಣ ಮಾಡಿರುವುದನ್ನು ನೋಡಬಹುದಾಗಿದೆ.

<u>ನಿರ್ಮಾಣ ಮತ್ತು ಸಂರಕ್ಷಣೆ :-</u> ಪ್ರಾಚೀನ ಕಾಲದಿಂದ ಟಿಪ್ಪುಸುಲ್ತಾನವರೆಗಿನ ನೀರಾವರಿ ವ್ಯವಸ್ಥೆಯನ್ನು ಅಧ್ಯಯನ ಮಾಡಲಾಗಿದೆ. ಅಲ್ಲಿಂದ ಈ ಕಾಲದವರೆಗೆ ಕೆರೆಗಳ ನಿರ್ಮಾಣ ಹಾಗೂ ಸಂರಕ್ಷಣೆಗಾಗಿ ಮತ್ತು ನಿರ್ವಹಣೆಗಾಗಿ ಅನುಸರಿಸಲು ಕ್ರಮಗಳು ಅವುಗಳ ನಿರ್ವಹಣೆಗಾಗಿ ಮಾಡಲಾದ ವ್ಯವಸ್ಥೆಗಳ ನೀರಿನ ಹಂಚಿಕೆ ವಿಧಾನ ನಿರ್ಮಾಣ ವೆಚ್ಚ ಹಾಗೂ ಫಲಾನುಭವಿಗಳಿಗೆ ವಿಧಿಸಬೇಕಾದ ನೀರು ತೆರಿಗೆ ದರಗಳು ತಿಳಿದು ಕೊಳ್ಳವುದು ಅತ್ಯಂತ ಮುಖ್ಯ ವಿಷಯವಾಗಿದೆ. ಹಿಂದಿನವರು ಕಟ್ಟಿದ ಕೆರೆಗಳು ಕಾಲಕಾಲಕ್ಕೆ ಜೀರ್ಣೋದ್ಧಾರವಾಗಿ ಮತ್ತು ದುರಸ್ತಿಯಾಗಿ ಕೆರೆಗಳು ಉಳಿದುಕೊಂಡು ಬಂದಿವೆ. ಕಾವೇರಿ, ಹೇಮಾವತಿ, ಮತ್ತಿತರ ದೊಡ್ಡ ನದಿಗಳಿಗೆ ಅಡ್ಡಲಾಗಿ ಜಲಾಶಯಗಳು ಇದ್ದವು ಎನ್ನುವುದನ್ನು ಯಾವ ಶಾಸನಗಳು ತಿಳಿಸುವುದಿಲ್ಲ.

ಆದರೆ ಆಂಧ್ರಪ್ರದೇಶದ ಕಡಪ ಜಿಲ್ಲೆಯ ಬದವೇಲು ತಾಲ್ಲೂಕಿನ ಪೊರುಮಾಮಿಲ್ಲ ಶಾಸನ ಬಿಟ್ಟರೆ ಕೆರೆ ಏರಿಗಳ ಉದ್ದ, ಎತ್ತರ ಅಥವಾ ಕೆರೆ ನಿರ್ಮಾಣಕ್ಕೆ ತೆಗೆದುಕೊಂಡ ಕಾಲ ಇತ್ಯಾದಿ ಯಾವುದೇ ವಿವರಗಳನ್ನು ಯಾವ ಶಾಸನವು ಕೊಡುವುದಿಲ್ಲ. " ಈ ಶಾಸನ ಕೆರೆ ನಿರ್ಮಾಣದಲ್ಲಿ ಅನುಸರಿಸಬೇಕಾದ 12 ಅಗತ್ಯಗಳು ಮತ್ತು ಆರು ದೋಷಗಳನ್ನು ಸೂತ್ರಗಳಂತೆ ಪ್ರತಿಪಾದಿಸಿದೆ."

ಏರಿಯ ವಿನ್ಯಾಸದ ಬಗ್ಗೆ ಮಂಡ್ಯ ಜಿಲ್ಲೆಯಲ್ಲಿ ದೊರಕಿರುವ ಶಾಸನದಲ್ಲಿ ಪೂರ್ವ- ಪಶ್ಚಿಮ , ಉತ್ತರ - ದಕ್ಷಿಣ ಹೀಗೆ ಏರಿಯ ಬಗ್ಗೆ ಹೇಳಿದವೆ ಹೊರತು ಅದರ ಉದ್ದ ಇತ್ಯಾದಿಗಳ ಬಗ್ಗೆ ಶಾಸನದಲ್ಲಿ ಹೇಳಿಲ್ಲ. ಆದರೂ ಕೋಡಿಯ ಸಾಮರ್ಥ್ಯವನ್ನು ಹೇಗೆ ನಿರ್ಧರಿಸುತ್ತಿದ್ದರು ಹಾಗೂ ಕಟ್ಟೆಯಲ್ಲಿ ನೀರುವ ಸೋರಿ ಹೋಗದಂತೆ ಹೇಗೆ ಮಾಡುತ್ತಿದ್ದರು ಎನ್ನುವುದ ಸ್ಪಷ್ಟವಾಗಿಲ್ಲ.ಆದ್ದರಿಂದ ಕೆರೆಗಳ ಏರಿ ಹೊಡೆದು ಹೋಗುತ್ತಿದ್ದವು.

ಒಂದು ಕೆರೆಯ ಸಾಮರ್ಥ್ಯ ಬಹುಮಟ್ಟಿಗೆ ಅದರ ಕೆಳಗೆ ನೀರಾವರಿ ಪಡೆಯು ಪ್ರದೇಶಕ್ಕೆ ಅನುಗುಣವಾಗಿರುತ್ತದೆ. ಏಕೆಂದರೆ ಶಾಸನಗಳು ಈ ಅಂಶದ ಬಗ್ಗೆ ಮಾಹಿತಿ ನೀಡುವುದಿಲ್ಲ. ಆದರೆ ಬಿತ್ತುವಟ್ಟ ಎಂದು ದಾನವಿತ್ತ ಭೂಮಿಯಿಂದ ನಾವು ಪರೋಕ್ಷವಾಗಿ ಊಹಿಸಬಹುದು. ಒಂದೊಂದು ಕೆರೆಗೆ ಒಂದು ಅಥವಾ ಎರಡು ತೂಬುಗಳು ಇರುತ್ತಿದ್ದವು. ಅವುಗಳಿಂದ ನೀರಿನ್ನು ಜಮೀನಿಗೆ ಬಿಡಲಾಗುತ್ತಿತ್ತು. ತೂಬು ಇರುತ್ತಿದ್ದದ್ದು ಕೆರೆಯ ಅಂಗಳದ ಮಟ್ಟದಲ್ಲೆ ಇರುತ್ತಿದ್ದವು. ಹಾಗೆಯೇ ಕೆರೆಗಳಿಗೆ ಕೋಡಿ ಇರುವುದನ್ನು ಶಾಸನಗಳಲ್ಲಿ ಉಲ್ಲೇಖಿಸಿದೆ. ಪ್ರತಿಯೊಂದು ಕೆರೆಯ ಕಲ್ಲು ಕಟ್ಟದ ಕೋಡಿಯು ಇರುತ್ತಿತ್ತು. ಇದರಿಂದ ಕೆರೆಯ ಹೆಚ್ಚುವರಿ ನೀರು ಕೆಳಗೂ ಇದರ ಕೆರೆಗಳಿಗೆ ಹರಿದು ಹೋಗುತ್ತಿತ್ತು. ಕೆರೆಯ ಸ್ಥಿತಿಗತಿಗೆ ಅನುಗುಣವಾಗಿ ಕೋಡಿಯನ್ನು ನಿರ್ಮಾಣ ಮಾಡಲಾಗಿತ್ತು. ಮಳೆಗಾಲದಲ್ಲಿ ಕೆರೆಗಳಿಗೆ ನೀರಿನ ಪ್ರಮಾಣ ಹೆಚ್ಚಾಗಿ ಅದರ ಜೊತೆಗೆ ಹೂಳು ತುಂಬಿಕೊಂಡು ಹೋಗುತ್ತಿತ್ತು. ಹಾಗೆಯೇ ಕೆರೆಯ ಹೂಳನ್ನು ಮಳೆಗಾಲದ ಆರಂಭದಲ್ಲಿ ಜನರು ಕೆರೆಯಲ್ಲಿ ತೂಬಿನ ತಲೆಯ ಬಳಿ ಸಾಲುಗಟ್ಟಿ ನಿಲ್ಲುತ್ತಿದ್ದರು. ಕೆರೆಯಲ್ಲಿ ನೀರು ಬಗಡವಾಗುವವರೆಗೂ ಜಾಲಾಡುತ್ತಿದ್ದರು. ಆಗ ನೀರಿನ ಜೊತೆ ಹೂಳು ತೂಬಿನಲ್ಲಿ ಹೊರ ಹೋಗುತ್ತಿತ್ತು. ಇದು ಭಾಗಶಃ ಪರಿಹಾರವಾಗಿತ್ತು."

ಕೆರೆಯ ಸಂರಕ್ಷಣೆಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಹೇಳಿದೆ. ಅದನ್ನು ಸೂಚಿಸುವ ಅನೇಕ ಶಾಸನಗಳು ಇವೆ. ತೊಣ್ಣೂರು ಶಾಸನದಲ್ಲಿ ಸಂರಕ್ಷಣೆ ದುರಸ್ತಿಗಾಗಿ ಕೆಲವು ಸ್ಥಳೀಯ ತೆರಿಗೆಗಳನ್ನು ನೀಡಿದನ್ನು ದಾಖಲು ಮಾಡಿವೆ. 13ನೇ ಶತಮಾನದಲ್ಲಿ ಹೊಯ್ಸಳ ಅರಸ ನರಸಿಂಹ ಹರವು ನಾಲೆಯ ವರ್ಷದ ದುರಸ್ತಿಗಾಗಿ ತೊಣ್ಣೂರು ಅಗ್ರಹಾರದ ಮಹಾಜನರಿಗೆ ಹೊಳೆಯ ಸುಂಕದಿಂದ 64 ಗದ್ಯಾಣಗಳನ್ನು ನೀಡಿದ ಬಗ್ಗೆ ತಿಳಿಸಿದೆ. [100]

ಜಲ ನಿರ್ವಹಣೆಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲಾ ಶಾಸನಗಳಲ್ಲಿ ಪರಿಶೀಲಿಸಬಹುದು. ನೀರಾವರಿ ಕಾಮಗಾರಿಯಿಂದ ಸೂಕ್ಷ್ಮವಾಗಿ ನೀರನ್ನು ನಿಯಂತ್ರಿಸುವುದು ಜಲ ನಿರ್ವಹಣೆ ಒಂದು ಮುಖ್ಯಾಂಶ. ಕೌಟಿಲ್ಯ ಅರ್ಥಶಾಸ್ತ್ರ ವಿಧಿಸುತ್ತದೆ. ಕೆರೆಯ ತೂಬಿನಿಂದ ಅಲ್ಲದೆ ಬೇರೆ ಎಲ್ಲಿಂದಲಾದರೂ ಕೆರೆಯ ನೀರನ್ನು ಹೊರಕ್ಕೆ ಬಿಟ್ಟರೆ ಅಂಥ ವ್ಯಕ್ತಿಗಳು ಆರಪಣ ದಂಡ ತೆರಬೇಕು ಕೆರೆಯ ತೂಬಿನಿಂದ ಹರಿಯುವ ನೀರಿಗೆ ಗೊತ್ತು ಗುರಿಯಿಲ್ಲದೆ ಅಡ್ಡಿ ಮಾಡುವವರೂ ಅಷ್ಟೆ ದಂಡ ತೆರಬೇಕು. [101] ಜಲ ನಿರ್ವಹಣೆ ಎಂದರೆ ಫಲಾನುಭವಿಗಳೆಲ್ಲರೂ ಕೆರೆಯಲ್ಲಿ ಶೇಖರಿಸಿದ ನೀರನ್ನು ಗರಿಷ್ಠ ಪ್ರಮಾಣ ಉತ್ಪನ್ನ ದೊರೆಯುವಂತೆ ಸೂಕ್ತವಾಗಿ ಬಳಕೆಯಾಗುವ ರೀತಿಯಲ್ಲಿ ಉಪಯೋಗಿಸುವುದು. ಕೆರೆಯಲ್ಲಿ ನೀರು ಕಡಿಮೆಯಾದಾಗ ಜಲ ನಿರ್ವಹಣೆ ಪ್ರಾಮುಖ್ಯತೆ ಬರುತ್ತದೆ. ಕೆ.ಆರ್.ಪೇಟೆ ತಾಲ್ಲೂಕಿನ ಭೈರಾಪುರ ಶಾಸನ (1312) ಹೀಗೆ ಹೇಳಿದೆ. ಐದು ಖಂಡುಗ ರೂ. ತರಿ ಭೂಮಿಯನ್ನು ಮಾರಿದಾಗ ಆ ತಾಕು ಹಾಲಿ ಇದ್ದ ಕಟ್ಟೆಯಿಂದ ನೀರನ್ನು ಪಡೆಯುತ್ತದೆ. ಒಂದು ವೇಳೆ ಸಾಲದೆ ಹೋದಲ್ಲಿ ಬೇರೊಂದು ಕೆರೆಯಿಂದ ನಿಗದಿಯಾದ ಸರದಿ ಮೇರೆಗೆ ನೀರನ್ನು ಒದಗಿಸಲು ಏರ್ಪಟ್ಟು ಮಾಡಲಾಗುವುದು ಎಂದು ಒಪ್ಪಿಸಲಾಗಿತ್ತು. [102] ಪ್ರದೇಶದಲ್ಲಿ ನೀರು ಹಂಚಿಕೆಯನ್ನು ಸದರಿ ಕ್ರಮಾನುಸಾರ ಮಾಡಲಾಗುತ್ತಿತ್ತು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಆ ಕ್ರಮವೇ ಈಗ ಜಲ ನಿರ್ವಹಣೆಯ ದಕ್ಷ ವ್ಯವಸ್ಥೆ ಎಂದು ಪರಿಗಣಿತವಾಗಿದೆ. ಜಲ ಹಂಚಿಕೆಯಲ್ಲಿ ನೀರಗಂಟಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದನು.

ಹೀಗೆ ಮಂಡ್ಯ ಜಿಲ್ಲಾ ಶಾಸನದಲ್ಲಿ ಕೆರೆಗಳ ನಿರ್ಮಾಣ, ಸಂರಕ್ಷಣೆಗೆ ನೀರಿನ ಹಂಚಿಕೆಯನ್ನು ಯಾವ ರೀತಿ ಮಾಡಲಾಗಿತ್ತು ಎಂಬ ಬಗ್ಗೆ ಇವುಗಳಿಂದ ತಿಳಿಯಲು ಸಾಧ್ಯವಾಗಿದೆ. ಮಂಡ್ಯ ಜಿಲ್ಲೆಯ ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ನೆಲೆಯಾಗಿದ್ದು, ಅನೇಕ ರಾಜಮನೆತನ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದ್ದು ಕಂಡು ಬರುತ್ತದೆ. ನೀರಾವರಿ ಸಂಬಂಧಿಸಿದಂತೆ ಉಲ್ಲೇಖಿತ

ಶಾಸನಗಳು 7 ನೇ ಶತಮಾನದಿಂದ ಕಂಡು ಅಲ್ಲಿಂದ 18 ನೇಶತಮಾನದವರೆಗೆ ಕೆರೆ ನಿರ್ಮಾಣಕ್ಕೆ ಸಂಬಂಧಿಸಿವೆ. ಈ ಪ್ರದೇಶದಲ್ಲಿ ಗಂಗರು , ಚೋಳರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು ಒಡೆಯರ ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ವ್ಯಾಪಾಕವಾದ ನೀರಾವರಿ ಕಾಮಗಾರಿಗಳು ಜಾರಿಗೊಂಡಂತೆ ಕಂಡು ಬರುತ್ತವೆ. ನೀರಾವರಿ ಚೌಕಟ್ಟಿನ ಎಲ್ಲಾ ತರಹದ ಚಟುವಟಿಕೆಗಳು ಕಾಲಕಾಲಕ್ಕೆ ವ್ಯವಸ್ಥಿತವಾಗಿ ನಡೆದುಬಂದಿವೆ. ಎಂಬ ಅಭಿಪ್ರಾಯಕ್ಕೆ ಬರಲು ಸಹಾಯಕವಾಗಬಹುದಾದ ಅಂಶವೆಂದರೆ ನೂರಾರು ವರ್ಷಗಳಿಂದಲೂ ಅಸ್ಥಿತ್ವದಲ್ಲಿದ್ದು ಇಂದಿಗೂ ಅಸ್ತಿತ್ವದಲ್ಲಿದ್ದ ಜನಸಮುದಾಯದ ನೀರಾವರಿ ಅಗತ್ಯಗಳಿಗೆ ಅನಿವಾರ್ಯ ಮತ್ತು ಅಗತ್ಯವಾಗಿರುವ ಕೆರೆಗಳು.

ಜಿಲ್ಲೆಯಲ್ಲಿ ಸ್ವಾಭಾವಿಕ ಲಕ್ಷಣಗಳ ಹಿನ್ನಲೆಯಲ್ಲಿ ಜೀವಸಂಕುಲದ ಅಗತ್ಯಗಳಿಗೆ ಮೂಲಾಧಾರವಾದ ನೀರನ್ನು ಪಡೆಯುವ ಸಂರಕ್ಷಿಸುವ ಬೆಳಸಿಕೊಳ್ಳುವ ಪರಂಪರಿತ ಕೌಶಲ್ಯ ಇಂದಿನ ನೀತಿ ನಿರೂಪಕರಿಗೆ ಮತ್ತು ಜನ ಸಮುದಾಯಕ್ಕೆ ಉಳಿದಿರುವ ಏಕೈಕ ಮಾರ್ಗ ಎಂದು ಅಭಿಪ್ರಾಯ ಪಡಬಹುದಾಗಿದೆ.

ಅಡಿ ಟಿಪ್ಪಣಿಗಳು

1.	ಹಂಪಿ ಪರಿಸರದ ಕೆರೆಗಳು	ಪುಟ 1
2.	ಅದೇ	ಪುಟ 8
3	ಇ.ಸಿ. ಸಂಪುಟ -7 ನಂ. 149	ಪುಟ 144
4.	ಅದೇ ಮಳವಳ್ಳಿ ನಂ. 122	ಪುಟ 419
5.	ಅದೇ ಮಂಡ್ಯ ನಂ. 14	ಪುಟ 199
6.	ಅದೇ ಮದ್ದೂರು ನಂ. 42	ಪುಟ 276
7.	ಇ.ಸಿ. ಸಂಪುಟ -6 ಶ್ರೀ.ಪ. ನಂ. 85	ಪುಟ 410
8.	ಇ.ಸಿ. ಸಂಪುಟ -7 ಮದ್ದೂರು ನಂ. 56	ಪುಟ 284
9.	ಅದೇಮಂಡ್ಯ ನಂ. 67	ಪುಟ 244
10.	ಇ.ಸಿ. ಸಂಪುಟ - 6 ಶ್ರೀ.ಪ. ನಂ. 94	ಪುಟ 490
11.	ಅದೇ ಕೃ.ರಾ.ಪೇ. ನಂ. 37	ಪುಟ 21
12.	ಇ.ಸಿ. ಸಂಪುಟ - 7 ಮಂಡ್ಯ ನಂ. 83	ಪುಟ 251
13.	ಇ.ಸಿ. ಸಂಪುಟ - 6 ಶ್ರೀ.ಪ. ನಂ. 113	ಪುಟ 427

14.	ಇ.ಸಿ. ಸಂಪುಟ -7 ನಾ.ಮಂ. ನಂ. 17	ಪುಟ 13
15.	ಅದೇ ಮ.ವ. ನಂ. 15	ಪುಟ 356
16.	ಅದೇ ಮಂಡ್ಯ ನಂ. 54	ಪುಟ 236
17.	ಅದೇ ನಾ.ಮಂ. ನಂ. 14	ಪುಟ 11
18	ಅದೇ ಮದ್ದೂರು ನಂ. 52	ಪುಟ 280
19	ಅದೇ ನಾ.ಮಂ. ನಂ. 29	ಪುಟ 18
20.	ಇ.ಸಿ. ಸಂಪುಟ - 6 ಶ್ರೀ.ಪ. ನಂ. 20	ಪುಟ 120
21.	ಇ.ಸಿ. ಸಂಪುಟ -7 ನಾ.ಮಂ. ನಂ. 30	ಪುಟ 125
22.	ಅದೇ ಮದ್ದೂರು ನಂ. 69	ಪುಟ 610
23.	ಅದೇ ಮಂಡ್ಯ ನಂ. 56	ಪುಟ 237
24.	ಇ.ಸಿ. ಸಂಪುಟ -6 ಶ್ರೀ.ಪ. ನಂ122	ಪುಟ 432
25.	ಅದೇ ಶ್ರೀ.ಪ. ನಂ. 144	ಪುಟ 428
26	ಅದೇ ಕೃ.ರಾ.ಪೇ. ನಂ. 11	ಪುಟ 10
27	ಇ.ಸಿ. ಸಂಪುಟ -7 ಮದ್ದೂರು ನಂ. 84	ಪುಟ 303
28.	ಅದೇ ನಾ.ಮಂ. ನಂ. 83	ಪುಟ 86
29	ಅದೇ ಮಂಡ್ಯ ನಂ. 25	ಪುಟ 208
30	ಅದೇ ಮದ್ದೂರು ನಂ. 93	ಪುಟ 308
31	ಅದೇ ಮದ್ದೂರು ನಂ. 44	ಪುಟ 278
32	ಅದೇ ಮದ್ದೂರು ನಂ. 87	ಪುಟ 305
33	ಅದೇ ನಾ.ಮಂ. ನಂ. 70	ಪುಟ 53
34.	ಇ.ಸಿ. ಸಂಪುಟ -6 ಶ್ರೀ.ಪ ನಂ. 25	ಪುಟ 359
35.	ಅದೇ ಶ್ರೀ.ಪ. ನಂ. 25	ಪುಟ 359
36	ಇ.ಸಿ. ಸಂಪುಟ- ನಾ.ಮಂ. ನಂ. 96	ಪುಟ 92
37.	ಅದೇ ಮದ್ದೂರು ನಂ. 9	ಪುಟ 258
38	ಅದೇ ಮಂಡ್ಯ ನಂ. 61	ಪುಟ 240
39	ಇ.ಸಿ. ಸಂಪುಟ- 6 ಪಾ.ಪು. ನಂ. 18	ಪುಟ 115
40	ಇ.ಸಿ. ಸಂಪುಟ-7 ನಾ.ಮಂ. ನಂ. 21	ಪುಟ 15
41.	ಅದೇ ನಾ.ಮಂ. ನಂ. 58	ಪುಟ 31
42	ಅದೇ ಮ.ವ. ನಂ. 86	ಪುಟ 394
43.	ಇ.ಸಿ. ಸಂಪುಟ -6ಪಾ.ಪು. ನಂ. 179	ಪುಟ 254
44.	ಅದೇ ಪಾ.ಪು. ನಂ. 163	ಪುಟ 247
45.	ಇ.ಸಿ. ಸಂಪುಟ -7 ಮಂಡ್ಯ ನಂ.8	ಪುಟ 196

46	ಅದೇ ಮಂಡ್ಯ ನಂ. 29	ಪುಟ 211
47.	ಅದೇ ಮಂಡ್ಯ ನಂ. 87	ಪುಟ 253
48	ಅದೇ ಮಂಡ್ಯ ನಂ. 38	ಪುಟ 227
49	ಅದೇ ನಾ.ಮಂ. ನಂ. 181	ಪುಟ 177
50	ಅದೇ ನಾ.ಮಂ. ನಂ. 47	ಪುಟ 27
51.	ಅದೇ ನಾ.ಮಂ. ನಂ. 151	ಪುಟ 151
52.	ಇ.ಸಿ. ಸಂಪುಟ -6 ಪಾ.ಪು. ನಂ. 215	ಪುಟ 278
53	ಇ.ಸಿ. ಸಂಪುಟ - 7 ಮದ್ದೂರು ನಂ. 83	ಪುಟ 303
54.	ಅದೇ ನಾ.ಮಂ. ನಂ, 117	ಪುಟ 117
55.	ಅದೇ ನಾ.ಮಂ. ನಂ. 118	ಪುಟ 117
56.	ಅದೇ ನಾ.ಮಂ. ನಂ. 81	ಪುಟ 79
57.	ಅದೇ ನಾ.ಮಂ. ನಂ. 74	ಪುಟ 65
58.	ಅದೇ ಮದ್ದೂರು ನಂ. 117	ಪುಟ 326
59.	ಅದೇ ಮದ್ದೂರು ನಂ. 39	ಪುಟ 275
60.	ಇ.ಸಿ. ಸಂಪುಟ -6 ಪಾ.ಪು. ನಂ. 19	ಪುಟ 115
61.	ಅದೇ ಪಾ.ಪು. ನಂ. 135	ಪುಟ 228
62.	ಅದೇ ಪಾ.ಪು. ನಂ. 138	ಪುಟ 231
63.	ಇ.ಸಿ. ಸಂಪುಟ -7 ಮಂಡ್ಯ ನಂ. 118	ಪುಟ 204
64.	ಇ.ಸಿ. ಸಂಪುಟ - 6 ಪಾ.ಪು. ನಂ. 99	ಪುಟ 161
65.	ಇ.ಸಿ. ಸಂಪುಟ -7 ಮ.ವ. ನಂ. 44	ಪುಟ 372
66	ಅದೇ ಮಳವಳ್ಳಿ ನಂ. 92	ಪುಟ 398
67.	ಅದೇ ಮದ್ದೂರು ನಂ. 73	ಪುಟ 297
68	ಅದೇ ಮ.ವ. ನಂ. 14	ಪುಟ 355
69.	ಅದೇ ಮದ್ದೂರು ನಂ. 129	ಪುಟ 332
70.	ಅದೇ ನಾ.ಮಂ. ನಂ. 99	ಪುಟ 95
71	ಅದೇ ಮದ್ದೂರು ನಂ. 29	ಪುಟ 269
72.	ಅದೇ ನಾ.ಮಂ. ನಂ. 121	ಪುಟ 122
73.	ಇ.ಸಿ. ಸಂಪುಟ -6 ಕೃ.ರಾ.ಪೇ. ನಂ. 3	ಪುಟ 4
74.	ಇ.ಸಿ. ಸಂಪುಟ -7 ನಾ.ಮಂ. ನಂ. 183	ಪುಟ 100
75.	ಅದೇ ಮದ್ದೂರು ನಂ. 138	ಪುಟ 336
76.	ಇ.ಸಿ. ಸಂಪುಟ 6 ಕೆ.ಆರ್.ಪೇಟೆ ನಂ. 98	ಪುಟ 80
77.	ಇ.ಸಿ. ಸಂಪುಟ -7 ಮ.ವ. ನಂ. 136	ಪುಟ 427

78.	ಅದೇ ಮ.ವ. ನಂ. 31	ಪುಟ 364
79.	ಅದೇ ಮ.ವ. ನಂ. 3	ಪುಟ 349
80	ಅದೇ ಮ.ವ. ನಂ. 139	ಪುಟ 429
81.	ಇ.ಸಿ. ಸಂಪುಟ- 6 ಕೆ.ಆರ್.ಪೇ.ನಂ. 8	ಪುಟ 7
82.	ಇ.ಸಿ. ಸಂಪುಟ -7 ಮ.ವ. ನಂ. 106	ಪುಟ 408
83.	ಅದೇ ಮಂಡ್ಯ ನಂ. 32	ಪುಟ 217
84.	ಅದೇ ಮಂಡ್ಯ ನಂ. 42	ಪುಟ 230
85.	ಅದೇ ನಾ.ಮಂ. ನಂ. 107	ಪುಟ 100
86.	ಅದೇ ನಾ.ಮಂ. ನಂ. 45	ಪುಟ 27
87.	ಇ.ಸಿ. ಸಂಪುಟ-6 ಶ್ರೀ.ಪ. ನಂ.22	ಪುಟ 348
88.	ಅದೇ ಶ್ರೀ.ಪ. ನಂ. 101	ಪುಟ 422
89.	ಅದೇ ಶ್ರೀ. ಪ. ನಂ. 106	ಪುಟ 106
90.	ಇ.ಸಿ. ಸಂಪುಟ -7 ಮಂಡ್ಯ ನಂ. 16	ಪುಟ 203
91.	ಅದೇ ಮದ್ದೂರು ನಂ. 48	ಪುಟ 279
92.	ಅದೇ ಮದ್ದೂರು ನಂ. 40	ಪುಟ 275
93	ಅದೇ ನಾ.ಮಂ. ನಂ. 82	ಪುಟ 84
94.	ಕರ್ನಾಟಕದಲ್ಲಿ ಕೆರೆ ನೀರಾವರಿ -2000 ನೇ ಇಸವಿ	ಪುಟ 64
95.	ಅದೇ	ಪುಟ 65
96	ಅದೇ	ಪುಟ 125
97	ಕರ್ನಾಟಕದಲ್ಲಿ ಕೆರೆ ನೀರಾವರಿ ಪದ್ಧತಿ	ಪುಟ 124
98	ಅದೇ	ಪುಟ 125
99	ಅದೇ	ಪುಟ 106
100.	ಅದೇ	ಪುಟ 107
101.	ಅದೇ	ಪುಟ 115
102	ಅದೇ	ಪುಟ 121
103	ಅದೇ	ಪುಟ 143
104	ಅದೇ	ಪುಟ 144

ಅಧ್ಯಾಯ –4

1800 ರಿಂದ 1955 ರವರೆಗೆ ಮತ್ತು ಪ್ರಸ್ತುತ ಕೆರೆ ನೀರಾವರಿ ವ್ಯವಸ್ಥೆ

4.1 ಬುಕಾನನ್ ಕಂಡಂತೆ ಕೆರೆ ನೀರಾವರಿ

4.2 ಕಮಿಷನ್ನರ್‌ಗಳ ಕಾಲದಲ್ಲಿ ಕೆರೆ ನೀರಾವರಿ

4.3 ದಿವಾನರ ಕಾಲದಲ್ಲಿ ಕೆರೆ ನೀರಾವರಿ

4.4 ಪ್ರಸ್ತುತ ಕೆರೆ ನೀರಾವರಿ ಚೌಕಟ್ಟು

ಅಧ್ಯಾಯ -4

1800-1955ರ ವರೆಗೆ ಕೆರೆ ನೀರಾವರಿ ಮತ್ತು ಪ್ರಸೂತ ಕೆರೆ ನೀರಾವರಿ

4.1 ಫ್ರಾನ್ಸ್‌ನ ಬುಕಾನನ ಕಂಡಂತೆ ಮಂಡ್ಯ ಜಿಲ್ಲೆಯು ಕೆರೆ ನೀರಾವರಿ ಮತ್ತು ಬೆಳೆಗಳು.

ಇಂಗ್ಲೇಂಡಿನ ಫ್ರಾನ್ಸಿಸ್ ಬುಖಾನನರವರು ಕ್ರಿ.ಶ. 1800 ರಲ್ಲಿ ಪೋಟ್‌ದ ವಿಲಿಯಂನ ಗರ್ವನರ್‌ಜನರಲ್ ಆಗಿದ್ದ ಮಾರ್ಕಿಸ ವೆಲ್ಲಿಸ್ಲಿಯವರ ನಿರ್ದೇಶನದಂತೆ ದಕ್ಷಿಣ ಭಾರತದ ವಿಶೇಷವಾಗಿ ಟಿಪ್ಪುವಿನ ಸಾಮ್ರಾಜ್ಯದಲ್ಲಿ ಆರ್ಥಿಕ ವ್ಯವಸ್ಥೆಯ ಮೂಲಗಳು, ಜನರ ಜೀವನ ಮಟ್ಟ ಮತ್ತು ಕೃಷಿ ಪದ್ಧತಿ ಹಾಗೂ ಉತ್ಪನ್ನಗಳ ಮಾಹಿತಿ ಸಂಗ್ರಹಣೆಗಾಗಿ ನೇಮಿಸಲ್ಪಟ್ಟಿದ್ದರು. 1801 ರಲ್ಲಿ ಪ್ರಯಾಣ ಮಾಡಿದ ಬುಖಾನನರವರು ಅಂಕೆ ಸಂಖ್ಯೆಗಳ ಸುದೀರ್ಘ ಸರ್ವೇಕ್ಷಣ ವರದಿ 1807 ರಲ್ಲಿ ಲಂಡನ್‌ನಲ್ಲಿ ಮೂರು ಸಂಪುಟಗಳೊಂದಿಗೆ ಮುದ್ರಣಗೊಂಡಿದೆ. ಬುಕಾನನರವರ ವರದಿಯು ಕ್ರಿ. ಶ. 18 ನೇ ಶತಮಾನ ಹಾಗೂ ಅದಕ್ಕೂ ಪೂರ್ವದ ಹಲವು ಶತಮಾನಗಳ ದಕ್ಷಿಣ ಭಾರತದ ಸಂಪ್ರದಾಯ ಬದ್ಧವಾದ ಕೃಷಿ ಪದ್ಧತಿಯನ್ನು ವಿವರಿಸುವ ಕೈಪಿಡಿಯಾಗಿದೆ. ಬುಖಾನನರವರು ತಿಳಿಸುವ ಕೃಷಿ ಕ್ಷೇತ್ರದ ಉಪಕರಣಗಳು ಅವುಗಳ ವಿನ್ಯಾಸ, ಹೆಸರು ಇತ್ಯಾದಿ 20-21 ನೇ ಶತಮಾನದ ಈ ಭಾಗದ ಗ್ರಾಮೀಣ ಕೃಷಿಕರ ಜೀವನದಲ್ಲಿ ಕಂಡು ಬರುತ್ತಿರುವುದನ್ನು ಪರಿಶೀಲಿಸಬಹುದು.[1] ಇವನು ಕರ್ನಾಟಕದ ಉದ್ದಗಲಕ್ಕೂ ಭೇಟಿ ನೀಡಿ ಮಂಡ್ಯ ಜಿಲ್ಲೆಯ ಭಾಗದಲ್ಲೂ ಸಂಚರಿಸಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಮದ್ದೂರು, ಮಳವಳ್ಳಿ ಭಾಗದಲ್ಲಿ ಸಂಚರಿಸಿ ಮಾಹಿತಿಯನ್ನು ತನ್ನ ಕೈಪಿಡಿಯಲ್ಲಿ ಗುರುತಿಸಿಕೊಂಡಿದ್ದಾನೆ. ಪ್ರತ್ಯೇಕ್ಷದರ್ಶಿಯಾಗಿ ಅವನು ನೀಡಿರುವ ಮಾಹಿತಿಗಳು ಕರ್ನಾಟಕ ಆರ್ಥಿಕ ಇತಿಹಾಸದ ಸಮೀಕ್ಷೆ ಹಾಗೂ ಅಧ್ಯಯನಕ್ಕೆ ಉತ್ತಮ ಆಕರವಾಗಿದೆ ಎಂದು ಹೇಳಬಹುದು.

ಫ್ರಾನ್ಸಿನ ಬುಕಾನನ 1800 ರಲ್ಲಿ ಮೈಸೂರಿನ ಉದ್ದಗಲಕ್ಕೂ ಪ್ರವಾಸ ಮಾಡಿದ ಅವನು ಕೆರೆಗಳನ್ನು ವಿಂಗಡಿಸಿದನು. ಅಂತಹ ಕೆರೆಗಳೆಂದರೆ ದನಕರುಗಳಿಗೆ ಕುಡಿಯಲು ನೀರು ಒದಗಿಸುವ ಸಣ್ಣ ಜಲಾಶಯವೇ ' ಕಟ್ಟೆ' ಎಂದು ಭೂಮಿಗೆ ನೀರು ಹಾಯಿಸಲು ಉಪಯೋಗಿಸುವ ದೊಡ್ಡ ಜಲಾಶಯವೇ ' ಕೆರೆ' ಎಂದು ಆತ ತಿಳಿಸುತ್ತಾನೆ. ಅಲ್ಲದೆ ನೆಲದಲ್ಲಿ ಚೌಕವಾಗಿ ಅಗೆದು ಮಾಡಿದ ಕೆರೆಗಳ ಹೆಸರು ' ಕುಂಟೆ' ಎಂದು ಹೇಳುತ್ತಾನೆ.[2] ಆದರೆ ಅಂಥ ವರ್ಗೀಕರಣಕ್ಕೆ ಗೊತ್ತಾದ ನಿರ್ಧಿಷ್ಟ

ಗಾತ್ರಗಳ ಬಗ್ಗೆ ಏನನ್ನು ಅವನು ಸೂಚಿಸಿಲ್ಲ ಆದ್ದರಿಂದ ಅವುಗಳ ನಿರ್ಮಾಣದಲ್ಲಿ ನಿರ್ಧಿಷ್ಟತೆ ಇರಲಿಲ್ಲವೇನೂ ಎಂದು ಹೇಳಬಹುದು. ಕೆರೆಗಳನ್ನು ಅವುಗಳ ನೀರು ಪೂರೈಕೆಗೆ ಅನುಗುಣವಾಗಿ ಎರಡು ವಿಧಗಳಾಗಿ ಬುಕಾನನು ವಿಂಗಡಿಸಿದ್ದು, ಅವುಗಳೆಂದರೆ ನದಿ ನೀರು ಆಧಾರದ ಕೆರೆಗಳು ಮತ್ತು ಮಳೆ ನೀರು ಆಧಾರಿತ ಕೆರೆಗಳು ಬುಕಾನನು ಸುದೀರ್ಘ ಪ್ರಯಾಣದಲ್ಲಿ ಗಮನಿಸಿರುವ ಕರ್ನಾಟಕದ ಬಹುತೇಕ ಕೆರೆಗಳು ಈ ಮಾದರಿಯಲ್ಲಿಯೇ ನಿರ್ಮಾಣಗೊಂಡಿದೆ.[3]

ಕೆರೆಗಳ ಸಂರಕ್ಷಣೆಯ ಬಗೆಯೂ 18 ನೇ ಶತಮಾನದ ಕೊನೆಯಲ್ಲಿ ಈ ವ್ಯವಸ್ಥೆ ಇತ್ತು ಎಂದು ಮೈಸೂರಿನಲ್ಲಿ ಪ್ರವಾಸ ಮಾಡಿದ ಫ್ರಾನ್ಸಿನ ಬುಕಾನನು ತಿಳಿಸಿದ್ದಾನೆ. ನಿರ್ಮಾತೃವು ಆರುಸೇರುರಾಗಿ ಬಿತ್ತನೆ ಭೂಮಿಯನ್ನು ಕಂದಾಯವಿಲ್ಲದೆ ಪಡೆಯುವ ಹಕ್ಕನ್ನು ಹೊಂದಿದ್ದು. ಆತ ಇವುಗಳನ್ನು ಅನುಭವಿಸುತ್ತಿದ್ದವರೆಗೂ ಕೆರೆಯ ದುರಸ್ತಿ ಅವನಿಗೆ ಕಡ್ಡಾಯವಾಗಿತ್ತು. ಕೆರೆ ಭಾರಿ ವಿಸ್ತಾರವಿರಲಿಲ್ಲ. ಅದನ್ನು ಕಟ್ಟಿದಾತನಿಗೆ ಹಾಗೂ ಆತನ ಉತ್ತರಾಧಿಕಾರಿಗಳಿಗೆ ಕೆರೆಯಿಂದ ನೀರಾವರಿಯಾಗುವ ಕಾಲುಭಾಗ ಸಿಗುತ್ತಿತ್ತು. ಆದರೆ ಖುಷ್ಕಿ ಭೂಮಿ ಸಿಗುತ್ತಿರಲಿಲ್ಲ. ಮೂಲ ನಿರ್ಮಾತೃವಿನ ವಂಶ ನಿಂತು ಹೋದಲ್ಲಿ ಆ ಮಾನ್ಯದ ಭೂಮಿಯನ್ನು ಸರ್ಕಾರವೇ ವಹಿಸಿಕೊಳ್ಳುತ್ತಿತ್ತು. ಕೆರೆಗಳನ್ನು ದುರಸ್ತಿಯಲ್ಲಿ ಇಟ್ಟಿರುತ್ತಿತ್ತು.[4] 1800 ರಲ್ಲಿ ಬುಕಾನನ ನೋಡಿರುವ ಜಲ ನಿರ್ವಹಣೆ ಬುಕಾನನ ಪ್ರಕಾರ ಜೂನ್ ಕೊನೆಯಲ್ಲಿ ಅಂದರೆ ಬೇಸಾಯಕಾಲ, ಆರಂಭವಾಗುವ ರೈತರು ಕೆರೆಯಲ್ಲಿ ಸಿಗಬಹುದಾದ ನೀರಿನ ಪ್ರಮಾಣವನ್ನು ಅಂದಾಜು ಮಾಡುತ್ತಿದ್ದರು. ಇಡೀ ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತ ಬೆಳೆಯಲು ನೀರು ಸಾಕಷ್ಟು ಇಲ್ಲವಾಗಿದ್ದಲ್ಲಿ ಜೋಳ ಮತ್ತು ರಾಗಿ ಬೆಳೆ ನೆಡುತ್ತಿದ್ದರು ಮತ್ತು ಕರೆಯಲ್ಲಿ ಲಭ್ಯವಾಗುವ ನೀರಿನ ಪ್ರಮಾಣವನ್ನು ನೋಡಿಕೊಂಡು ಎಷ್ಟು ಸಾಧ್ಯವೋ ಅಷ್ಟು ಭೂಮಿಯಲ್ಲಿ ಭತ್ತವನ್ನು ಎರಡನೆ ಬೆಳೆಯಾಗಿ ಇಡುತ್ತಿದ್ದರು. ಕೆರೆಯನ್ನು ಕಟ್ಟಿಯಾದ ಮೇಲೆ ರೈತರು ತಮ್ಮ ಭೂಮಿಗಳಿಗೆ ನೀರು ಹಾಯಿಸಲು ಕಾಲುವೆಗಳನ್ನು ರಚಿಸುತ್ತಿದ್ದರು[5] ಎಂದು ಬುಕಾನನು ಹೇಳಿದ್ದಾನೆ. ಭೂಮಿಯ ತಾಕುಗಳ ಕಾಲುವೆಗಳನ್ನು ದೊಡ್ಡ ಕೆರೆಗಳ ಮುಖ್ಯ ನಾಲೆಯನ್ನು ನಿರ್ಮಾತೃವೇ ಕಟ್ಟಿಸುತ್ತಿದ್ದ ಅದು ಬೇರೆ ಬೇರೆ ಹಿಡುವಳಿದಾರರ ಭೂಮಿಯಲ್ಲಿ ಕಾಲುವೆಯನ್ನು ತೊಡಬೇಕಾಗಿತ್ತು.

ಬುಕಾನನ ವರ್ಣಿಸಿರುವ ಇನ್ನೊಂದು ಸ್ವಾರಸ್ಯಕರ ಅಂಶವೆಂದರೆ ಬಾಗಾಯತು ಅಥವಾ ಕಬ್ಬಿನ ಗದ್ದೆ ತಾಕಿನ ನೀರು ಹಂಚಿಕೆ ವ್ಯವಸ್ಥೆಯ ರಚನೆ (ಲೇಔಟ್) ಮುಖ್ಯ ನಾಲೆಗಳಿಂದ ಲಂಬವಾಗಿ

22 ಮೊಳೆಗಳ ಅಂತರದಲ್ಲಿ ಸರಬರಾಜು ಕಾಲುವೆಗಳನ್ನು ತೋಡಲಾಗುತ್ತಿತ್ತು. ಹೆಚ್ಚುವರಿ ನೀರನ್ನು ಆಚೆಗೆ ಸಾಗಿಸಲು ಸರಬರಾಜು ಕಾಲುವೆಗಿಂತ ಆಳವಾಗಿ ಹಾಗೂ ಅದಕ್ಕೆ ಸಮಾನಾಂತರವಾಗಿ ಬಚ್ಚಲು ಕಾಲುವೆಗಳನ್ನು ತೋಡಲಾಗುತ್ತಿತ್ತು. ಆ ಬಚ್ಚಲು ಕಾಲುವೆಗಳು ಮುಂದೆ ಒಂದು ಮುಖ್ಯ ಕಾಲುವೆಗೆ ಸೇರುತ್ತಿದ್ದವು. ಅಲ್ಲದೆ ಶ್ರೀರಂಗಪಟ್ಟಣ ಹಾಗೂ ಅದರ ಸುತ್ತಮುತ್ತ ಒಂದೇ ಭೂಮಿಯಲ್ಲಿ ಕಬ್ಬನೇ ಮತ್ತೆ ಮತ್ತೆ ಹಾಕುತ್ತಿರಲಿಲ್ಲ. ನಡುವೆ ಮೂರು ಭತ್ತದ ಬೆಳೆಯಿಟ್ಟು ನಂತರವೇ ಕಬ್ಬಿನ ಬೆಳೆ ಬೆಳೆಯುತ್ತಿದ್ದರು. ಮದ್ದೂರಿನಲ್ಲಿ ಕಬ್ಬಿನ ಬೆಳೆಯ ನಂತರ ಎಳ್ಳು, ಆಮೇಲೆ ಭತ್ತ, ನಂತರ ಕಬ್ಬು ಬೆಳೆಯುತ್ತಿದ್ದರು. ನೀರು ನಿಂತು ಜಮೀನು ಜೌಗು ಆಗದಂತೆ ಸಾಕಷ್ಟು ಗಮನ ನೀಡಲಾಗುತ್ತಿತ್ತು ಎನ್ನವುದುನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ಬುಕಾನನೇ ಗುರುತಿಸಿರುವಂತೆ ನೀರಾವರಿ ಕೃಷಿ, ನೀರಾವರಿ ಬೆಳೆಗಳು, ವೇತನ, ಅರಣ್ಯ ಮತ್ತು ಅರಣ್ಯ ಉತ್ಪನ್ನಗಳು ಇತ್ಯಾದಿ ಮಾಹಿತಿಗಳನ್ನು ಒಳಗೊಂಡಿದೆ. ಬುಕಾನನರು ತಿಳಿಸುವ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಮಕಾಲಿನ ಸ್ಥಳೀಯ ಸಾಹಿತ್ಯ ಮತ್ತು ಪುರಾತತ್ವ ಆಧಾರಗಳು ದೃಢಪಡಿಸುತ್ತದೆ. ಸರ್ಕಾರ ಕೃಷಿ ಕ್ಷೇತ್ರದ ಪ್ರಗತಿಗೆ ಪ್ರೋತ್ಸಾಹ ನೀಡಿತ್ತು. ಅಂದಿನ ಸರ್ಕಾರಗಳಿಗೆ ಇದರ ಆದಾಯವೇ ಮೂಲವಾಗಿತ್ತು. ಕೃಷಿ ಉಪಕರಣಗಳು ಮರಗಳಿಂದ ತಯಾರಿಸಲಾಗಿದ್ದು, ನೇಗಿಲು, ನೊಗ, ಕೊರಡು ಕುಂಟೆ, ನೀರ್ಗುಂಟೆ ಇತ್ಯಾದಿಗಳು ಬಳಕೆಯಲ್ಲಿದ್ದವು. ಬುಕಾನನ ಗುರುತಿಸಿರುವಂತೆ ನೀರಾವರಿ ಬೆಳೆಗಳಾದ ವಿವಿಧ ತಳಿಗಳ ಭತ್ತ, ಕಬ್ಬು ಮತ್ತು ಅಡಿಕೆ ಬೆಳೆಗಳು ಪ್ರಚಲಿತದಲ್ಲಿದ್ದು, ಒಣ ಬೇಸಾಯ ಪದ್ಧತಿಯಲ್ಲಿ ರಾಗಿ, ಹೆಸರು ಉದ್ದು, ಹುರುಳಿ, ತರಕಾರಿಗಳು ಎಳ್ಳು ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತಿತ್ತು.[7]

ಶ್ರೀರಂಗಪಟ್ಟಣದ ಪ್ರದೇಶ ಮರಳು ಮಿಶ್ರಿತ ಭೂಮಿಯಾಗಿದ್ದು ಕೃಷಿಗೆ ಯೋಗ್ಯವಾಗಿತ್ತು. ಕಾವೇರಿ ನದಿಯಿಂದ ನೀರನ್ನು ಬಳಸಿಕೊಂಡು ಸೋಸಿಲದಲ್ಲಿ 500 ಖಂಡುಗ ಭತ್ತ ಬೆಳೆಯುವಷ್ಟು ಕೃಷಿ ಭೂಮಿ ಇತ್ತು ಎನ್ನುವುದು ದೇವರಾಯನ ಕಾಲದ ದಾಖಲೆಗಳೊಂದಿಗೆ ದೃಢಪಡಿಸುತ್ತಾನೆ. . ಭತ್ತ, ಹತ್ತಿ, ಜೋಳ, ಕಬ್ಬು, ಇತ್ಯಾದಿಗಳನ್ನು ಬೆಳೆಯುತ್ತಿದ್ದರು. ಕಿರುಗಾವಲು ಮತ್ತು ಮಳವಳ್ಳಿ ಪ್ರದೇಶಗಳಲ್ಲಿ ಅತಿ ಕಡಿಮೆ ನೀರಾವರಿ ಸೌಲಭ್ಯಗಳಿದ್ದು, ಮಳವಳ್ಳಿಗೆ ಕೇವಲ 2 ಮೈಲು ದೂರದಲ್ಲಿ ಸರೋವರವಿದ್ದಾಗ್ಯೂ ಕೃಷಿ ಚಟುವಟಿಕೆಗಳು ಅತಿ ಕಡೆಯಾಗಿತ್ತು ಎಂದು ಬುಕಾನನು

ಹೇಳಿದ್ದಾನೆ. [8] ನೀರಾವರಿ ಭೂಮಿ ಸೂಚಿತವಾಗಿರುವುದು ಬಹುಮಟ್ಟಿಗೆ ಖಂಡುಗ ಮತ್ತರು ಹಾಗೂ ಸಲಗೆಗಳ ಪ್ರಮಾಣದಲ್ಲಿಯೇ ಮಾಪಾನ ಮಾಡಲಾಗಿತ್ತು ಎಂಬ ಬಗ್ಗೆ ಬುಕಾನನು ತಿಳಿಸಿದ್ದಾನೆ. ಶ್ರೀರಂಗಪಟ್ಟಣದ ಸಮೀಪದಲ್ಲಿ ಒಂದು ಖಂಡಗ ಭತ್ತದ ಗದ್ದೆ ಸುಮಾರು 6.2 ಎಕರೆಗೆ ತರಿ ಭೂಮಿ ಒಂದು ಖಂಡುಗಕ್ಕೆ ಸಮ ಎಂದು ಭಾವಿಸುವುದು ಯುಕ್ತವೆನಿಸುತ್ತದೆ.'

ಒಟ್ಟಾರೆಯಾಗಿ ನಾವು ಬುಕಾನನ ವರದಿಯನ್ನು ಮಂಡ್ಯ ಜಿಲ್ಲೆಗೆ ಒಳಪಡಿಸಬಹುದು. ಏಕೆಂದರೆ ಮೈಸೂರು ಪ್ರಾಂತ್ಯದದ್ಯಾಂತ ಸಂಚರಿಸಿರುವ ಇವನು ಹೇಳಿರುವ ಕೃಷಿ ಉಪಕರಣಗಳು ಇಂದಿಗೂ ಜಿಲ್ಲೆಯಲ್ಲಿ ಇರುವುದನ್ನು ನೋಡಬಹುದು ಅಲ್ಲದೆ ಅವನು ಮದ್ದೂರು ಶ್ರೀರಂಗಪಟ್ಟಣ, ಮಳವಳ್ಳಿ ವ್ಯಾಪ್ತಿಯಲ್ಲಿ ಸಂಚರಿಸಿ ಮಾಹಿತಿಯನ್ನು ಅಂದರೆ ಮಂಡ್ಯ ಜಿಲ್ಲೆಯ ವಿಷಯನ್ನು ಪ್ರತಿಪಾದಿಸಿದ್ದಾನೆ. ಇದರಿಂದ ಅವನು ಮೈಸೂರು ರಾಜ್ಯದ ಬಗ್ಗೆ ಹೇಳಿರುವಾಗ ಮಂಡ್ಯ ಭಾಗವು ಅದಕ್ಕೆ ಸೇರಿರುವುದನ್ನು ಗಮನಿಸಬಹುದು. ಇಂದಿಗೂ ನಾವು ಕೆರೆಗಳನ್ನು ಮಳೆ ಆಧಾರಿತ ನದಿ ನೀರು ಆಧಾರಿಸಿದ ಕೆರೆಗಳೆಂದು ವಿಭಾಗಿಸಿಕೊಂಡಿದ್ದೇವೆ. ಒಟ್ಟಾರೆ ಇವನ ಪ್ರವಾಸ ಕಥನದಿಂದ ಜಿಲ್ಲೆಯ ಕೆರೆ ನೀರಾವರಿ ಬಗ್ಗೆ ತಿಳಿಯಲು ಸಹಕಾರಿಯಾಗಿದೆ.

4.2 *ಕಮಿಷನ್ನರ ಕಾಲದಲ್ಲಿ ಕೆರೆ ನೀರಾವರಿ :-*

1799 ರಲ್ಲಿ ಟಿಪ್ಪುವಿನ ಸೋಲು ಮೈಸೂರು ಬ್ರಿಟಿಷರ ವಶವಾಗಿ ಮೈಸೂರುಒಡೆಯರ ಈ ಪ್ರಾಂತ್ಯದಲ್ಲಿ ಒಡೆಯರು ಆಳಲಾರಂಭಿಸಿದರು. ಬ್ರಿಟಿಷರ ಕಾಲಕ್ಕೆ ಮೊದಲು ಇದ್ದ ಕೆರೆಗಳ ಸಂಖ್ಯೆ ಅವುಗಳಿಂದ ನೀರಾವರಿಯಾಗುತ್ತಿದ್ದ ಪ್ರದೇಶ ಮತ್ತು ಅವುಗಳ ನಿರ್ಮಾಣ ಸಂರಕ್ಷಣೆ ವೆಚ್ಚ ಈ ಬಗ್ಗೆ ಯಾವುದೇ ದಾಖಲೆಗಳನ್ನು ಇಲ್ಲ. ಅಂಥ ಮಾಹಿತಿ ಸಿಗುವುದು. ಬ್ರಿಟಿಷರ ಆಡಳಿತ ಆರಂಭವಾದ ಮೇಲೆಯೇ. 1799 ರಲ್ಲಿ ಬ್ರಿಟಿಷರು ಮೈಸೂರಿನ ಭೌಗೋಳಿಕ ಹಾಗೂ ಅಂಕಿ ಅಂಶಗಳ ಸಮೀಕ್ಷೆಯನ್ನು ಆರಂಭಿಸಿದರು. ಆ ಸಮೀಕ್ಷೆ 1800 ಕ್ಕೆ ಮುಗಿಯಿತು. ಅದರ ವಿವರಗಳನ್ನು ಸಂಗ್ರಹಿಸಿದವರು ಕರ್ನಲ್ ಮೆಕೆಂಜಿ. ಅದ್ದರಿಂದ 14803 ರೂ. ಹೆಚ್ಚು ಕೆರೆಗಳೂ, 8562 ಕುಂಟೆಗಳು ಇದ್ದವೆಂದು ನಮಗೆ ತಿಳಿದುಬರುತ್ತದೆ.[10] ಈ ವಿವರದಲ್ಲಿ ಮಂಡ್ಯ ಜಿಲ್ಲೆಯ ಪ್ರಾಂತ್ಯದಲ್ಲಿ ಎಷ್ಟು ಕೆರೆಗಳು, ಕಟ್ಟೆಗಳು ಮತ್ತು ಕುಂಟೆಗಳು ಇದ್ದವು ಎಂಬ ಬಗ್ಗೆ ಈ ಕೆಳಗಿನ ಪಟ್ಟಿಯಲ್ಲಿ ಹೇಳಲಾಗಿದೆ.

ಮೇಕೆಂಜಿ ಅವರ ಮೈಸೂರು ಭೂವೈಜ್ಞಾನಿಕ ಹಾಗೂ ಸಂಖ್ಯೆ ಪರಿಶೀಲನಾ ಸಮೀಕ್ಷೆವಾರು ವರದಿ (1799 -1806)ಯಲ್ಲಿ ಕೆರೆಗಳ ವಿವರ. [11]

	ಕೆರೆಗಳು		ಕಟ್ಟೆಗಳು		ಕುಂಟೆಗಳು		ಅಣೆಕಟ್ಟುಗಳು	
	ದೊಡ್ಡದು	ಚಿಕ್ಕದು	ಚೆನ್ನಾಗಿ ಇರುವುದು	ಚೆನ್ನಾಗಿ ಇಲ್ಲದಿರುವುದು	ಚೆನ್ನಾಗಿ ಇರುವುದು	ಚೆನ್ನಾಗಿ ಇಲ್ಲದಿರುವುದು	ಚೆನ್ನಾಗಿ ಇರುವುದು	ಚೆನ್ನಾಗಿ ಇಲ್ಲದಿರುವುದು
ಮೇಲುಕೋಟೆ	133				1181			2
ಮದ್ದೂರು	252							
ನಾಗಮಂಗಲ	31	80	269	126				2
ಮಳವಳ್ಳಿ	-	-	-	-	-	-	-	-
ಕಿಕ್ಕೇರಿ	21	195						5
ಬೆಳ್ಳೂರು	219	1111						45
ಒಟ್ಟು	656	1386	269	126	1181	-	-	54

ಮಳವಳ್ಳಿ ಬಗ್ಗೆ ನೀರಾವರಿ ಕಾಮಗಾರಿಗಳ ಸಂಖ್ಯೆ ವರದಿಯಲ್ಲಿ ಇಲ್ಲ, ಆದರೂ ಮಳವಳ್ಳಿಯಲ್ಲಿ ಪಶ್ಚಿಮ ಭಾಗದಲ್ಲಿಹಾಗೂ ಕಸಬಾ ಸುತ್ತಮುತ್ತ ಹಲವಾರು ವಿಶಾಲವಾದ ಕೆರೆಗಳಿದ್ದವು. ಅವು ಭತ್ತ ಮಾತ್ರವಲ್ಲದೆ ವಿಳ್ಳೆದೆಲೆ, ಅಡಿಕೆ, ತೆಂಗು ಬಾಳೆಯ ತೋಟಗಳನ್ನು ಪೋಷಿಸುತ್ತಿದ್ದವು ಎಂದು ವರ್ಣಿಸಲಾಗಿದೆ. 1799ರ ಯುದ್ಧ ರಂಗದ ಬಳಿ ಕಾವೇರಿ ನದಿಯಿಂದ ಕೆರೆಯವರೆಗೂ ಇದ್ದ ಒಂದು ಪುರಾತನ ಅಣೆಕಟ್ಟಿನ ಗುರುತುಗಳು ಇದ್ದವು ಎಂದು ವರದಿ ಹೇಳುತ್ತದೆ.[12]

<u>ಕೆರೆಗಳ ಸಂಖ್ಯೆ (1800-1900) :-</u> 1846 ರಲ್ಲಿ ಮುಖ್ಯ ಇಂಜನಿಯರ್ ಆಗಿದ್ದ ಕರ್ನಲ್ ಗ್ರೀನ್ 20000 ಕ್ಕೂ ಹೆಚ್ಚು ಕೆರೆಗಳಿದ್ದವು ಎಂದು ವರದಿಯಲ್ಲಿ ಹೇಳಿದ್ದಾನೆ. 1853-54 ವರದಿ ಪ್ರಕಾರ ಮೈಸೂರು ಪ್ರಾಂತ್ಯದಲ್ಲಿ ಮುನಿಸಿಫಲ್ ಅಥವಾ ನೀರಾವರಿಗಳಲ್ಲದ ಹಾಗೂ ನೀರಾವರಿ ಎಂದು ವರ್ಗೀಕರಿಸಿದ ಕೆರೆಗಳು 26420 ಇದ್ದವು. 1921ರ ಇತ್ತೀಚಿನ ವರದಿ ಪ್ರಕಾರ 36265 ಕೆರೆಗಳಿದ್ದವು. ಈ ಪೈಕಿ 9865 ದುರಸ್ತಿ ಇರಲಿಲ್ಲ. ಅತಿ ಕಡಿಮೆ ಕಂದಾಯ ನೀಡುತ್ತಿದ್ದವು. ಇಲ್ಲಿ ಮೈಸೂರು ಸಂಸ್ಥಾನ ಎಂದರೆ ಮಂಡ್ಯ ಜಿಲ್ಲೆಯು ಸೇರಿಕೊಂಡಿತ್ತು.

ನೀರಾವರಿ ಪ್ರದೇಶ (1804-1874) :- ಆ ಹಿಂದಿನ ಕಾಲದ ನಾನ ಶಾಸನಗಳು ಬಹು ಸಂಖ್ಯೆಯ ಕೆರೆ ಕಾಲುವೆಗಳು ಇದುದ್ದಾಗಿ ತಿಳಿಸಿದರು. ನೀರಾವರಿಯಾಗಿದ್ದ ಪ್ರದೇಶದ ಬಗ್ಗೆ ಮಾಹಿತಿ ದೊರೆಯುದಿಲ್ಲ. 1804 ರಲ್ಲಿ ಮೈಸೂರಿನ ಹಂಗಾಮಿ ರೆಸಿಡೆಂಟ್ ವಿಲ್ಕ್ಸನ್ ವರದಿಯಿಂದ 1803-04 ರಲ್ಲಿ ಮೈಸೂರಿನ ಸಾಗುವಳಿಯಾಗುತ್ತಿದ್ದ ಖುಷ್ಕಿ ಜಮಿನು ಸುಮಾರು 8,13,431 ಎಕರೆ ಎಂದು ಮೊಟ್ಟ ಮೊದಲ ಬಾರಿಗೆ ಗೊತ್ತಾಗುತ್ತದೆ.

ಮೈಸೂರಿನಲ್ಲಿ ಒಡೆಯರಿಂದ ಅಧಿಕಾರ ಕಿತ್ತುಕೊಂಡು ಕಮಿಷನ್ನರ ಆಳ್ವಿಕೆ ಆರಂಭವಾಯಿತು. 1871ರಲ್ಲಿ ಮೈಸೂರು ಮುಖ್ಯ ಕಮಿಷನರ ಅವರ ವರದಿಯಲ್ಲಿ ನೀರಾವರಿ ಪ್ರದೇಶದ ವಿಸ್ತಾರದ ಬಗ್ಗೆ ತಿಳಿಯುತ್ತದೆ. ಈ ವರದಿ 1837 ರಿಂದ 1867 ರ ಅವಧಿಯಲ್ಲಿ ಖುಷ್ಕಿ ಹಾಗೂ ಭಾಗಾಯ್ತು ಪ್ರದೇಶ ಎಷ್ಟಿತ್ತು ಎಂದು ತಿಳಿಸುತ್ತದೆ. 1862-63, 1866-67 ರಲ್ಲಿ 5,07,345 ಎಕರೆ, 1873 -74, 1877 -78 ರ ಅವಧಿಯ ವಾರ್ಷಿಕ ಸರಾಸರಿ ಪ್ರದೇಶ 6,60,618 ಎಕರೆ ಇತ್ತು. ಬೇಸಾಯದಲ್ಲಿದ್ದ ಈ ಬಾಬ್ತು ವಿಸ್ತಾರದಲ್ಲಿ ಕೆರೆ, ನದಿಕಾಲುವೆ, ಬಾವಿ ಚಿಲುಮೆ, ಕಾಲುವೆ ಹೊಳೆ ಇತ್ಯಾದಿಗಳಿಂದ ನೀರಾವರಿ ಆಗುತ್ತಿದ್ದ ಪ್ರದೇಶವು ಸೇರಿದೆ. ಆದರೆ ಕೆರೆ ನೀರಾವರಿ ಪ್ರದೇಶ ತೋರಿಸಲು ಯಾವುದೇ ವಿವರ ದೊರಕುವುದಿಲ್ಲ.[14] ಕಮೀಷನ್ನರ ಕಾಲದಲ್ಲಿ ನೀರಾವರಿಗೆ ಅದ್ಯತೆ ನೀಡಿದರು. ಅದರೂ ಸಹ ಕೆರೆಗಳ ನೀರಾವರಿ ಬಗ್ಗೆ ಯಾವುದೇ ನಿರ್ದಿಷ್ಟ ಮಾನದಂಡ ತಿಳಿದು ಬರುವುದಿಲ್ಲ. ಅವರು ಕೇವಲ ಆಡಳಿತದಲ್ಲಿ ಸುಧಾರಣೆಗೆ ಮಾಡಲು ಮುಂದಾದರು. ಮಾರ್ಕ್ ಕಬ್ಬನ್ , ಬೌರಿಂಗ್, ರಿಚರ್ಡ್‌ಮೀಡ್, ಸ್ಯಾಂಡರ್ಸ್ ಕ್ರಮವಾಗಿ ಕಮಿಷನರ್ ಆದರು. ಯಾವುದೇ ಕೆರೆ ನೀರಾವರಿಗೆ ಯಾವುದೇ ರೀತಿಯ ಅಗತ್ಯ ಕ್ರಮ ಕೈಗೊಳ್ಳಲಿಲ್ಲ.

1880-1950 ರವರೆಗೆ ನೀರಾವರಿ ಅಭಿವೃದ್ಧಿ:

ಕೆರೆಗಳ ಜೀರ್ಣೋದ್ಧಾರವು ಅನೇಕ ಹೊಸ ನೀರಾವರಿ ಕೆರೆ- ಕಾಲುವೆಗಳ ರಚನೆಗಳ ಬಗೆಗಿನ ಸಾಮಾಜಿಕ ಕಾರ್ಯಕ್ರಮದ ದೆಸೆಯಿಂದಾಗಿ 1880-81 ರಲ್ಲಿ 366985 ಎಕರೆ ಇದ್ದ ಕಾಲುವೆ ಕೆರೆ ನೀರಾವರಿ ಪ್ರದೇಶ 1900-01 ಕ್ಕೆ 6,05,960 ಎಕರೆಗೆ ಹೆಚ್ಚಿತು. 1950-51 ವೇಳೆಗೆ 8,14,923, ಎಕರೆಗಳಷ್ಟಾಗಿತ್ತು. ಈ ಅಂಕಿ ಅಂಶಗಳನ್ನು ನೋಡಿದರೆ 1880-1900 ರ ವೇಳೆಗೆ ಕಾಲುವೆ ಹಾಗೂ ಕೆರೆಗಳ ನೀರಾವರಿ ಪ್ರದೇಶ ಹೆಚ್ಚಿದ್ದು ಕಾಣಬಹುದು. 1900-1930 ರ ವೇಳೆ ಕಾಲುವೆ ಮತ್ತು ಕೆರೆ

ನೀರಾವರಿ ಪ್ರದೇಶ ವಿಸ್ತರಣೆ ಗಮನಾರ್ಹವಾಗಿ ಹೆಚ್ಚಾಗಿತ್ತು.[15] 1980-1900 ರವರೆಗೆ ಕೆರೆ ನೀರಾವರಿ ಪ್ರದೇಶದಲ್ಲಿ ತೀವ್ರ ಹೆಚ್ಚಳಕ್ಕೆ ಹಾಗೂ ಅನೇಕ ಮುಖ್ಯ ಕೆರೆಗಳ ಜೀರ್ಣೋದ್ಧಾರವಾದದ್ದು ಹಾಗೂ 1930-1950 ರವರೆಗೆ ಇಳಿತಕ್ಕೆ ಕಾರಣ ಇದ್ದ ಅನೇಕ ಕೆರೆಗಳನ್ನು ಕೆಲಸಕ್ಕೆ ಬಾರದೆ ಹೋದದ್ದು ಮತ್ತು ಹೊಸ ಕೆರೆಗಳ ನಿರ್ಮಾಣ ಅತ್ಯಲ್ಪವಾದುದ್ದು 1873 ರ ಮುಖ್ಯ ಇಂಜನಿಯರ್ ಸೂಚಿಸಿದಂತೆ ಹೊಸ ಕೆರೆಗಳ ನಿರ್ಮಾಣಕ್ಕೆ ಸೂಕ್ತ ಸ್ಥಳಗಳು ಇದ್ದದ್ದು ತೀರ ಕಡಿಮೆ[16].

ಸ್ಯಾಂಕಿಯ ನೀರಾವರಿ ಯೋಜನೆ :- ಜಲಕ್ಷಾಮ ಹಾಗೂ ಬರಗಾಲವನ್ನು ನಿವಾರಿಸಲು ಆಗ ಮುಖ್ಯ ಇಂಜನಿಯರ್ ಆಗಿದ್ದ ಮೇಜರ್‌ಸ್ಯಾಂಕಿ 'ಈಗ ಇರುವ ಕೆರೆ ಕಾಲುವೆಗಳ ದುರಸ್ತಿ ಅಭಿವೃದ್ಧಿ ಪುನರ್ ನಿರ್ಮಾಣಕ್ಕೆ ಆದ್ಯ ಗಮನವನ್ನು ಕೊಡಬೇಕು ಎಂದು ಬಲವಾಗಿ ಪ್ರತಿಪಾದಿಸಿದ. ಆತನ ಪ್ರಕಾರ ಈ ಮಹಾ ಪ್ರದೇಶದಲ್ಲಿ ಹೊಸ ಕೆರೆ ಕಟ್ಟಲು ಸೂಕ್ಷ್ಮ ಸ್ಥಳವನ್ನು ಪತ್ತೆ ಮಾಡಲು ಬಹು ಚಾತುರ್ಯ್ಯ ಬೇಕು, ಮತ್ತೆ ಹೇಳಿದ ಹೊಸಕೆರೆ ಕಟ್ಟದರೆ ಅದೇ ತಗ್ಗಿನ ಕೆಳಕ್ಕಿರುವ ಇನ್ನೊಂದು ಕೆರೆಗೆ ನೀರಿನ ಹರಿವು ನಿಂತು ಹೋಗುವುದು ಖಚಿತ. ಇದರಿಂದ ಹಿತಾಸಕ್ತಿಗಳ ವ್ಯವಹಾರದಲ್ಲಿ ಕೈಹಾಕಿದಂತಾದಿತು. ದೊಡ್ಡ ಸಮುದಾಯಗಳಿಗೆ ಸಂಬಂಧಿಸಿದ ಸಾಕಷ್ಟು ಮುಖ್ಯವೂ, ದೊಡ್ಡವು ಆದ ಕೆರೆಗಳ ದುರಸ್ತಿ ಹಾಗೂ ಜೀರ್ಣೋದ್ಧಾರಕ್ಕೆ ಬದಲಾಗಿ ಇಡಿ ಕೆರೆ ವ್ಯವಸ್ಥೆಯ ಬಗ್ಗೆ ವೈಜ್ಞಾನಿಕ ನಿರ್ವಹಣೆಯನ್ನು ರೂಪಿಸಬೇಕು ಎನ್ನುವುದಕ್ಕೆ ಆತ ಒತ್ತು ಕೊಟ್ಟ.[17] ಸ್ಯಾಂಕಿ ಮೇಲಿನ ಕೆರೆಯನ್ನು ಅಭಿವೃದ್ಧಿ ಪಡಿಸಿದರೆ ಅದರ ಕೆಳಗಿನ ಕೆರೆಯನ್ನು ಕೈಬಿಡುವುದು ಎಷ್ಟು ಸಲ ಸಾಧ್ಯ . ಹಿಂದೆ ನೀರಾವರಿ ಆಗುತ್ತಿದ್ದ ಎಲ್ಲಾ ಜಮೀನನ್ನು ಜೊತೆಗೆ ಕೈಬಿಡಲಾದ ಕೆರೆಗಳ ಅಂಗಳವನ್ನು ಮೇಲಿನ ಕೆರೆಯಿಂದಲೇ ನೀರಾವರಿ ಮಾಡುವುದು ಸಾಧ್ಯ. ಹೆಚ್ಚುವರಿ ಅನುಕೂಲವೆಂದರೆ ಸಂರಕ್ಷಿಸಬೇಕಾದ ಕೆರೆ ಒಂದೇ ಒಂದು ಎರಡಲ್ಲ. ಪ್ರತಿಯೊಂದು ಕೆರೆಯ ಜಲವನ್ನು ಒಂದೇಯೋಜನೆಯಾಗಿ ಪರಿಗಣಿಸಬೇಕು. ಒಂದೇ ಆಗಿ ವರ್ಗೀಕರಿಸಬೇಕು. ಅದನ್ನು ನಿಖರವಾಗಿ ಮೋಜಣಿ ಮಾಡಬೇಕು, ಗುರುತಿಸಬೇಕು ಎಚ್ಚರಿಕೆಯಿಂದ ಯೋಜನೆಯನ್ನು ರೂಪಿಸಿ ಅನುಮೋದಿಸಿ ಸಮರ್ಥ ಮೇಲುಸ್ತುವಾರಿಯಲ್ಲಿ ಕಾರ್ಯವನ್ನು ನಿರ್ವಹಿಸಬೇಕು ಅನಂತರ ಆ ಜಾಲಕ್ಕೆ ಒಳಪಟ್ಟ ಕೆರೆಗಳ ಸಂರಕ್ಷಣೆಯು ರೈತರಿಗೆ ವಹಿಸಿ ಕೊಡಬಹುದು. ಅದರ ಯೋಜನೆಗಾಗಿ ದುರಸ್ತಿ ಜೀರ್ಣೋದ್ಧಾರಕ್ಕಾಗಿ 45 ಲಕ್ಷ ಆಗಿತ್ತು. 12 ವರ್ಷದಲ್ಲಿ ಪೂರೈಸಲು

ಉದ್ದೇಶಿಸಲಾಯಿತು." ಸ್ಯಾಂಕಿ ವರದಿ ವರದಿಯಾಗಿ ಉಳಿಯಿತು. ಇದರ ಬಗ್ಗೆ ಸರ್ಕಾರ ಯಾವುದೇ ಯೋಜನೆ ಮಾಡಲಿಲ್ಲ. ಇದರಿಂದ ಆ ಕಾಲದಲ್ಲಿ ಕೆರೆಗಳ ಗಮನಾರ್ಹ ಬದಲಾವಣೆ ಹೊಂದಲಿಲ್ಲ. 1881 ರಲ್ಲಿ ಸಂಸ್ಥಾನ ಆಡಳಿತ ಪುನರ್ ರಾಜರಿಗೆ ಮರಳಿದ ನಂತರ ನೀರಾವರಿ ಸೌಲಭ್ಯಗಳ ಅಭಿವೃದ್ಧಿಯನ್ನು ಸಂಸ್ಥಾನಕ್ಕೆ ವರ್ಗಿಹಿಸಲಾಯಿತು. ಸ್ಯಾಂಕಿರವರು ಕೆರೆಯ ಸಮಗ್ರ ಅಭಿವೃದ್ಧಿಗೆ ಹಾಕಿ ಕೊಟ್ಟ ವರದಿ ವರದಿಯಾಗಿಯೇ ಉಳಿಯಿತು. ಬ್ರಿಟಿಷರ ಆಡಳಿತದಲ್ಲಿ ಮೈಸೂರಿನ ವಿಭಾಗದಲ್ಲಿ ಮಂಡ್ಯ ಜಿಲ್ಲೆಯು ಸೇರಿಕೊಂಡಿತು. ಆದ್ದರಿಂದ ಇಲ್ಲಿ ಪ್ರತ್ಯೇಕ ಅಧ್ಯಾಯ ಮಾಡಿಲ್ಲ. ಅವರು ಕೈಗೊಂಡ ನಿರ್ಣಯಗಳು ಮಂಡ್ಯ ಜಿಲ್ಲೆಗೂ ಅನ್ವಯಿಸುತ್ತಿತ್ತು.

4.3 <u>ದಿವಾನರ ಕಾಲದಲ್ಲಿ ಕೆರೆ ನೀರಾವರಿ</u>:– ಟಿಪ್ಪುವಿನ ಮರಣದ ನಂತರ ಮೈಸೂರು ಸಂಸ್ಥಾನದ ಆಡಳಿತ ಒಡೆಯರಿಗೆ ಮರಳಿತು. ಇಲ್ಲಿ ಮಹಾರಾಜರು ಮುಮ್ಮಡಿ ಕೃಷ್ಣರಾಜ ಒಡೆಯರು ಇನ್ನು ಅಪ್ರಾಪ್ತರಾದರಿಂದ ಆಡಳಿತವನ್ನು ದಿವಾನ ಪೂರ್ಣಯ್ಯರವರಿಗೆ ವಹಿಸಲಾಯಿತು. ದಿವಾನ ಪೂರ್ಣಯ್ಯರವರು ಕೆರೆ ನೀರಾವರಿಗೆ ಆದ್ಯತೆ ನೀಡಿ ಮೈಸೂರು ಪ್ರಾಂತ್ಯ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಜೀರ್ಣೋದ್ಧಾರ ಮಾಡಿಸಿದರು. ಅಲ್ಲದೆ ದುರಸ್ತಿ ಮಾಡಿಸಿ ಕೃಷಿಗೆ ಅನುಕೂಲ ಮಾಡಿ ಕೊಟ್ಟರು. ಪಾಂಡವಪುರ ತಾಲ್ಲೂಕಿನ ತೊಣ್ಣೂರು ಕೆರೆಯನ್ನು ಜೀರ್ಣೋದ್ಧಾರ ಮಾಡಿಸಿದರು. ಆತನ ಪ್ರಕಾರ ಹಲವಾರು ವರ್ಷಗಳಿಂದಲೂ ಹಾಳುಬಿದ್ದಿದ್ದ ಕೆರೆಯನ್ನು ಅತ್ಯಂತ ಭದ್ರವಾಗಿ ಪುನರ್ ನಿರ್ಮಿಸಲಾಗಿದೆ. ಮತ್ತು ಈಗ ಅದರಲ್ಲಿ ಸುಮಾರು 12 ಆಳು ಅಡಿ ಪ್ರಮಾಣದ ನೀರು ಇದೆ ಎಂದು ಹೇಳಿದರು. ಒಟ್ಟಾರೆ ದಿವಾನ ಪೂರ್ಣಯ್ಯರವರು ನೀರಾವರಿಗೆ ಆದ್ಯತೆ ನೀಡಿ ಕೆರೆಗಳನ್ನು ಜೀರ್ಣೋದ್ಧಾರ ಮಾಡಿಸಿದ್ದರು. ಮಹಾರಾಜರು ಪ್ರಾಪ್ತರಾದರಿಂದ ಅವರಿಗೆ ಅಧಿಕಾರ ವಹಿಸಿಕೊಡಲಾಯಿತು. ಆದರೆ ಅವರು ಕೆರೆ ನೀರಾವರಿಯ ಬಗ್ಗೆ ಅಷ್ಟು ಆಸಕ್ತಿ ಇರಲಿಲ್ಲ. ಇವರ ಆಡಳಿತದಲ್ಲಿ ಅವರಿಗೆ ತಿಳಿಯದ ಹಾಗೇ ಭ್ರಷ್ಟಚಾರಿಗಳ ನಡೆದು ಆಡಳಿತ ಯಂತ್ರ ಕುಸಿದಾಗ ಬ್ರಿಟಿಷರು ಪುನಃ ಅವರಿಂದ ಅಧಿಕಾರ ಕಿತ್ತು ಕಮಿಷನ್ನರ ನೇಮಕ ಮಾಡಿತು. ಪುನಃ ಮೈಸೂರು ಒಡೆಯರಿಗೆ ಅಧಿಕಾರವನ್ನು 1881 ರಲ್ಲಿ ಮರಳಿ ನೀಡಿತು. 10 ನೇ ಜಯಚಾಮರಾಜ ಒಡೆಯರ್ ಅಧಿಕಾರಕ್ಕೆ ಬಂದರು.

ದಿವಾನ ಶ್ರೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ ಕೆರೆ ನೀರಾವರಿಗೆ ಆದ್ಯತೆ ನೀಡಿದರು. ಅವರು ಕೆರೆಗಳ ಜೀರ್ಣೋದ್ಧಾರ ಮಾಡಿಸಿ ಅಭಿವೃದ್ಧಿ ಪಡಿಸುವುದು. 1884 ರಲ್ಲಿ ಅವರು ಹೀಗೆ

ಅಭಿಪ್ರಾಯ ಪಟ್ಟರು. ''ನಮ್ಮ ಕೆರೆಗಳ ವ್ಯೂಹದ ಯಾವುದೇ ಸುಧಾರಣೆಯೂ ಈ ವಸ್ತು ಸ್ಥಿತಿಯನ್ನು ಸ್ಪಷ್ಟವಾಗಿ ಗುರಿತಿಸಿ ಮೊದಲಾಗಬೇಕು. ಏನೆಂದರೆ ಪ್ರಾಂತ್ಯದಲ್ಲಿರುವ ಎಲ್ಲಾ ಕೆರೆಗಳನ್ನು ದುರಸ್ತಿ ಜೀರ್ಣೋದ್ಧಾರವನ್ನು ಕೈಗೆತ್ತಿಕೊಳ್ಳುವುದು ಸರ್ಕಾರದ ಸಮರ್ಥ್ಯಕ್ಕೆ ಮೀರಿದ್ದು. ಅಲ್ಲದೆ ಗ್ರಾಮ ವ್ಯವಸ್ಥೆ ಅದರ ಯಾವ ತುಣುಕು ಉಳಿದಿತ್ತೋ ಅದು ಅಸಂಘಟಿತವಾಗಿ ಹೋದ ಮೇಲೆ ಕೆರೆಗಳ ದುರಸ್ತಿಗಾಗಿ ವಿಶೇಷ ಸುಂಕಗಳನ್ನು ಹೇರಿ ರೈತರನ್ನು ತನ್ನ ಹೊಣೆಯಿಂದ ಬಿಡಿಸಿಯಾದ ಮೇಲೆ ಕೆರೆಗಳ ಭಾರವನ್ನು ಆತನ ಮೇಲೆಯೆ ಏರುವುದು ನ್ಯಾಯವಾಗಲಾರದು.[19] 1884 ರಲ್ಲಿ ದಿವಾನರಾದ ಶೇಷಾದ್ರಿರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾತನಾಡುತ್ತಾ ದೊಡ್ಡವು ಸಣ್ಣವು ಸೇರಿದಂತೆ ಹೆಚ್ಚು ಕಡಿಮೆ 38000 ಕೆರೆಗಳು ಇವೆ. ಹೊಸಕರೆ ಸೂಕ್ತವಾದ ಸ್ಥಳವನ್ನು ಹುಡುಕುವುದೇ ತುಂಬಾ ಕಷ್ಟ ಎಂದು ಹೇಳಿದರು. [20]

<u>ದಿವಾನರ ಜೀರ್ಣೋದ್ಧಾರ ಯೋಜನೆ:-</u> 1885 ರಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಕೆರೆಗಳ ಅಂದಿನ ಸ್ಥಿತಿರುವ ಬಗ್ಗೆ ಮಾತನಾಡುತ್ತಾ ಕೆರೆಗಳ ಜೀರ್ಣೋದ್ಧಾರಕ್ಕೆ ಒಂದು ಯೋಜನೆಯನ್ನು ಮಂಡಿಸಿದರು. 1887 ರಲ್ಲಿ ಒಪ್ಪಿಗೆ ಪಡೆಯಿತು. 300 ರೂ. ಅದಕ್ಕಿಂತಲೂ ಕಡಿಮೆ ಕಂದಾಯ ಹುಟ್ಟುವಳಿಯ ಕೆರೆಗಳನ್ನೆಲ್ಲ ಸಣ್ಣಕೆರೆಗಳು ಎಂದು ಪರಿಗಣಿಸಿ ಅದರ ಜೀರ್ಣೋದ್ಧಾರದ ಹೊಣೆ ರೈತರದೆ ಎಂದು ಹೇಳಿತು. ರೈತರು ಮಣ್ಣು ಕೆಲಸ ಮಾಡಬೇಕು ಅಗತ್ಯವಾದ ಕಲ್ಲು ಕಟ್ಟಡಗಳನ್ನು ವಹಿಸಿಕೊಡಲು ಒಪ್ಪಿತು.

300 ರೂ.ಗಳಿಗಿಂತ ಹೆಚ್ಚಿನ ಕಂದಾಯ ತರುವ ಇತರ ಎಲ್ಲಾ ಕೆರೆಗಳ ಜೀರ್ಣೋದ್ಧಾರವನ್ನು ಸರ್ಕಾರವೇ (ಲೋಕೋಪಯೋಗಿ) ರೈತರ ದೇಣಿಗೆಯ ನೆರವಿನಿಂದ ನಿರ್ವಹಿಸಬೇಕು ಎಂದು ಆಜ್ಞೆಯಾಯಿತು. ಇದನ್ನ ತೃಪ್ತಿಕರವಾಗಿ ತರಲು ನಿರೀಕ್ಷಸಲಾಯಿತು. [21] ಕೆರೆಗಳ ಜೀರ್ಣೋದ್ಧಾರ ದುರಸ್ತಿ ಮಾಡಿಸಿ ನೀರಾವರಿಗೆ ಆದ್ಯತೆ ನೀಡಿದರು.

ಇವರ ನಂತರ ದಿವಾನ ವಿ. ಪಿ. ಮಾಧವರಾಯ.ರು 1902 ರಲ್ಲಿ ಸಣ್ಣ ಕೆರೆ ನೀರಾವರಿ ಜೀರ್ಣೋದ್ಧಾರ ಯೋಜನೆಯನ್ನು ಕುರಿತ ತಮ್ಮ ವರದಿಯಲ್ಲಿ 39000 ಕೆರೆಗಳಿವೆ. ಅವುಗಳಲ್ಲಿ 10000 ಕೆರೆಗಳಿಂದ ಯಾವ ಕಂದಾಯವೂ ಸಿಗುವುದಿಲ್ಲ ಎಂದು ಸೂಚಿಸಿದರು. ಅಲ್ಲದೇ ಅವರ ಪ್ರಕಾರ ಆ 29000 ಕೆರೆಗಳಲ್ಲಿ 7000 ಕೆರೆಗಳು ಒಡೆದು ಹೋಗಿದ್ದವು.

ಈ ಪುರಾವೆಯಿಂದ ನಿಚ್ಚಳವಾಗಿ ತೋರುವುದೇನೆಂದರೆ 19ನೇಶತಮಾನದ ಆದಿಯಲ್ಲಿ ಮೈಸೂರು ಪ್ರಾಂತ್ಯದಲ್ಲಿ ಸುಮಾರು 30000 ದೊಡ್ಡವು ಸಣ್ಣವು ಕೆರೆಗಳಿದ್ದವು ಎಂದು 20 ನೇ ಶತಮಾನದ ಆದಿಯಲ್ಲೂ ಸಂಖ್ಯೆ ಅದೇ ಆಗಿತ್ತು. ಅವುಗಳಲ್ಲಿ ಅನೇಕವು ಒಡೆದು ಹೋಗಿದ್ದವು. ಆ ಕೆರೆಗಳ ಜೀರ್ಣೋದ್ಧಾರವೇ ಆ ಕಾಲದ ಮುಖ್ಯ ಕಾರ್ಯವಾಗಿತ್ತು.

ಇವರ ನಂತರ ದಿವಾನರಾದ ವಿಶ್ವೇಶ್ವರಯ್ಯರವರು ಮಂಡ್ಯ ಜಿಲ್ಲೆಯಲ್ಲಿ ಕಾವೇರಿಗೆ ಅಣೆಕಟ್ಟು ಕಟ್ಟಿಸಿದರು ಅದರೂ ಸಹ ಕೆರೆಗಳ ಅಭಿವೃದ್ಧಿ ಪಡಿಸಿದರು. ಅವರ ಮೈಸೂರು ವಿಭಾಗದಲ್ಲಿ ಅನೇಕ ನೀರಾವರಿ ಯೋಜನೆಯನ್ನು ಕೈಗೊಂಡರು ತಾಕು ನೀರಾವರಿ ಪದ್ಧತಿಯನ್ನು ಜಾರಿಗೆ ತಂದರು. ವಿಶ್ವೇಶ್ವರಯ್ಯನವರು ಕೆರೆ ನೀರಾವರಿ ವ್ಯವಸಾಯದ ಜೀವನಾಡಿ ಎಂದು ಅಭಿಪ್ರಾಯಪಟ್ಟರು. ನೀರಾವರಿಯ ಅಭಿವೃದ್ಧಿಯಿಂದ ಬರಗಾಲದ ಸಮಸ್ಯೆಗಳನ್ನು ನಿವಾರಣೆಯಾಗುವುದಲ್ಲದೆ ರಾಜ್ಯದ ಸಂಪತ್ತು ಹೆಚ್ಚುತ್ತದೆ ಎಂದು ಅವರು ಅಭಿಪ್ರಾಯ ಪಟ್ಟರು. ಅದಕ್ಕಾಗಿ ದೀರ್ಘಾವಧಿ ಯೋಜನೆಗಳನ್ನು ಕೈಗೊಂಡರು. ಅವರು ನಾಲೆಗಳ ನಿರ್ಮಾಣ, ಕೆರೆಗಳ ನಿರ್ಮಾಣ, ಸಣ್ಣಕೆರೆಗಳ ಸಂರಕ್ಷಣೆಗೆ ವಿಶೇಷ ಆಸಕ್ತಿ ವಹಿಸಿದ್ದರು. ಇದರಿಂದ ಅಧಿಕ ನೀರಾವರಿ ಕಾರ್ಯಗಳು ನಡೆದವು. ಅವರು ಮಾಡಿದ ಸಲಹೆಗಳ ಮುಖ್ಯವಾಗಿದೆ.1) ಕಾವೇರಿ ಕಣಿವೆಯಲ್ಲಿ ಕಾಲುವೆಗಳನ್ನು ಅಭಿವೃದ್ಧಿ ಪಡಿಸುವುದು. 2) ಕೆಲವು ದೊಡ್ಡ ಕೆರೆಗಳನ್ನು ಮತ್ತು ನಾಲೆಗಳನ್ನು ಪ್ರಯೋಗಾರ್ಥವಾಗಿ ಸರ್ಕಾರ ಮತ್ತು ಸ್ಥಳೀಯ ಸಮಿತಿಗಳ ಜಂಟಿ ಉಸ್ತುವಾರಿಗೆ ವಹಿಸುವುದು. 3) ಕೆರೆ ಪಂಚಾಯಿತಿಗಳನ್ನು ರಚಿಸುವುದು 4) ನೀರಾವರಿ ಅಂಕಿ ಅಂಶಗಳನ್ನು ಸಂಗ್ರಹಿಸುವುದು 5) ನೀರಾವರಿ ನಿಬಂಧನೆಗಳನ್ನು ರಚಿಸುವುದು. ಇವರ ಎಲ್ಲಾ ಸಲಹೆಗಳನ್ನು ಅವರು ದಿವಾನರಾದ ಮೇಲೆ 1913 ರಲ್ಲಿ ಸರ್ಕಾರ ಅಂಗೀಕರಿಸಿತ್ತು.[23]

ನೀರಾವರಿಗಾಗಿ ಮಾಡುತ್ತಿದ್ದ ವಾರ್ಷಿಕ ವೆಚ್ಚವನ್ನು 6 ಲಕ್ಷ ರೂ.ಗಳಿಂದ 10 ಲಕ್ಷ ರೂಗಳಿಗೆ ಹೆಚ್ಚಿಸಿ ಮುಂದಿನ ಐದು ವರ್ಷಗಳಲ್ಲಿ ನೀರಾವರಿ ವಿಭಾಗಗಳಿಗೆ ವಾರ್ಷಿಕ ವೆಚ್ಚದ ಕ್ರಮವನ್ನು ನಿಗಧಿಗೊಳಿಸಿತು. ಅದರ ರೂ.ಗಳು ಹೀಗಿದೆ[24].

1.	ದೊಡ್ಡ ಕೆರೆಗಳಿಗೆ	4 ½ಲಕ್ಷ ರೂ.ಗಳು
2.	ಸಣ್ಣ ಕೆರೆಗಳ ಮತ್ತು ಮಲೆನಾಡು ಕೆರೆಗಳು	3 ಲಕ್ಷ ರೂ. ಗಳು
3.	ನಾಲೆಗಳು ಮತ್ತು ಕಾಲುವೆಗಳು	2 ಲಕ್ಷ ರೂ.ಗಳು
4.	ನೀರಾವರಿ ಮತ್ತು ಪರಿಶೋಧನೆ	½ ಲಕ್ಷ ರೂ. ಗಳು
	ಒಟ್ಟು	10 ಲಕ್ಷ ರೂ.ಗಳು

ಒಟ್ಟಾರೆ ದಿವಾನ ಪೂರ್ಣಯ್ಯನ ನಂತರ ಮೊದಲ ಬಾರಿಗೆ ನೀರಾವರಿಗೆ ಹೆಚ್ಚಿನ ಪ್ರೋತ್ಸಾಹ ದೊರತಿದ್ದು, ವಿಶ್ವೇಶ್ವರಯ್ಯರವರ ಕಾಲದಲ್ಲಿಯೇ ಅವರು ನೀರಾವರಿಗೆ ಹೆಚ್ಚು ಆದ್ಯತೆ ನೀಡಿದಂತೆ ಕೆರೆಗಳ ಅಭಿವೃದ್ಧಿಗೂ ಅದ್ಯತೆ ನೀಡಿದ್ದರು ಅವುಗಳು ಹೀಗಿದೆ.

ದೊಡ್ಡ ಕೆರೆಗಳ ನಿರ್ಮಾಣ :- ಇವರ ಕಾಲದಲ್ಲಿ 2500 ರೂಗಳಿಗೆ ಮೇಲ್ಪಟ್ಟು 102 ಪ್ರಮುಖ ಕಾಮಗಾರಿಗಳನ್ನು ಕೈಗೊಳ್ಳಲಾಯಿತು.[24] ಅಂತಹ ಕಾಮಗಾರಿಯ ಕೆರೆಯಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮಂಚಿಪಟ್ಟಣ ಕೆರೆ ಒಂದು.[26] ಇನ್ನು ಅನೇಕ ಕೆರೆಗಳನ್ನು ದುರಸ್ತುಗೊಳಿಸಲಾಯಿತು. ದೊಡ್ಡ ಕೆರೆಗಳ ನಿರ್ಮಾಣ ದುರಸ್ತಿ ಇತ್ಯಾದಿಗಳ ಬಗ್ಗೆ ಹೆಚ್ಚಿನ ಅಧ್ಯತೆ ನೀಡಲಾಗಿತ್ತು.

ಸಣ್ಣ ಕೆರೆಗಳ ಸಂರಕ್ಷಣಾ ಯೋಜನೆ :- ವಿಶ್ವೇಶ್ವರಯ್ಯನವರು ದೊಡ್ಡ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಬಗ್ಗೆ ಆಸಕ್ತರಾಗಿದ್ದಂತೆಯೇ ಸಣ್ಣ ನೀರಾವರಿಯ ಬಗ್ಗೆಯು ಆಸಕ್ತಿ ವಹಿಸಿದ್ದರು. ಅವರು ಅಂಕಿ ಅಂಶಗಳಂತೆ ರಾಜ್ಯದಲ್ಲಿ 29000 ಸಣ್ಣ ಮತ್ತು ದೊಡ್ಡ ಕೆರೆಗಳಿದ್ದವು. ಆದರಲ್ಲಿ 2500 ಕೆರೆಗಳನ್ನು ದೊಡ್ಡ ಕೆರೆಗಳೆಂದು ವಿಭಾಗಿಸಲಾಗಿತ್ತು.[27] ಇವುಗಳಲ್ಲಿ ಅನೇಕ ಹಿಂದೆಯೇ ನಿರ್ಮಿಸಲಾಗಿದ್ದು ಅವುಗಳಲ್ಲಿ ಹೂಳು ತುಂಬಿಕೊಂಡಿತ್ತು. ಸಮಸ್ಯೆಯನ್ನು ನಿವಾರಿಸಲು ವಿಶ್ವೇಶ್ವರಯ್ಯನವರು 1914 ರಲ್ಲಿ ಸಣ್ಣ ಕೆರೆಗಳ ಸಂರಕ್ಷಣಾ ಯೋಜನೆಯನ್ನು ಜಾರಿಗೆ ತಂದರು. ಇದು ಸ್ಥಳೀಯರನ್ನು ಒಳಗೊಂಡ ಯೋಜನೆಯಾಗಿ ವಿಶಿಷ್ಟವೆನಿಸಿತು. ಕೆರೆಗಳ ದುರಸ್ತಿಯನ್ನು ಸರ್ಕಾರವೇ ಮಾಡುವುದು. ವೆಚ್ಚದ ದೃಷ್ಟಿಯಿಂದ ಅಸಾಧ್ಯವಾದ ಕಾರ್ಯವಾಗಿತ್ತು. ಕರೆ ನಿಬಂಧನೆ ಜಾರಿಗೆ ತರಲಾಯಿತು. ಇದಾದ ನಂತರ ಕೆರೆ ಪಂಚಾಯಿತಿಗಳು ಸರ್ಕಾರಿ ಅಧಿಕಾರಿಗಳು ಮತ್ತು ಸ್ಥಳೀಯ ಪ್ರತಿನಿಧಿಗಳಿಂದ ಕೂಡಿತ್ತು. ಇವು ಕೆರೆಗಳ ಸಂರಕ್ಷಣೆ ಉಸ್ತುವಾರಿ ಅಧಿಕಾರ ಪಡೆದಿದ್ದವು. ಕೆರೆಯನ್ನು ಮೂಲತಃ ನಿರ್ಮಿಸಿದವರು ಅವುಗಳು ಆಸುಪಾಸಿನಲ್ಲಿ ವಾಸವಾಗಿದ್ದ ಜನ. ಅದರಲ್ಲಿ ಆಸಕ್ತರಾಗಿದ್ದವರೇ ಅವರು ಹೀಗಾಗಿ ಆ ಗ್ರಾಮಸ್ಥರು ಅವುಗಳ ನಿರ್ವಹಣೆಗೆ ಹೆಚ್ಚು ಅರ್ಹರು.[28] ಎಂದು ಅಭಿಪ್ರಾಯ ಹೊಂದಿದ್ದರು. 1914 ರಲ್ಲಿ ಜಾರಿಗೆ ತಂದ ಸಣ್ಣ ಕೆರೆಗಳ ಸಂರಕ್ಷಣ ಯೋಜನೆ ಅದಕ್ಕೆ ಪೂರಕವಾಗಿತ್ತು.

1916 ರಲ್ಲಿ ಸಣ್ಣ ಕೆರೆಗಳು ಸಂರಕ್ಷಣ ನಿಬಂಧನೆಯನ್ನು ಜಾರಿಗೆ ತಂದ ಕೆರೆಗಳ ಸಂರಕ್ಷಣೆಗಾಗಿ ರೈತರು ನೀಡಬೇಕಾದ ವಂತಿಕೆಯ ಭಾಗವನ್ನು ಒತ್ತಾಯದಿಂದ ವಸೂಲಿ ಮಾಡಲು ಅವಕಾಶ

ಕಲ್ಪಿಸಲಾಯಿತು.[29] ದುರಸ್ತುಗೊಂಡ ಕೆರೆಗಳ ಏರಿಯನ್ನು ನೋಡಿಕೊಳ್ಳುವುದು ಗ್ರಾಮಸ್ಥರ ಜವಾಬ್ದಾರಿಯಾಯಿತು. ಸರ್ಕಾರ ಈ ರೀತಿ ಸಣ್ಣ ನೀರಾವರಿಯ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದ್ದು ಮಾದರಿಯಾಯಿತು. ರಾಜ್ಯದಲ್ಲಿ 1912 ರಲ್ಲಿ 8,54,000 ಎಕರೆಗಳು[30] ಒಟ್ಟು ನೀರಾವರಿ ಜಮೀನು 1928 ರ ವೇಳೆಗೆ 11,99,138 ಎಕರೆ[31] ಗಳಿಗೆ ಹೆಚ್ಚಿತು. ಇದರಿಂದ ಭಾರತೀಯ ಸಂಸ್ಥಾನ ನೀರಾವರಿ ಅಭಿವೃದ್ಧಿಯಲ್ಲಿ ಮೈಸೂರು ಸಂಸ್ಥಾನ ಪ್ರಥಮ ಸ್ಥಾನ ಪಡೆಯಿತು. ಇದರಲ್ಲಿ ವಿಶ್ವೇಶ್ವರಯ್ಯನವರ ಕೊಡುಗೆ ಮಹತ್ವ ಎಂದು ಹೇಳಬಹುದು. ದೊಡ್ಡ ಮತ್ತು ಸಣ್ಣ ಕೆರೆಗಳ ದುರಸ್ತಿ ನಿರ್ವಹಣೆಯ ಬಗ್ಗೆ ಹೆಚ್ಚು ಗಮನ ಹರಿಸಿದರು. ನೀರಾವರಿ ಸೌಲಭ್ಯ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿತು ಎಂದು ಹೇಳಬಹುದು. ಮೈಸೂರು ಪ್ರಾಂತ್ಯ ಅಂದರೆ ಮಂಡ್ಯ ಸೇರಿ ರೈತ ಸಮುದಾಯಕ್ಕೆ ವರಪ್ರಸಾದವಾಯಿತು. ಮಂಡ್ಯ ಕೆರೆಗಳಿಗೆ ಕಾವೇರಿಯಿಂದ ನೀರನ್ನ ಒದಗಿಸುವ ಇಲ್ಲಿಯ ಜನರಿಗೆ ನೀರಾವರಿ ಅನುಕೂಲವಾಗುವಂತೆ ಅನ್ನದಾತ ವಿಶ್ವೇಶ್ವರಯ್ಯನವರು ಕಾರ್ಯ ಕೈಗೊಂಡರು.

ಒಟ್ಟಾರೆಯಾಗಿ ಮೈಸೂರು ಸಂಸ್ಥಾನದಲ್ಲಿ ದಿವಾನರ ಆಡಳಿತ ಕಾಲದಲ್ಲಿ ಮುಖ್ಯವಾಗಿ ಪೂರ್ಣಯ್ಯನಿಂದ ಆರಂಭವಾಗಿ ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್‌ರವರೆಗೆ ನೀರಾವರಿ ಆದ್ಯತೆ ನೀಡಿದ್ದರು. ಅದರಲ್ಲಿ ಹೆಚ್ಚು ಕೆರೆ ನೀರಾವರಿಗೆ ಅದ್ಯತೆ ನೀಡಿದರೆಂದರೆ ಸರ್ ಎಂ. ವಿಶ್ವೇಶ್ವರಯ್ಯರವರು, ಇವರು ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಿಸಿದರು. ಅಲ್ಲದೆ ದೊಡ್ಡ ಮತ್ತು ಚಿಕ್ಕಕೆರೆಗಳ ನಿರ್ವಹಣೆ ದುರಸ್ತಿಗೆ ಅದ್ಯತೆ ನೀಡಿದ ಅಗತ್ಯ ಕ್ರಮ ಕೈಗೊಂಡರು. ಅವುಗಳಿಗೆ ಸಂಬಂಧಿಸಿದಂತೆ ನಿಯಮ, ಸಲಹೆಗಳನ್ನು ನೀಡಿದರು. ಅದರ ಕಾರ್ಯಗತಕ್ಕೆ ಅದ್ಯತೆ ನೀಡಿದರು. ಮೊದಲು ಮಂಡ್ಯ ಜಿಲ್ಲೆ ಮಳೆ ಆಶ್ರಿತವಾಗಿತ್ತು ಇದರಿಂದ ನೀರಾವರಿ ಪ್ರದೇಶವಾಗಿ ಪರಿವರ್ತನೆ ಹೊಂದಿತು. ನಾಲೆಗಳ ಮೂಲಕ ಅಗತ್ಯವಾದ ನೀರನ್ನು ಕೆರೆಗಳಿಗೆ ತುಂಬಿಸಲಾಗಿತ್ತು.

ಹೊಸ ಕೆರೆಗಳ ನಿರ್ಮಾಣ 1881-1955 :- ಆಡಳಿತ ರಾಜರಿಗೆ ಮರಳಿದ ನಂತರ ಹಾಲಿ ಇದ್ದ ಕೆರೆಗಳ ಜೀರ್ಣೋದ್ಧಾರಕ್ಕೆ ಪ್ರಧಾನ್ಯವಿತ್ತರು. ಸಾಧ್ಯವಿದ್ದ ಕಡೆಗಳಲ್ಲಿ ಹೊಸ ಕೆರೆಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಯಿತು. 20 ನೇ ಶತಮಾನದಲ್ಲಿ ಕೈಗೊಳ್ಳಲಾದ ಕೆರೆಗಳ ನಿರ್ಮಾಣದಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಎಣ್ಣೆ ಹೊಳೆ ಕೊಪ್ಪಲಿನಲ್ಲಿ ಎಣ್ಣೆ ಹೊಳೆ ಕೆರೆ ಕಟ್ಟಲಾಯಿತು. ಅದನ್ನು ಬಿಟ್ಟರೆ ಇಲ್ಲಿಯವರಗೆ ಯಾವುದೇ ಕೆರೆಗಳನ್ನು ನಿರ್ಮಾಣ

ಮಾಡಿದ ದಾಖಲೆಗಳು ಲಭ್ಯವಿಲ್ಲ. ಸಣ್ಣ ಕೆರೆಗಳನ್ನು ಮುಚ್ಚಿ ಅಲ್ಲಿ ಮನೆ ನಿರ್ಮಾಣ ಮಾಡುವ ಪರಿಸ್ಥಿತಿ ಈಗ ಬಂದಿದೆ. ಇಲ್ಲಿ ಕೆರೆಗಳು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ.

ಮೈಸೂರು ಗ್ಯಾಸೆಟಿಯರ್‌ನಲ್ಲಿ ಜಿಲ್ಲೆಯ ನೀರಾವರಿ ಬಗ್ಗೆ ತಿಳಿಸಲಾಗಿದೆ. ಅದರಲ್ಲಿ 191 ದೊಡ್ಡ ಕೆರೆಗಳು, 1274 ಸಣ್ಣ ಕೆರೆಗಳನ್ನು ನಮೂದಿಸಲಾಗಿದೆ. ಆ ಪಟ್ಟಿ ಕೆಳಗೆ ಇದೆ. [32]

ತಾಲ್ಲೂಕುಗಳುಕೆರೆಗಳ ಸಂಖ್ಯೆ:

	ದೊಡ್ಡ ಕೆರೆಗಳು			ಸಣ್ಣ ಕೆರೆಗಳು		
	ಸಂಖ್ಯೆ	ನೀರಾವರಿ ವಿಸ್ತಾರ ಎ	ನೀರಾವರಿ ವಿಸ್ತಾರ ಗುಂ	ಸಂಖ್ಯೆ	ನೀರಾವರಿ ವಿಸ್ತಾರ ಎ	ನೀರಾವರಿ ವಿಸ್ತಾರ ಗುಂ
ಶ್ರೀರಂಗಪಟ್ಟಣ	6	1331	31	30	275	17
ನಾಗಮಂಗಲ	23	3853	19	64	1615	27
ಕೆ.ಆರ್.ಪೇಟೆ	13	2857	9	147	2967	10
ಮಂಡ್ಯ	50	32175	8	133	11413	0
ಮಳವಳ್ಳಿ	9	3504	6	53	1533	1
ಒಟ್ಟು	101	43780	73	427	17803	55

ಅದೇ ರೀತಿ ಜಿಲ್ಲೆಯಲ್ಲಿ ದೊಡ್ಡ ಕೆರೆಗಳು, ಸಣ್ಣ ಕೆರೆಗಳು ಅದಲ್ಲಿ ಎಷ್ಟು ಕೆರೆಗೆ ನೀರು ತುಂಬಲಾಗಿತ್ತು. ಎಷ್ಟು ಕೆರೆಗೆ ನೀರನ್ನು ತುಂಬಲಾಗದು ಎಂಬ ಬಗ್ಗೆ ತಿಳಿಸಿದೆ.

ತಾಲ್ಲೂಕುಗಳು	ದೊಡ್ಡ ಕೆರೆ			ಸಣ್ಣ ಕೆರೆ		
	ಪುನಃಶ್ಚೇತನ ಹೊಂದಿದ	ಪುನಃಶ್ಚೇತನ ಹೊಂದಿಲ್ಲದ	ಒಟ್ಟು	ಪುನಃಶ್ಚೇತನ ಹೊಂದಿದ	ಪುನಃಶ್ಚೇತನ ಹೊಂದಿಲ್ಲದ	ಒಟ್ಟು
ಶ್ರೀರಂಗಪಟ್ಟಣ	5	1	6	12	18	30
ನಾಗಮಂಗಲ	23	0	23	21	43	64
ಕೆ.ಆರ್.ಪೇಟೆ	2	11	13	35	112	147
ಮಂಡ್ಯ	40	10	50	44	89	133
ಮಳವಳ್ಳಿ	9		9	42	11	53

ಮಂಡ್ಯ ಜಿಲ್ಲೆಯಲ್ಲಿ ದೊಡ್ಡ ಕೆರೆಗಳಲ್ಲಿ ಉಪಯೋಗಕ್ಕೆ ಬರುತ್ತಿದ್ದವು 79, ಬರದೆ ಇದ್ದದ್ದು 22 ಕೆರೆ ಇದ್ದವು ಅದೇ ರೀತಿ ಸಣ್ಣ ಕೆರೆಗಳು ಉಪಯೋಗಕ್ಕೆ ಬರುತ್ತಿದ್ದವು 153, 273 ಉಪಯೋಗಕ್ಕೆ ಬರದೆ ಇದ್ದವು ಕೆರೆಗಳು ಆಗ ಇದ್ದವು [33]

ಮಂಡ್ಯ ಜಿಲ್ಲೆಯಲ್ಲಿ ಕೆರೆಗಳಲ್ಲಿ 5000 ಕ್ಕಿ ಹೆಚ್ಚು ಆದಾಯ ತರುತ್ತಿದ್ದ ಕೆರೆಗಳೆಂದರೆ ಅದನ್ನು ಈ ಕೆಳಗಿನಂತೆ ನೋಡೋಣ [34]

ತಾಲ್ಲೂಕು	ಸ್ಥಳ	ವಿಸ್ತೀರ್ಣ	
		ಎ	ಗುಂ
ಮಳವಳ್ಳಿ	ದೊಡ್ಡರಸಿನಕೆರೆ ಸೂಳೆಕೆರೆ	1365	20
ಮಂಡ್ಯ	ಮದ್ದೂರು ಕೆರೆ	1062	10

ಅವರು ಮೈಸೂರು ಸಂಸ್ಥಾನದಲ್ಲಿ ಸರ್ಕಾರಕ್ಕೆ 5000 ರೂ. ಹೆಚ್ಚು ಆದಾಯ ತರುತ್ತಿದ್ದ ಎರಡು ಕೆರೆಗಳು ಮಂಡ್ಯ ಜಿಲ್ಲೆಯಲ್ಲಿವೆ. ಅಂದಿನ ಸರ್ಕಾರ್ಕೆ ಕೆರೆಗಳಿಂದಲೂ ಆದಾಯ ಬರುತ್ತಿತ್ತು ಎಂದು ಹೇಳಬಹುದು. ಆಗ ಮೈಸೂರು ಪ್ರಾಂತ್ಯಕ್ಕೆ ಮಂಡ್ಯವು ಸೇರಿದರಿಂದ ಆಗ ಮಂಡ್ಯ ಎಂಬ ವಿಭಾಗ ಅಥವಾ ಜಿಲ್ಲೆ ಇರಲಿಲ್ಲ. ಆಗ ಒಟ್ಟಾರೆ ಮಂಡ್ಯ ಜಿಲ್ಲೆಯ ಕೆರೆಗಳು ಮೈಸೂರು ವ್ಯಾಪ್ತಿಗೆ ಸೇರಿಕೊಂಡಿದೆ. ಹೀಗಾಗಿ ಕಂದಾಯ ತರುವಂಥ ಮೈಸೂರು ವಿಭಾಗ ಮಂಡ್ಯದಲ್ಲಿ ಸೂಳೆಕೆರೆ ಮತ್ತು ಮದ್ದೂರು ಕೆರೆ ಎಂದು ಹೇಳಬಹುದು ಮಂಡ್ಯ ಜಿಲ್ಲೆಯ ಕೆರೆಗಳು ನೀರಾವರಿಗೆ ಪ್ರಾಮುಖ್ಯತೆ ಜೊತೆಗೆ ಸರ್ಕಾರಕ್ಕೆ ಕಂದಾಯ ದೊರೆಕಿಸಿಕೊಡುವ ಕೆರೆಗಳಾಗಿದ್ದವು.

4.4 ಪ್ರಸ್ತುತ ನೀರಾವರಿ ಚೌಕಟ್ಟು :

ಮಂಡ್ಯ ಎಂಬ ಜಿಲ್ಲೆ ಮೊದಲು ಮೈಸೂರಿನ ಪ್ರಾಂತ್ಯದಲ್ಲಿ ಸೇರಿತು. 1939 ಜುಲೈ 1 ರಿಂದ ಮಂಡ್ಯ ಜಿಲ್ಲೆ ಎಂದು ವಿಭಾಗಿಸಲಾಯಿತು. ಮಂಡ್ಯ ಜಿಲ್ಲೆಯಲ್ಲಿ 7 ತಾಲ್ಲೂಕನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ ತುಂಬಿ ಹರಿಯುವ ನದಿಗಳನ್ನು ನೋಡಬಹುದು ಅಂತಹ ನದಿಗಳೆಂದರೆ, ಕಾವೇರಿ, ಲೋಕಪಾವನಿ, ವೀರವೈಷ್ಣವಿ, ಶಿಂಪಾ ನದಿ ಮತ್ತು ಹೇಮಾವತಿ ನದಿಗಳು ಜಿಲ್ಲೆಯಲ್ಲಿ ಹರಿಯುತ್ತವೆ. ಅದರಿಂದ ಮಂಡ್ಯ ಜಿಲ್ಲೆಯನ್ನು ಪಂಚನದಿಗಳ ಜಿಲ್ಲೆ ಎಂದು ಕರೆಯಲಾಗಿದೆ. ಈ ನದಿಗಳಿಗಿಂತ ಜಿಲ್ಲೆಯದ್ಯಂತ ಹಿಂದಿನಿಂದಲೂ ಕೆರೆಗಳು ಹೆಚ್ಚು ಪ್ರಾಮುಖ್ಯತೆ ಪಡೆದಿದ್ದವು. ಅವುಗಳು ಜಿಲ್ಲೆಯ ನೀರಾವರಿ ಮೂಲವಾದವು. ಇಂದಿಗೂ ಸಹ ಕೆರೆಗಳು ನೀರಾವರಿಯ ಮೂಲವಾಗಿದ್ದು, ಅದು ದನಕರುಗಳ ಕುಡಿಯುವ ನೀರಿನ ಮೂಲವು ಆಗಿವೆ.

ಮಂಡ್ಯ ಜಿಲ್ಲೆಯ ನದಿಗಳಿಗೆ ಅಣೆಕಟ್ಟು ಕಟ್ಟಿಸಿ ಕಾಲುವೆಗಳ ಮೂಲಕ ಕೃಷಿಗೆ ನೀರನ್ನ ಬಳಸಲಾಗುತ್ತಿದೆ. ಹೇಮಾವತಿ ನದಿಗೆ ಕೆ.ಆರ್.ಪೇಟೆ ತಾಲ್ಲೂಕಿನ ಅಕ್ಕಿ ಹೆಬ್ಬಾಳು ಹೋಬಳಿಯ

ಮಂದಗೆರೆ ಬಳಿ ಅಣೆಕಟ್ಟನ್ನು ನಿರ್ಮಿಸಿ, ಬಲದಂಡೆ ನಾಲೆ 37 ಮೈಲಿ, ಎಡದಂತೆ ನಾಲೆ 21 ಮೈಲಿ ಉದ್ದವಿದೆ. ಇದೆ ಹೋಬಳಿಯ ಬಂಡಿ ಹೊಳೆಯ ಬಳಿ ಹೇಮಾವತಿ ನದಿಗೆ ಅಡ್ಡಲಾಗಿ 1360 ಅಡಿ ಉದ್ದದ ಅಣೆಕಟ್ಟನ್ನು ನಿರ್ಮಿಸಲಾಗಿದ್ದು, ಇದರ ಎಡದಂಡೆ 2 ಮೈಲಿ ಉದ್ದವಿದೆ.

ಮೇಲುಕೋಟೆ ಹೋಬಳಿ, ಬೋಳೇನಹಳ್ಳಿ ಬಳಿ ಲೋಕಪಾವನಿ ನದಿಗೆ ಅಡ್ಡಲಾಗಿ 825 ಅಡಿ ಉದ್ದದ ಅಣೆಕಟ್ಟನ್ನು ಕಟ್ಟಲಾಗಿದೆ. ಇದರಿಂದ ಮಾದರಹಳ್ಳಿ ಕೆರೆ ನೀರನ್ನು ಒದಗಿಸಲಾಗುತ್ತಿದೆ. ನಾಗಮಂಗಲ ತಾಲ್ಲೂಕಿನ ಉಯ್ಯನಹಳ್ಳಿ ಬಳಿ ಲೋಕಪಾವನಿ ನದಿಗೆ ಅಡ್ಡಲಾಗಿ ನಿರ್ಮಿತವಾಗಿರುವ ಉಯ್ಯನಹಳ್ಳಿ ಅಣೆಕಟ್ಟೆಯ ಉದ್ದ 370 ಅಡಿಗಳಾಗಿದೆ. ಇದು ಮೂರು ಮೈಲಿ ಉದ್ದದ ಕಾಲುವೆಯನ್ನು ಹೊಂದಿದೆ. ಶಿಂಷಾನದಿಗೆ ಮದ್ದೂರು ತಾಲ್ಲೂಕಿನ ತಗ್ಗಹಳ್ಳಿಯ ಬಳಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಇದರ ಎಡದಂಡೆ ನಾಲೆ 23 ಮೈಲಿ ಮತ್ತು ಬಲದಂಡೆ ನಾಲೆ 12 ಮೈಲಿಗಳ ಉದ್ದವಿದೆ.

ನಾಗಮಂಗಲ ತಾಲ್ಲೂಕಿನ ದುಮ್ಮಸಂದ್ರ, ಬಳಿ ವೀರವೈಷ್ಣವಿ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ 400 ಅಡಿ ಉದ್ದದ ಅಣೆಕಟ್ಟ ನಾಲ್ಕು ಮೈಲಿ ಉದ್ದದ ನಾಲೆಯನ್ನು ಹೊಂದಿದೆ.[35]

ಒಟ್ಟಾರೆ ಅವುಗಳ ಮೂಲಕ ಕೃಷಿ ನೀರಾವರಿಗೆ ನೀರನ್ನು ಕಾಲುವೆಗಳ ಮೂಲಕ ಬಳಸಿಕೊಂಡು ಕೃಷಿ ಅಭಿವೃದ್ಧಿಯನ್ನು ಮಾಡಲಾಗಿದೆ. 1997-98 ರಲ್ಲಿ ಕೆರೆಗಳಿಂದ ನೀರಾವರಿ ಪ್ರದೇಶ ಹೆಕ್ಟೇರ್‌ಗಳಲ್ಲಿ ಕೃಷ್ಣರಾಜಪೇಟೆ, 4200 ಹೆಕ್ಟೇರ್‌ಗಳು, ಮದ್ದೂರು 681, ಮಳವಳ್ಳಿ 1547, ಮಂಡ್ಯ 282, ನಾಗಮಂಗಲ 2500 ಪಾಂಡವಪುರ 300, ಶ್ರೀರಂಗಪಟ್ಟಣ 85 ಹೀಗೆ ಕೆರೆಗಳ ಮೂಲಕ ನೀರಾವರಿಗೆ ಒಳಪಟ್ಟ ನೀರಾವರಿ ಭೂಮಿಯಾಗಿದೆ.

ಮಂಡ್ಯ ಜಿಲ್ಲೆಯು ಕೆ.ಆರ್.ಎಸ್. ನಿರ್ಮಾಣಕ್ಕೆ ಮೊದಲು ಮಳೆ ಆಶ್ರಿತ ಕೆರೆಗಳಿದ್ದು, ಮಳೆಯ ನೀರಿನಿಂದ ಕೆರೆಯು ತುಂಬಿದ ನಂತರ ಕೃಷಿ ಚಟುವಟಿಕೆ ಮಾಡಲಾಗುತ್ತಿತ್ತು. ಒಂದು ವೇಳೆ ಮಳೆ ಬರದಿದ್ದರೆ ಕೆರೆಗಳಲ್ಲಿ ನೀರು ಇರುವುದಿಲ್ಲ. ಆದರಿಂದ ಯಾವುದೇ ಕೃಷಿ ಚಟುವಟಿಕೆ ಜಿಲ್ಲೆಯಲ್ಲಿ ನಡೆಯುವುದಿಲ್ಲವೆಂದು ಹೇಳಬಹುದು. ಇಂದಿಗೆ ಮಂಡ್ಯ ಜಿಲ್ಲೆಯು ಭೌಗೋಳಿಕ ವಿಸ್ತೀರ್ಣದ ಶೇ. 22.2 ಹಾಗೂ ರಾಜ್ಯದ ಒಟ್ಟು ನೀರಾವರಿಯಲ್ಲಿ ಶೇ. 4.76 ಆಗಿದೆ. ಜಿಲ್ಲೆಯ ಕೆ.ಆರ್.ಪೇಟೆ ಅತಿ ಹೆಚ್ಚು ನೀರಾವರಿ ಪ್ರದೇಶ. ನಾಗಮಂಗಲ ಅತಿ ಕಡಿಮೆ ನೀರಾವರಿ

ಪ್ರದೇಶವನ್ನು ಒಳಗೊಂಡಿದೆ. ಮಂಡ್ಯ ಜಿಲ್ಲೆ ಹಿಂದಿನಂತೆ ಕೆರೆಗಳ ಮೂಲಕ ನೀರಾವರಿ ಮಾಡಲಾಗಿದೆ. ಅದನ್ನೇ ಆಶ್ರಯಿಸಿದೆ ಎನ್ನಬಹುದು. ಕೆರೆಗಳ ಜಿಲ್ಲೆಯ ಜೀವಾಳ ಎನ್ನಬಹುದು. ಆಧುನಿಕ ಸರ್ಕಾರಗಳು ಸಹ ಕೆರೆಗಳ ಜೀರ್ಣೋದ್ಧಾರಕ್ಕೆ ಯಶಸ್ವಿಗೆ ಅಗತ್ಯ ಕ್ರಮಗಳನ್ನು ತನ್ನ ವರದಿಯಲ್ಲಿ ಅಂದರೆ ಬಜೆಟ್‌ನಲ್ಲಿ ಹೇಳುತ್ತಿದೆ. ಅದರಂತೆ ನೀರಾವರಿಗೆ ಆದ್ಯತೆಯನ್ನು ನೀಡಲಾಗಿದೆ. ಕೆರೆಗಳು ಜೀರ್ಣೋದ್ಧಾರಕ್ಕೆ ಆದ್ಯತೆ ನೀಡುತ್ತಾ ಬರುತ್ತಿದೆ.

ಆಧುನಿಕ ಘಟ್ಟಕ್ಕೆ ಸೇರಿದಂತೆ ಕೆರೆಗಳನ್ನು ನೋಡಬಹುದು. 1999 ರ ಈಚೆಗೆ ಎಸ್.ಎಂ. ಕೃಷ್ಣ ಸರ್ಕಾರ ಕಾವೇರಿ ನೀರಾವರಿ ನಿಗಮವನ್ನು ಸ್ಥಾಪಿಸಿದರು. ಅದು ಮಂಡ್ಯ ಜಲಾನಯನ ಪ್ರದೇಶದ ಉಸ್ತುವಾರಿ ಅದಕ್ಕೆ ಕೊಡಲಾಯಿತು. ಮಂಡ್ಯ ಜಿಲ್ಲೆಯ ಕಾವೇರಿ, ಹೇಮಾವತಿ ನೀರಿನ ವಿಭಾಗಗಳನ್ನು ಕಾವೇರಿ ನೀರಾವರಿ ನಿಗಮ ಸ್ಥಾಪಿಸಿತು. ಅವುಗಳು ಈ ನಿಗಮದ ವ್ಯಾಪ್ತಿಗೆ ಒಳಪಟ್ಟಿತು. ನಂತರ ಜಿಲ್ಲೆಯ ಕೆರೆಗಳು ಈ ನಿಗಮದ ವ್ಯಾಪ್ತಿಗೂ ಸೇರಿಕೊಂಡವು. ಅಂತಹ ಕೆರೆಗಳು ದೊಡ್ಡ ಕೆರೆಗಳು ಈ ನಿಗಮದ ಅದೀನಕ್ಕೆ ಒಳಪಟ್ಟಿತು. ಜಿಲ್ಲೆಯ ಸಣ್ಣ ಕೆರೆಗಳು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಸೇರಿಸಲಾಯಿತು. ಅದರ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯಿತಿಗೆ ಸೇರಿಸಲಾಯಿತು. ಇದಕ್ಕೂ ಮೊದಲು ಇಂತಹ ವ್ಯವಸ್ಥೆ ಇರುವುದಿಲ್ಲವೆಂದು ಹೇಳಬಹುದು. ಹಿಂದೆ ಕೆರೆಗಳ ನಿರ್ವಹಣೆ ಅದರ ದುರಸ್ತಿ ಸರ್ಕಾರದೆ. ತನ್ನ ಅದೀನ ಸಂಸ್ಥೆಗಳಿಂದ ನೋಡಿಕೊಳ್ಳಲಾಗುತ್ತಿತ್ತು. ಸಾಮಾನ್ಯವಾಗಿ ಅದರ ಜವಾಬ್ದಾರಿಯನ್ನು ಲೋಕೋಪಯೋಗಿ ಇಲಾಖೆಗೆ ನಿರ್ವಹಿಸುತ್ತಿದ್ದವು.

1956 ರ ಈಚೆಗೆ ಬಾರಿ ಪ್ರಮಾಣದ ನೀರಾವರಿ ಯೋಜನೆಗಳು ಕೈಗೊಂಡು ಅವುಗಳನ್ನು ಜಾರಿಗೆ ತಂದರು. ಅಂತಹ ಬಾರಿ ನೀರಾವರಿ ಯೋಜನೆಗೆ ಪ್ರಾಶಸ್ತ್ಯ ನೀಡಿದರು. ಸಣ್ಣ ಜಲಾಶಯವನ್ನು ಕೆರೆಗಳ ಪರಿಶೀಲನೆ ನಿರ್ಮಾಣಗಳನ್ನು ಪೂರ್ಣ ಅಸಡ್ಡೆ ಮಾಡಿಲ್ಲ. ಸಣ್ಣ ನೀರಾವರಿ ಕಾಮಗಾರಿಗಳ ಪರಿಶೀಲನೆಗಾಗಿ 1958 ರಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿತ್ತು. ಸಣ್ಣ ನೀರಾವರಿ ಕೆರೆಗಳ ನಿರ್ಮಾಣಕ್ಕಾಗಿ ಪ್ರತ್ಯೇಕ ಸಂಘಟನೆ ರಚಿತವಾದವು. 1984 ರಲ್ಲಿಯ ಇತ್ತೀಚೀನವರೆಗೂ ನೀರಾವರಿ ಕೆಲಸಕ್ಕಾಗಿ ಸಣ್ಣ ಮತ್ತು ದೊಡ್ಡ ವರ್ಗೀಕರಣ ಮಾಡುವುದು ಆ ಕೆಲಸದ ಅಂದಾಜು ವೆಚ್ಚವನ್ನು ಆಧರಿಸಿತು. 25 ಲಕ್ಷಗಳಿಗಿಂತ ಕಡಿಮೆ ವೆಚ್ಚದ ಕೆಲಸಗಳನ್ನು ಸಣ್ಣ ನೀರಾವರಿ ಕೆಲಸವೆಂದು ಪರಿಗಣಿಸಲಾಗಿತ್ತು. ಹೀಗೆ 5000 ಎಕರೆ ಅಥವಾ ಕಡಿಮೆ ಅಚ್ಚುಕಟ್ಟು

ಪ್ರದೇಶವುಳ್ಳ ಕಾಮಗಾರಿಗಳನ್ನು ಸಣ್ಣ ಕಾಮಗಾರಿಗಳು ಎಂದು ಪರಿಗಣಿಸಲಾಗುತ್ತದೆ.50000 ಎಕರೆಗಿಂತ ಜಾಸ್ತಿ ಇರುವುದನ್ನು ಮಧ್ಯಮ ಮತ್ತು ಭಾರಿ ನೀರಾವರಿ ಕಾಮಗಾರಿಗಳು ಎಂದು ಪರಿಗಣಿಸಲಾಗುತ್ತಿದೆ. [36]

ಮಂಡ್ಯ ಜಿಲ್ಲೆಯಲ್ಲಿ ಆಧುನಿಕ ಘಟ್ಟದಲ್ಲಿ ದೊಡ್ಡ ನೀರಾವರಿ ಯೋಜನೆಗಳು ಇದ್ದರು ಸಹ ಕೆರೆ ನೀರಾವರಿ ಬಗ್ಗೆ ಮಾತ್ರ ಅಧ್ಯಯನ ಸೀಮಿತವಾಗಿದೆ. ಕೇವಲ ಜಿಲ್ಲೆಯಲ್ಲಿ ಇರುವ ಕೆರೆಗಳಿಗೆ ಅವು ಎಲ್ಲಿ ಇವೆ. ಜಿಲ್ಲೆಯ ದಾಖಲಾತಿ ಪ್ರಕಾರ ಎಷ್ಟು ದೊಡ್ಡ ಕೆರೆಗಳು ಮತ್ತು ಸಣ್ಣ ಕೆರೆಗಳು ಇವೆ ಇವುಗಳ ಉಸ್ತುವಾರಿ ಯಾವ ಇಲಾಖೆ ಹೊಂದಿದೆ. ಅವುಗಳು ಅಂದರೆ ಕೆರೆಗಳಿಗೆ ನೀರಿನ ಮೂಲ ಯಾವುದು, ಅವುಗಳ ನೀರನ್ನು ಯಾವುದರ ಮೂಲಕ ತುಂಬಿಸಲಾಗಿದೆ. ಎಂಬುದನ್ನು ಆಧುನಿಕ ಕಾಲ ಘಟ್ಟದಲ್ಲಿ ನೋಡಬಹುದು. ಇಲ್ಲಿ ಮುಖ್ಯವಾಗಿ ಕೆರೆಗಳು ಎಷ್ಟು ಹೆಕ್ಟೆರ್ ಹೊಂದಿದೆ (ಒಳಾಂಗಣ) ಅದು ಎಷ್ಟು ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸುತ್ತದೆ ಎಂಬುದನ್ನು ಇಲ್ಲಿ ವಿವರಿಸಲಾಗುತ್ತದೆ. ಚಾಲ್ತಿಯಲ್ಲಿ ಬಾರಿ ಜಲಾಶಯಗಳು ಇದ್ದರೂ ಕೆರೆಗಳು ಹಿಂದಿನಿಂದಲೂ ಬಹು ಪ್ರಾಮುಖ್ಯತೆ ಪಡೆದ ಜಿಲ್ಲೆಯ ಜೀವನಾಡಿಯಾಗಿವೆ ಎನ್ನಬಹುದು. ಕೆರೆಗಳು ಕೇವಲ ನೀರಾವರಿಗೆ ಮೂಲಕ್ಕೆ ಮಾತ್ರವಲ್ಲದೆ ಕೆರೆಗಳಿಂದ ಮೀನುಗಾರಿಕೆ ಇಲಾಖೆಯ ಸಹಯೋಗದೊಂದಿಗೆ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಸಹ ಮಾಡಲಾಗುತ್ತಿದೆ. ಹೀಗಾಗಿ ಕೆರೆಗಳು ಕೇವಲ ಕೃಷಿಗೆ ಮಾತ್ರ ಸೀಮಿತವಾಗಿರದೆ ಮೀನುಗಾರಿಕೆಗೂ ಸಹಕಾರಿಯಾಗಿದೆ. ಅಲ್ಲದೆ ಕೆಲವೊಂದು ಕೆರೆಗಳಲ್ಲಿ ದೋಣಿ ವಿಹಾರಕ್ಕೂ ಅವಕಾಶ ಕಲ್ಪಿಸಲಾಗಿದೆ. ಇದು ಸರ್ಕಾರಕ್ಕೆ ಆದಾಯ ತರುವ ಮೂಲವಾಗಿದೆ.

ಜಿಲ್ಲೆಯಲ್ಲಿ ಎರಡು ರೀತಿಯ ಕೆರೆಗಳನ್ನು ನೋಡಬಹುದು. ಅವುಗಳೆಂದರೆ, ಕಾವೇರಿ ನೀರಾವರಿ ನಿಗಮಕ್ಕೆ ಒಳಪಟ್ಟು ಮಧ್ಯಮ ಸಣ್ಣ ಕೆರೆಗಳು ಹಾಗಿಯೇ ಜಿಲ್ಲಾ ವ್ಯಾಪ್ತಿಗೆ ಅಂದರೆ ಜಿಲ್ಲಾ ಪಂಚಾಯತ್ ವಿಭಾಗಕ್ಕೆ ಸೇರಿರುವ ಸಣ್ಣ ಕೆರೆಗಳು ಎರಡು ವಿಭಾಗದ ಕೆರೆಗಳು. ಈ ಕೆರೆಗಳು ನೀರಾವರಿ ಕುಡಿಯುವ ನೀರನ್ನು ಒದಗಿಸುವ ಮೂಲಗಳಾಗಿದೆ. ಇತ್ತೀಚೆಗೆ ಕಾವೇರಿ ನೀರಾವರಿ ನಿಗಮ ತನ್ನ ವ್ಯಾಪ್ತಿಗೆ ಬರುವ ಕೆರೆಗಳು ದುರಸ್ತಿಗೆ ಅಗತ್ಯ ಕ್ರಮಕೈಗೊಂಡಿದೆ. ಯೋಜನೆಯನ್ನು ರೂಪಿಸಿಕೊಂಡು ಅಗತ್ಯವಾದ ಹಣಕಾಸಿನ ನೆರವಿನಿಂದ ಅವುಗಳ ದುರಸ್ತಿ ಮತ್ತು ಜೀರ್ಣೋದ್ಧಾರ

ಮಾಡುವ ಕಾರ್ಯಕ್ಕೆ ಮುಂದಾಗಿದೆ. ಒಟ್ಟಾರೆಯಾಗಿ ಮಂಡ್ಯ ಜಿಲ್ಲೆಯಲ್ಲಿ ಮಾಧ್ಯಮ ಮತ್ತು ಸಣ್ಣ ಕೆರೆಗಳ ಸಂಖ್ಯೆ ಕಾವೇರಿ ನೀರಾವರಿ ನಿಗಮ ಎಲ್ಲಾ ವಿಭಾಗಗಳು ಕೊಟ್ಟಿರುವ ದಾಖಲಾತಿ ಪ್ರಕಾರ 524 ದೊಡ್ಡ ಕೆರೆಗಳು ಇವೆ. ಹಾಗೆಯೇ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ 204 ಕೆರೆಗಳು ಜಿಲ್ಲೆಯ ಸಣ್ಣ ನೀರಾವರಿ ಕೆರೆಗಳ ಮಾಹಿತಿ ಪುಸ್ತಕದಲ್ಲಿ ದೊರಕಿದೆ. ಈ ರೀತಿಯ ಮಧ್ಯಮ ಸಣ್ಣ ಕೆರೆಗಳು ಮತ್ತು ಸಣ್ಣ ಕೆರೆಗಳನ್ನು ನೋಡಬಹುದು. ಇವುಗಳಿಂದ ನೀರಾವರಿಗೆ ಅವಶ್ಯಕವಾದ ನೀರನ್ನು ಈ ಕೆರೆಗಳಿಂದ ಪಡೆಯಲಾಗುತ್ತಿದೆ. ಕೆರೆಗಳು ಪ್ರತಿಯೊಂದು ಹಳ್ಳಿಯ ಆಧಾರ ಎಂದೂ ಹೇಳಬಹುದು. ಕಾರಣ ಕೆರೆಗಳು ಇಲ್ಲದೆ ಗ್ರಾಮಗಳಿಗೆ ನೀರಿನ ಸೌಲಭ್ಯಗಳು ವಂಚಿತವಾಗುತ್ತವೆ. ಕೆರೆ ಇಲ್ಲವಾದರೆ ಆ ಪ್ರದೇಶ ಒಣ ಭೂಮಿಯಾಗಿರುತ್ತದೆ.

ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಒಳಪಟ್ಟಿರುವ ಕೆರೆಗಳ ಸಂಖ್ಯೆ ಅಚ್ಚುಕಟ್ಟು ಪ್ರದೇಶ ಮತ್ತು ಕೆರೆಯ ಒಳಾಂಗಣ ಹೆಕ್ಟೇರ್‌ಗಳಲ್ಲಿ [37]

ಕೆರೆಗಳ ಸಂಖ್ಯೆ	ಕೆರೆಗಳ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಕೆರೆಗಳ ಅಚ್ಚುಕಟ್ಟು ಪ್ರದೇಶ (ಹೆಕ್ಟೇರ್‌ಗಳಲ್ಲಿ)
524	11257.86	41991.409

ಮೇಲೆ ಹೇಳಿದ ಕೆರೆಗಳ ಮೂಲಕ ಕೆರೆಯ ನೀರನ್ನು ಕೃಷಿ ಚಟುವಟಿಕೆಗೆ ಬಳಸಿಕೊಳ್ಳಲಾಗಿದೆ.

ಹಾಗೆಯೇ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವ ಒಟ್ಟು ಕೆರೆಗಳ ಸಂಖ್ಯೆ ಅವುಗಳ ಒಳಾಂಗಣ ಪ್ರದೇಶ ಅಚ್ಚುಕಟ್ಟು ಪ್ರದೇಶ ಕೆಳಗಿನಂತೆ ಇದೆ.

ಕೆರೆಗಳ ಸಂಖ್ಯೆ	ಕೆರೆಗಳ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಕೆರೆಗಳ ಅಚ್ಚುಕಟ್ಟು ಪ್ರದೇಶ (ಹೆಕ್ಟೇರ್‌ಗಳಲ್ಲಿ)
204	1306.21	2839.72

ಹೀಗೆ ಸಣ್ಣ ನೀರಾವರಿ ಕೆರೆಗಳು ಇದು ಇಷ್ಟು ನೀರನ್ನು ಕೃಷಿ ಚಟುವಟಿಕೆಗಳಿಗೆ ಬಳಸಿಕೊಂಡಿದ್ದಾರೆ. ಒಟ್ಟಾರೆ ದೊಡ್ಡ ಕೆರೆಗಳು, ಸಣ್ಣ ಕೆರೆಗಳು ಇದ್ದು ಅವುಗಳ ನೀರಾವರಿ ಮೂಲ ಕಾವೇರಿ ನೀರು, ಶಿಂಷಾ ನದಿಯ ನೀರು, ಲೋಕಪಾವನಿ ನೀರನ್ನು ಬಳಸಿಕೊಳ್ಳಲಾಗಿದೆ. ಅಗತ್ಯವಾದ ನೀರನ್ನು ಕಾಲುವೆಗಳ ಮೂಲಕ ಕೆರೆಗಳಿಗೆ ತುಂಬಿಸಿ ಅದನ್ನು ನಿರಂತರ ಕೃಷಿ ಚಟುವಟಿಕೆಗೆ

ಬಳಸಿಕೊಳ್ಳಲಾಗಿದೆ. ಏನೇ ಆದರೂ ಬಹಳ ಹಿಂದಿನಿಂದಲೂ ಅಂದರೆ ದೊಡ್ಡ ಜಲಾಶಯದ ನಿರ್ಮಾಣಕ್ಕೆ ಮೊದಲು ಕೆರೆಗಳು ಮಳೆ ನೀರನ್ನು ಬಳಸಿಕೊಂಡು ಅಂದರೆ ಮಳೆ ನೀರನ್ನು ಸಂಗ್ರಹಿಸಿ ಅದರಿಂದ ನೀರಾವರಿಯನ್ನು ಕೈಗೊಳ್ಳಲಾಯಿತು. ಅಂದರೆ ಆಗ ಮನುಷ್ಯ ಮಳೆಯೊಂದಿಗೆ ಜೂಜಾಟ ಆಡುತ್ತಿದ್ದ ಎಂದು ಹೇಳಬಹುದು. ಮಳೆ ಇಲ್ಲದೆ ಬೆಳೆಯನ್ನು ಬೆಳೆಯಲು, ಕುಡಿಯುವ ನೀರು ಸಿಗುವುದು ಕಷ್ಟವಾಗಿತು ಎನ್ನಬಹುದು ಆದರೂ ಹಿಂದೆ ನದಿಗಳಿಗೆ ಕಟ್ಟೆ ಕಾಲುಗಳ ಮೂಲಕ ನೀರನ್ನು ಕೃಷಿ ಚಟುವಟಿಕೆಗಳಿಗೆ ಬೆಳೆಸಿಕೊಳ್ಳುತ್ತಿದ್ದರೂ ಒಟ್ಟಾರೆಯಾಗಿ ಮಂಡ್ಯ ಜಿಲ್ಲೆಯಲ್ಲಿ ಕೆರೆಗಳು ನೀರನ್ನು ನಿರಂತರ ಒದಗಿಸುವ ಕಾರ್ಯಕ್ಕೆ ಜಿಲ್ಲಾ ಡಳಿತ ಮುಂದಾಗಿದೆ.

ಈ ಅಧ್ಯಯನವನ್ನು ತಾಲ್ಲೂಕುವಾರು ಎಂದು ಕೆರೆಗಳ ಸಾಂದ್ರತೆಯನ್ನು ಅಧ್ಯಯನ ಮಾಡಲಾಗಿದೆ. ಅವುಗಳಿಂದ ತಾಲ್ಲೂಕುವಾರು ಎಷ್ಟು ಕೆರೆಗಳು, ಅದರ ವಿಸ್ತೀರ್ಣ, ಅಚ್ಚುಕಟ್ಟು ಪ್ರದೇಶ ಇತ್ಯಾದಿಗಳನ್ನು ಸೂಕ್ಷ್ಮವಾಗಿ ತಿಳಿಯಬಹುದು. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನ ಕೆರೆಗಳ ಸಂಖ್ಯೆ ಅದರ ಊರು ಇತ್ಯಾದಿಗಳನ್ನು ಇಲ್ಲಿ ನಮೂದಿಸಲಾಗಿದೆ. ಆದ್ದರಿಂದ ತಾಲ್ಲೂಕಿನ ಕೆರೆಗಳ ನೀರಾವರಿ ಮೂಲ ಇತ್ಯಾದಿಗಳನ್ನು ತಿಳಿಯಲು ಸಹಾಯಕವಾಗಿದೆ.

ಮಂಡ್ಯ ತಾಲ್ಲೂಕು ಐದು ಹೋಬಳಿಗಳನ್ನು ಹೊಂದಿದ್ದು, ಈ ಹೋಬಳಿಗಳಲ್ಲಿರುವ ಕೆರೆಗಳು ಕಾವೇರಿ ನೀರಾವರಿ ನಿಗಮಕ್ಕೆ ಒಳಪಟ್ಟವೆ. ಜಿಲ್ಲಾ ಪಂಚಾಯಿತಿ ವಿಭಾಗಕ್ಕೆ ಒಳಪಟ್ಟ ಕೆರೆಗಳನ್ನು ವಿಂಗಡಿಸಿ ಪ್ರತ್ಯೇಕವಾಗಿ ಪಟ್ಟಿ ಮಾಡಲಾಗಿದೆ. ಅವುಗಳಿಗೆ ಸಂಬಂಧಪಟ್ಟಂತೆ ವಿವಿಧ ಇಲಾಖೆಗಳಿಂದ ಪಡೆದ ದಾಖಲೆಗಳ ಆಧಾರದ ಮೇಲೆ ಮಂಡ್ಯ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು ಇವೆ ಎಂಬುದನ್ನು ಗುರ್ತಿಸಲಾಗಿದೆ. ಆ ಕೆರೆಗಳನ್ನು ಈ ಕೆಳಕಂಡಂತೆ ನೋಡಬಹುದು.

ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟ ಸಣ್ಣ ನೀರಾವರಿ ಕೆರೆಗಳು ಮಂಡ್ಯತಾಲ್ಲೂಕು[39]

ಕ್ರ.ಸಂ	ಗ್ರಾಮದ ಹೆಸರು	ಕೆರೆಯ ಹೆಸರು	ಕೆರೆಯ ಅಂಗಳ (ಹೆಕ್ಟೇರ್‌ಗಳಲ್ಲಿ)	ಕೆರೆಯ ಅಚ್ಚುಕಟ್ಟು (ಹೆಕ್ಟೇರ್‌ಗಳಲ್ಲಿ)	ನೀರಿನ ಪ್ರಮಾಣ ಟಿ.ಎಂ.ಸಿ
1	ಕಂಬದಹಳ್ಳಿ	ಹೊಸಕೆರೆ	2.10	14.65	1.96
2.	ಮಾಚಗೌಡನಹಳ್ಳಿ	ಲಾಳನಕೆರೆ	1.38	14.65	2.234
3	ಮಾದೇಗೌಡನಕೊಪ್ಪಲು	ಹೊಸಕೆರೆ	0.72	22.33	2.75
4	ನೊದೆಕೊಪ್ಪಲು	ಹೊಸಕೆರೆ	2.10	15.47	2.429
5	ತುಂಬಕೆರೆ	ಹೊಸಕೆರೆ	0.85	8.00	1.030
	ಒಟ್ಟು		6.69	75.20	10.673

ಮಂಡ್ಯ ತಾಲ್ಲೂಕಿನ 5 ಸಣ್ಣ ನೀರಾವರಿ ಕೆರೆಗಳು ಇವೆ. ಅವುಗಳು 75.20 ಹೆಕ್ಟೇರ್ ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುತ್ತಾ ಬಂದಿದೆ. ಇವುಗಳ ನಿರ್ವಹಣೆ ಜಿಲ್ಲಾ ಪಂಚಾಯಿತಿಗೆ ಸೇರಿದ್ದು. ಆದರಿಂದ ಬರುವ ಆದಾಯ ಜಿಲ್ಲಾ ಪಂಚಾಯಿತಿ ಸೇರುತ್ತದೆ. ಈ ಕೆರೆಗಳ ನೀರು ಕೇವಲ ಕೃಷಿಗೆ ಮಾತ್ರವಲ್ಲದೆ ಇತ್ತೀಚೆಗೆ ಮೀನುಗಾರಿಕೆ ಇಲಾಖೆ ಕೆರೆಗಳಲ್ಲಿ ಮೀನು ಸಾಕಾಣಿಕೆ ಮಾಡಲು ಖಾಸಗಿಯವರಿಗೆ ಅನುಮತಿ ನೀಡಿ ಮೀನಿನ ಉತ್ಪದನೆಯ ಕೆರೆಗಳಲ್ಲಿ ನಡೆಯುತ್ತಿದೆ. ಈ ಕೆರೆಗೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಕಾಮಗಾರಿಗಳ ಕೆಲಸ ಅವಿಭಾಗಕ್ಕೆ ಸೇರಿದೆ ಎಂದು ಹೇಳಬಹುದು. ಅಷ್ಟು ಕೆರೆಯ ನೀರಿನ ಸಾಮಾರ್ಥ್ಯ 10.673 ಟಿ.ಎಂ.ಸಿ ಆಗಿದೆ. ಈ ಕೆರೆಗಳ ನೀರಿನ ಮೂಲ ವಿ.ಸಿ. ನಾಲೆಯ ಮೂಲಕ ಮತ್ತು ಮಳೆ ನೀರಿನಿಂದ ಈ ಕೆರೆಗಳನ್ನು ತುಂಬಿಸಲಾಗಿದೆ.

ಹಾಗೆಯೇ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಸೇರಿದ ಕೆರೆಗಳು ಸೇರಿವೆ. ಅಂತಹ ಕೆರೆಗಳ ವಿವರಗಳನ್ನು ಅನುಬಂಧದಲ್ಲಿ ಹಾಕಲಾಗಿದೆ. ಈ ಕೆರೆಗಳಿಗೆ ಕಾವೇರಿ ನೀರು, ಉಪನದಿ ಶಿಂಪಾ ಲೋಕಪಾವನಿ ನದಿಗಳು ಈ ಕೆರೆಗಳ ನೀರಿನ ಮೂಲವಾಗಿದೆ. ಈ ವ್ಯಾಪ್ತಿಗೆ ಒಳಪಡುವ ಅಂದರೆ ಈ ತಾಲ್ಲೂಕಿಗೆ ಒಳಪಡುವ ಕೆರೆಗಳ ಸಂಖ್ಯೆ 95 ಕೆರೆಗಳು ಇವೆ.[40] ಈ ಕೆರೆಗಳಲ್ಲಿ 37 ಕೆರೆಗಳಿಗೆ ಅಂದರೆ ದುದ್ದ ಹೋಬಳಿ ಕೆರೆಗಳಿಗೆ ಹೇಮಾವತಿ ಎಡದಂತೆ ನಾಲೆ ಸಂಖ್ಯೆ 35 ರಮೂಲಕ ಕೆರೆಗಳಿಗೆ ನೀರಿನ್ನು ತುಂಬಿಸಲಾಗುವುದು. ಉಳಿದ 58 ಕೆರೆಗಳಿಗೆ ಕಾವೇರಿ ನೀರನ್ನು ಅಂದರೆ ವಿ.ಸಿ. ನಾಲೆಯ ಮೂಲಕ ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ.ಒಟ್ಟಾರೆ ಈ ತಾಲ್ಲೂಕಿನಲ್ಲಿ ಕೆರೆಗಳ ಒಟ್ಟು ಅಚ್ಚುಕಟ್ಟು ಪ್ರದೇಶವೆಂದರೆ 5079.40 ಹೆಕ್ಟರ್ ಪ್ರದೇಶ.[41] ಮಂಡ್ಯ ತಾಲ್ಲೂಕಿನಲ್ಲಿ ನೀರಾವರಿಗೆ ಕೆರೆಗಳ ಮೂಲಕ ಅಳವಡಿಸಿದೆ. ಈ ಕೆರೆಗಳಿಗೆ ನೀರನ್ನು ತುಂಬಿಸಿ ನಿರಂತರ ನೀರಾವರಿಗೆ ವ್ಯವಸ್ಥೆ ಮಾಡಲಾಗಿದೆ. ಸಾಮಾನ್ಯವಾಗಿ ಕೆರೆಗಳು ಶ್ರೇಣಿಕೃತ ವ್ಯವಸ್ಥೆಯನ್ನು ಹೊಂದಿದೆ ಎನ್ನಬಹುದು. ನೀರು ಒಂದು ಕೆರೆಯನ್ನು ತುಂಬಿ ಕೋಡಿಯ ಮೂಲಕ ಇನ್ನೊಂದು ಕೆರೆಯನ್ನು ತುಂಬುತ್ತವೆ. ಅದೇ ಮಾದರಿಯಲ್ಲಿ ತಾಲ್ಲೂಕಿನ ಕೆರೆಗಳು ಇವೆ ಎನ್ನಬಹುದು ಒಟ್ಟಾರ ಕೆರೆಗಳ ಮೂಲಕ ತಾಲ್ಲೂಕಿನ ಜಮೀನನ್ನು ನೀರಾವರಿಗೆ ಒಳಪಡಿಸಿ ಕೃಷಿಗೆ ಆದ್ಯತೆ ನೀಡಲಾಗಿದೆ. ಅಲ್ಲದೆ ಈ ಕೆರೆಗಳ ದುರಸ್ತಿ ಉಸ್ತುವಾರಿ ಕಾವೇರಿ ನೀರಾವರಿಗೆ ನಿಗಮದ ವ್ಯಾಪ್ತಿಗೆ ಒಳಪಟ್ಟಿದೆ. ಕಾಲಕಾಲಕ್ಕೆ ಕೆರೆಗಳ ದುರಸ್ಥಿಯನ್ನು ಮಾಡಿಸಿ ಅವು ರೈತರಿಗೆ ಇತರೆ ವರ್ಗಕ್ಕೆ ನಿರಂತರ ವೇತನ ಒದಗಿಸುವ ಉದ್ದೇಶವನ್ನು

ಈ ನಿಗಮ ಹೊಂದಿದೆ. ನೀರಿನ ಆಧಾರದ ಮೇಲೆ (ಕೆರೆಯಲ್ಲಿ ಇರುವ) ಬೆಳೆಯನ್ನು ಬೆಳೆಯಲಾಗುತ್ತದೆ. ಈ ಕೆರೆಗಳಿಂದ ಬರಿ ಕೃಷಿ ಅಲ್ಲದೆ ಮೀನು ಉತ್ಪಾದನೆಯ ಕೆರೆಗಳನ್ನು ಬಳಸಿಕೊಳ್ಳಲಾಗಿದೆ.

ಒಟ್ಟಾರೆ ಮಂಡ್ಯ ತಾಲ್ಲೂಕಿನ ಕೆರೆಗಳು 5079.40 ಹೆಕ್ಟೆರ್ ಭೂಮಿಗೆ ಕೆರೆ ನೀರನ್ನು ಒದಗಿಸುತ್ತದೆ. ಅಲ್ಲದೆ ಮಂಡ್ಯದ ಕೆರೆ ಎಂದು ಹೆಸರಾಗಿದ್ದ ಕೆರೆಯನ್ನು ಮುಚ್ಚಿ ಅದರಲ್ಲಿ ಜನ ವಸತಿಗೆ ಅವಕಾಶ ಕಲ್ಪಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಕೆರೆಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ ಎನ್ನಬಹುದು. ಹಾಗೆ ಆದರೆ ಮುಂದೆ ಕೆರೆಗಳು ಅವನತಿ ಹೊಂದುವ ಸಾಧ್ಯತೆ ಇದೆ. ಜಿಲ್ಲೆಯಲ್ಲಿ ಕಾಲಕಾಲಕ್ಕೆ ಮಳೆಯಾದರೆ ಕೆರೆಗಳಿಂದ ನೀರಾವರಿಗೆ ನಿರಂತರ ನೀರನ್ನು ಒದಗಿಸಲು ಸಾಧ್ಯವಾಗುತ್ತದೆ.

ಹಾಗೆಯೇ ಮಂಡ್ಯದಿಂದ ಬೆಂಗಳೂರು ಕಡೆ ಬರುವ ಭಾಗದಲ್ಲಿ ಮದ್ದೂರು ತಾಲ್ಲೂಕು ಇದೆ. ಹಿಂದೆ ಮದ್ದೂರು ತಾಲ್ಲೂಕು ಆಗಿರಲಿಲ್ಲ. ನಂತರ ಮಂಡ್ಯ ತಾಲ್ಲೂಕಿಗೆ ಸೇರಿದ ಪ್ರದೇಶ ಮತ್ತು ಮಳವಳ್ಳಿ ತಾಲ್ಲೂಕಿಗೆ ಸೇರಿದ ಪ್ರದೇಶಗಳನ್ನು ಸೇರಿಸಿ ಮದ್ದೂರು ತಾಲ್ಲೂಕು ಮಾಡಲಾಯಿತು. ಮದ್ದೂರು ತಾಲ್ಲೂಕಿನಲ್ಲಿ 4 ಹೋಬಳಿಗಳಿದ್ದು, ಇಲ್ಲಿ ಕೆರೆಗಳನ್ನು ನೋಡಬಹುದು. ಜಿಲ್ಲಾ ಪಂಚಾಯತ್ ವಿಭಾಗ ಸೇರಿದ ಕೆರೆಗಳ ಸಂಖ್ಯೆ 28 ಕೆರೆಗಳು[42], ನೀರಿನ ಮೂಲ ಶಿಂಷಾ ನದಿ, ಈ ಕೆರೆಯಿಂದ ನೀರಾವರಿಯಾಗುವ ಪ್ರದೇಶ 610.43 ಹೆಕ್ಟೇರ್ ಪ್ರದೇಶಕ್ಕೆ ಈ ಕೆರೆಗಳು ನೀರನ್ನು ಒದಗಿಸುತ್ತಿದೆ. ಇಷ್ಟು ಮಳೆ ಆಧಾರಿತ ಕೆರೆಗಳು ಆಗಿದೆ. ಈಗಾಗಿ ಈ ಕೆರೆಗಳು 60 ಎಕರೆ ಒಳಗಿನ ಕೆರೆಗಳು ಈ ವ್ಯಾಪ್ತಿಯಲ್ಲಿ ಸೇರಿವೆ. ಅದರ ದುರಸ್ತಿ ನಿರ್ವಹಣೆ ಮುಂತಾದ ಎಲ್ಲಾ ವಿವಿಧ ಕಾಮಗಾರಿಗಳು ಜಿಲ್ಲಾ ಪಂಚಾಯತ್ ಸಣ್ಣ ಕೆರೆಗಳು ನೀರಾವರಿ ಇಂಜನಿಯರ್‌ವ್ಯಾಪ್ತಿಗೆ ಸೇರಿದೆ. ಕೆರೆಗೆ ಸಂಬಂಧಿಸಿರುವ ಅಗತ್ಯ ಕಾರ್ಯಕ್ರಮ ನಿರ್ಮಿಸುವ ಅಧಿಕಾರ ಹೊಂದಿದೆ. ಈ ಕೆರೆಗಳು ಸಹ ಶ್ರೇಣಿಕೃತ ವ್ಯವಸ್ಥೆಯನ್ನು ಹೊಂದಿದೆ. ಅಂದರೆ ಒಂದು ಕೆರೆಯಂದ ತುಂಬಿದ ನೀರು ಮತ್ತೊಂದು ಕೆರೆ ತುಂಬುವ ವ್ಯವಸ್ಥೆ ಹೊಂದಿದೆ.

ಹಾಗೆಯೇ ಕಾವೇರಿ ನೀರಾವರಿ ನಿಗಮದ ಉಪವಿಭಾಗದಲ್ಲಿ ಮದ್ದೂರು ತಾಲ್ಲೂಕು ವ್ಯಾಪ್ತಿಗೆ ಸೇರುವ ಕೆರೆಗಳು ಅಂದರೆ ದೊಡ್ಡ ಕೆರೆ ಗಳ ಸಂಖ್ಯೆ 64 ಕೆರೆಗಳು[43] , ಮದ್ದೂರು ಕೆರೆ ತೈಲೂರು ಕೆರೆ,

ಇನ್ನು ಮುಂತಾದ ಬಹಳ ಹಿಂದಿನಿಂದ ಕಟ್ಟಲಾಗಿರುವ ಕೆರೆಗಳು ಅವುಗಳ ವಿಷಯ ಶಾಸನಗಳಿಂದ ತಿಳಿದು ಬರುತ್ತದೆ. ಮದ್ದೂರು ತಾಲ್ಲೂಕಿನಲ್ಲಿ ಅತಿದೊಡ್ಡ ಕೆರೆ ಎಂದರೆ. ತಾಲ್ಲೂಕಿನ ಸಿ.ಎ.ಕೆರೆ ಹೋಬಳಿಯ ದೊಡ್ಡರಸಿನಕೆರೆ ಹತ್ತಿರ ಇರುವ ಸೂಳೆಕೆರೆ ಅತಿದೊಡ್ಡ ಕೆರೆಯಾಗಿದೆ. ಈ ಕೆರೆಗಳ ನೀರಿನ ಮೂಲ ಕಾವೇರಿ ನೀರು ನಾಲೆಗಳ ಮೂಲಕ ಕೆರೆಗಳನ್ನು ತುಂಬಿಸುವ ಮೂಲಕ ನೀರಾವರಿಗೆ ನೀರನ್ನು ಒದಗಿಸುವ ವ್ಯವಸ್ಥೆ ಮಾಡಲಾಗಿದೆ. ಇಲ್ಲಯೂ ಸಹ ಕೆರೆಗಳು ಕೃಷಿ ಚಟುವಟಕೆಗೆ ಮಾತ್ರವಲ್ಲದೆ ಬಹಳ ಕೆರೆಗಳು ಮೀನುಗಾರಿಕೆಗೂ ಸಹ ಸಹಕಾರಿಯಾಗಿದೆ. ಈ ಕೆರೆಗಳಿಂದ ನೀರಾವರಿಯಾಗುವ ಜಮೀನು 8,848.83 ಹೆಕ್ಟೆರ್ ನೀರಾವರಿ ಒಳಪಟ್ಟಿದೆ. ಇಲ್ಲಿ ಕೆರೆ ನೀರಿನಿಂದ ಭೂಮಿಯನ್ನು ಕೃಷಿಗೆ ಒಳಪಟ್ಟದೆ. ಇಲ್ಲಿಗೆ ಸಂಬಂಧಿಸಿದಂತೆ ದುರಸ್ತಿ ಮತ್ತು ಉಸ್ತುವಾರಿ ಮದ್ದೂರು ವಿಭಾಗದ ಕಾವೇರಿ ನೀರಾವರಿ ನಿಗಮಕ್ಕೆ ಒಳಪಟ್ಟದೆ. ಇದು ಕೆರೆಗಳ ಹೂಳು ತೆಗೆಸುವ ಕಟ್ಟಡ ನಿರ್ಮಾಣ, ನೀರಿನ ಹಂಚಿಕೆ ಇತ್ಯಾದಿಗಳ ಬಗ್ಗೆ ಹೊಣೆಯನ್ನು ಹೊಂದಿದೆ. ಒಟ್ಟಾರೆ ತಾಲ್ಲೂಕಿನಲ್ಲಿ ಕೆರೆ ನೀರಾವರಿ ಹೆಚ್ಚು ಪ್ರದೇಶವನ್ನು ಹೊಂದಿದೆ. ಆದರೆ ಕೆರೆಗಳಲ್ಲಿ ಹೂಳು ತುಂಬಿರುವುದರಿಂದ ನಿರ್ದಿಷ್ಟ ಪ್ರಮಾಣದ ನೀರನ್ನು ಸಂಗ್ರಹಿಸಲು ಸಾಧ್ಯವಿಲ್ಲ.

ಮಂಡ್ಯ ಜಿಲ್ಲೆಯ ಇನ್ನೊಂದು ತಾಲ್ಲೂಕು ಮಳವಳ್ಳಿ ಕಾವೇರಿ ನದಿ ಹರಿದರು ಅರ್ಧಒಣಭೂಮಿಯಾಗಿದೆ. ಉಳಿದ ಅರ್ಧನೀರಾವರಿಗೆ ಒಳಪಟ್ಟ ಪ್ರದೇಶವಾಗಿದೆ. ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣ 80,949 ಹೊಂದಿದೆ. ವಾರ್ಷಿಕ ಮಳೆ ಪ್ರಮಾಣ 204 ಮಿ.ಮೀಟರ್ ಸರಾಸರಿ ದಾಖಲಾತಿಯಾಗಿರುತ್ತದೆ. ಮಳವಳ್ಳಿಯು ಒಟ್ಟು ನಾಲ್ಕು ಹೋಬಳಿಗಳನ್ನು ಒಳಗೊಂಡಿದೆ. ಇಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಕೆರೆಗಳ ಸಂಖ್ಯೆ 18 ಕೆರೆಗಳು ಕಾವೇರಿ ನದಿಯ ಪಾರ್ಶ್ವದಲ್ಲಿದೆ. ಇವುಗಳು ಒಟ್ಟು ನೀರಿನ ಪ್ರದೇಶವೆಂದರೆ 418.46 ಹೆಕ್ಟೆರ್‌ನಲ್ಲಿ " ಈ ಕೆರೆಗಳು ಮಳೆ ಆದಾರಿತ ಕೆರೆಗಳು ಆಗಿವೆ ನೀರನ್ನ ಮಳೆಗಾಲದಲ್ಲಿ ತುಂಬಿಸಲಾಗುತ್ತದೆ. ಈ ನಾಲೆಗಳಿಗೆ ವಿ.ಸಿ. ನಾಲದಿಂದಲೂ ನೀರನ್ನು ತುಂಬಿಸಲಾಗುತ್ತದೆ. ಈ ನಾಲೆಗಳಿಗೆ ವರ್ಷದ ಕೆಲವು ತಿಂಗಳು ಮಾತ್ರ ನೀರನ್ನು ಬಿಡಲಾಗುತ್ತದೆ. ಇಲ್ಲಿಯ ಪ್ರದೇಶ ಜಾಸ್ತಿ ಮಳೆ ಆಧಾರಿತ ಬೆಳೆಗಳನ್ನು ಬೆಳೆಯಲು ಅನುಕೂಲವಾಗಿದೆ. ಈ ಕೆರೆಗಳ ಕೆಳಗಿನ ಭೂಮಿಯನ್ನು ವಾರ್ಷಿಕ ಒಂದು ಬೆಳೆ ಮಾತ್ರ ಬೆಳೆಯಲು ಸಾಧ್ಯವಾಗಿದೆ.

ಹಾಗೆಯೇ ಮಳವಳ್ಳಿ ತಾಲ್ಲೂಕಿನಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಸೇರಿರುವ ಕೆರೆಗಳ ಸಂಖ್ಯೆ 49. ಕೆರೆಗಳಿಗೆ ಕಾವೇರಿ ನೀರನ್ನು ನಾಲೆಗಳ ಮೂಲಕ ತುಂಬಿಸಲಾಗುತ್ತಿದೆ. ಇಲ್ಲಿ ಇರುವ ಕೆರೆಗಳಲ್ಲಿ ಮಾರೆಹಳ್ಳಿ ಕೆರೆ ಮತ್ತು ಮಳವಳ್ಳಿಯ ಕನ್ನಿರಕಟ್ಟೆ ಎಂಬುವುದು ಬಹಳ ಹಿಂದೆಯೆ ಕಟ್ಟಲಾಗಿದೆ. ಆದರೆ ಕುನ್ನಿರಕಟ್ಟೆಯನ್ನು ಮುಚ್ಚಲಾಗಿದೆ. ತಾಲ್ಲೂಕಿನಲ್ಲಿ ಬಹಳ ಹಿಂದೆಯೆ ನಿರ್ಮಿಸಿದ ಹಲವಾರು ಕೆರೆಗಳು ಇನ್ನೂ ಅಸ್ಥಿತ್ವದಲ್ಲಿದೆ 49 ಕೆರೆಗಳಲ್ಲಿ 3 ಕೆರೆಗಳು ನೀರನ್ನು ಗೃಹ ಬಳಕೆಗಾಗಿ ಉಪಯೋಗಿಸಲಾಗಿದೆ. ಇವು ನೀರಾವರಿ ಉದ್ದೇಶಕ್ಕೆ ಬಳಕೆ ಇಲ್ಲವಾಗಿದೆ. ಉಳಿದ ಕೆರೆಗಳು ನೀರಾವರಿ ವ್ಯವಸ್ಥೆ ಕಲ್ಪಿಸಲಾಗಿದೆ. ಅವುಗಳ ನೀರಾವರಿ ಪ್ರದೇಶ 6761.67 ಹೆಕ್ಟೆರ್‌ಪ್ರದೇಶವಾಗಿದೆ.[45] ಒಟ್ಟಾರೆ ಈ ಕೆರೆಗಳ ಮೇಲ್ವಿಚಾರಣೆ ಮತ್ತು ದುರಸ್ತಿ ಕೆಲಸ ಕಾವೇರಿ ನೀರಾವರಿ ನಿಗಮದ ವಿಭಾಗ (ಕಾಗೆಪುರ) ಇದರ ಜವಾಬ್ದಾರಿಯಾಗಿದೆ. ಕೆರೆಗಳ ಎಲ್ಲಾ ಕಾರ್ಯಗಳನ್ನು ನಿಗಮದ ಜವಾಬ್ದಾರಿಯಾಗಿದೆ.

ಈ ಕೆರೆಗಳು ಸಹ ಶ್ರೇಣಿಕೃತ ವ್ಯವಸ್ಥೆಯನ್ನು ಹೊಂದಿವೆ. ಅವುಗಳು ಕೊನೆಗೆ ಶಿಂಷಾನದಿಯನ್ನು ಸೇರಿ ಕೊನೆಗೆ ಕಾವೇರಿ ನದಿಗೆ ಹೋಗುತ್ತದೆ. ಇಲ್ಲಿಯ ಕೆಲವು ಕೆರೆಗಳನ್ನು ಮುಚ್ಚುವ ಬಗ್ಗೆ ಅಸ್ಥಳವನ್ನು ಬೇರೆ ಉಪಯೋಗಕ್ಕೆ ಬಳಸಲು ಸರ್ಕಾರ ಮುಂದಾಗಿದೆ. ಹಲಗೂರು ಕೆರೆಯನ್ನು ಮುಚ್ಚುವ ಪ್ರಸ್ತಾಪ ಸರ್ಕಾರದ ಮುಂದಿದೆ.ಇದರಿಂದ ಅಲ್ಲಿಯ ಭೂಮಿಗಳಿಗೆ ನೀರಾವರಿ ಸೌಲಭ್ಯಗಳಿಂದ ವಂಚಿತವಾಗಬಹುದು. ಕೆರೆಗಳ ಮೂಲಕ ನೀರಾವರಿಗೆ ಆದ್ಯತೆ ನೀಡಲಾಗಿದೆ. ಕೆರೆಗಳಿಗೆ ನೀರು ತುಂಬಿಸುವ ನಾಲೆಗಳು ಮತ್ತು ಕೆರೆಗಳು ಹೂಳು ತುಂಬಿರುವುದರಿಂದ ನಿರ್ಧಿಷ್ಟ ನೀರು ತುಂಬಿಸಲು ಸಾಧ್ಯವಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಒಂದಾಗಿದೆ. ಇದು ಪುರಾತನ ಕಾಲದಿಂದ ಹೆಸರುವಾಸಿಯಾಗಿದೆ. ಈ ತಾಲ್ಲೂಕು 4 ಹೋಬಳಿಗಳನ್ನು ಹೊಂದಿ ನೀರಾವರಿ ಪ್ರದೇಶವನ್ನು ಹೊಂದಿದೆ. ಇಲ್ಲಿಯ ಕೆರೆಗಳ ಮೂಲಕ ನೀರಾವರಿ ಮಾಡಲಾಗಿದೆ. ಆದರೆ ಇಲ್ಲಿಯ ಕೆರೆಗಳ ಪ್ರಮಾಣ ಅತ್ಯಲ್ಪ ಅದನ್ನು ದಾಖಲೆಗಳ ಮೂಲಕ ನೋಡಬಹುದು.ಈ ತಾಲ್ಲೂಕಿನಲ್ಲಿ ಕಾಲುವೆಗಳ ಮೂಲಕ ನೀರಾವರಿ ಪ್ರದೇಶವನ್ನು ಹೆಚ್ಚು ಹೊಂದಿದೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟ ಕೆರೆಗಳ ಸಂಖ್ಯೆ 13. ಈ ಕೆರೆಗಳು ಕೃಷಿಗೆ ಮತ್ತು ಕುಡಿಯಲು ಉಪಯೋಗಿಸಬಹುದಾಗಿದೆ. ಇವುಗಳಿಗೆ ಕಾವೇರಿ ನದಿಯ ನೀರನ್ನು

ತುಂಬಿಸಲಾಗುತ್ತದೆ. ಕಾವೇರಿ ನೀರು ಹೆಚ್ಚು ಹರಿಯುವ ಪ್ರದೇಶವಾಗಿದೆ. ಕೆರೆಗಳಿಂದ ಆಗುವ ಭೂ ಪ್ರದೇಶ 104.80 ಹೆಕ್ಟೆರ್‌ಗಳು ಆಗಿದೆ.ಕೆರೆಗಳ ವಿಸ್ತೀರ್ಣ 37.46 ಹೆಕ್ಟೇರ್‌ಆಗಿದೆ." ಇಲ್ಲಿಯು ಸಹ ನೀರನ್ನು ಕೃಷಿಗೆ ಅಷ್ಟೆ ಅಲ್ಲದೆ ಮೀನುಗಾರಿಕೆ ಮತ್ತು ತೋಟಗಾರಿಕೆ ಬಳಸಲಾಗಿದೆ.

ಹಾಗೆಯೇ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ದೊಡ್ಡಕೆರೆಗಳು ಇದು ಅವು ಕಾವೇರಿ ನೀರಾವರಿ ನಿಗಮಕ್ಕೆ ಒಳಪಟ್ಟವೆ. ಅವುಗಳ ಸಂಖ್ಯೆ 8 ಅರಕೆರೆಯ ಕೆರೆ ಬಹಳ ಹಿಂದೆಯೆ ನಿರ್ಮಿಸಲಾಗಿದೆ. ಇಲ್ಲಿಯ ಕೆರೆಗಳ ಮೂಲಕ ನೀರಾವರಿಗೆ ಬಳಸಲಾಗಿದೆ. ಅಲ್ಲದೇ ಮೀನು ಉತ್ಪಾದನೆಗೆ ಕೆರೆಗಳು ಸಹಕಾರಿಯಾಗಿವೆ. ಕೆರೆಗಳ ಉಸ್ತುವಾರಿ ನಿಗಮಕ್ಕೆ ಒಳಪಟ್ಟದು. ಅದರ ಎಲ್ಲಾ ರೀತಿಯ ಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ನಿಗಮ ಹೊಂದಿದೆ. ಕೃಷಿಗೆ ಅವಶ್ಯಕತೆಗನು ಗುಣವಾಗಿ ನೀರನ್ನು ಒದಗಿಸುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಕಾಲುವೆ ಮೂಲಕ ನೀರಾವರಿ ಬಳಕೆ ಈ ತಾಲ್ಲೂಕಿನಲ್ಲಿ ಜಾಸ್ತಿ ಆದರಿಂದ ಈ ತಾಲ್ಲೂಕಿನಲ್ಲಿ ಕೆರೆಗಳ ಸಂಖ್ಯೆ ಕಡಿಮೆ ಇವೆ ಎನ್ನಬಹುದು. ಇಲ್ಲಿ ಕಾವೇರಿ ನೀರನ್ನು ಉಪಯೋಗಿಸಿಕೊಂಡು ತಾಲ್ಲೂಕಿನ ಪೀಹಳ್ಳಿಯಲ್ಲಿ ವಿದ್ಯುತ್ ಉತ್ಪಾದನೆ ಆದ್ಯತೆ ನೀಡಲಾಗಿದೆ. ಒಟ್ಟಾರೆ ಈ ತಾಲ್ಲೂಕಿನ ಹೆಚ್ಚಿನ ಪ್ರದೇಶ ಕೆರೆಯ ನೀರಾವರಿ ಪದ್ಧತಿಗೆ ಒಳಪಟ್ಟಿಲ್ಲ. ಕೆರೆಯ ಅಂಗಳ 232.00 ಹೆಕ್ಟೇರ್, ಅಚ್ಚುಕಟ್ಟು ಪ್ರದೇಶ 515.87 ಹೆಕ್ಟೇರ್ ಆಗಿದೆ.

ಒಟ್ಟಾರೆಯಾಗಿ ದಾಖಲಾತಿಯಲ್ಲಿ ಅಷ್ಟು ಪ್ರಮಾಣದ ನೀರಾವರಿ ಭೂ ಪ್ರದೇಶ ಹೊಂದಿದೆ. ಕೆರೆಗಳ ಒತ್ತುವರಿಯಾಗಿದೆ. ಅಲ್ಲದೆ ಕೆರೆಗಳಿಗೆ ನೀರು ಹಾಯಿಸುವ ನಾಲೆಗಳು ಹೂಳು ತುಂಬಿಕೊಂಡು ಕೆರೆಯಲ್ಲಿಯು ಹೂಳು ತುಂಬಿಕೊಂಡು ನಿರ್ಧಿಷ್ಟ ಪ್ರಮಾಣದ ನೀರು ಸಂಗ್ರಹಕ್ಕೆ ತೊಂದರೆಯಾಗಿದೆ. ಇದರಿಂದ ನಿರಂತರ ನೀರನ್ನು ಒದಗಿಸಲು ಸಾಧ್ಯವಿಲ್ಲ.

ಮಂಡ್ಯ ಜಿಲ್ಲೆಯ ಮತ್ತೊಂದು ತಾಲ್ಲೂಕು ಪಾಂಡವಪುರ, ಶ್ರೀರಂಗಪಟ್ಟಣ ಮತ್ತು ಕೆ.ಆರ್.ಪೇಟೆ ಪ್ರದೇಶಗಳಿಂದ ಭಾಗಗಳನ್ನು ತೆಗೆದು ಪಾಂಡವಪುರ ತಾಲ್ಲೂಕು ಮಾಡಲಾಯಿತು. ಪಾಂಡವಪುರದಲ್ಲಿ ಪುರಾತನ ಮಾನವನ ನೆಲೆಗಳು ಇರುವುದನ್ನು ನೋಡಬಹುದು. ಪಾಂಡವಪುರ ತಾಲ್ಲೂಕು 3 ಹೋಬಳಿಗಳನ್ನು ಹೊಂದಿದೆ. ಈ ತಾಲ್ಲೂಕಿಗೆ ಕಾವೇರಿ ನೀರು ಸ್ವಲ್ಪ ಭಾಗಕ್ಕೆ ಮತ್ತು ಹೇಮಾವತಿ ನೀರು ಇನ್ನುಳಿದ ಪ್ರದೇಶಕ್ಕೆ ಆಗುತ್ತದೆ. ಆದರೂ ಎಲ್ಲಾ ಕೆರೆಗಳು ಕಾವೇರಿ ನೀರಾವರಿ ನಿಗಮಕ್ಕೆ ಒಳಪಟ್ಟ ಕೆರೆಗಳಾಗಿದೆ. ಆದರೆ ಅವುಗಳ ಜವಾಬ್ದಾರಿ ಮಾತ್ರ ಕಾವೇರಿ ನೀರಾವರಿ ನಿಗಮಕ್ಕೆ

ಸೇರಿದ ಕೆರೆಗಳಷ್ಟೆ. ಇನ್ನುಳಿದ ಹೇಮಾವತಿ ನೀರಿನ ಕೆರೆಗಳು ಹೇಮಾವತಿ ನಿಗಮಕ್ಕೆ ಒಳಪಟ್ಟಿದೆ. ಇಲ್ಲಿಯು ಸಹ ಬಹಳ ಹಿಂದೆಯೆ ಕೆರೆಗಳ ನಿರ್ಮಾಣವಾಗಿರುವುದನ್ನು ನೋಡಬಹುದು. ತಾಲ್ಲೂಕಿನಲ್ಲಿ ಕೆರೆ ತೊಣ್ಣೂರು ಹೆಚ್ಚು ಪ್ರಸಿದ್ಧವಾಗಿದೆ. ಬಹಳ ಹಿಂದೆಯೆ ನಿರ್ಮಿಸಿದ ಕೆರೆಯಾಗಿದೆ. ಹಾಗೆಯೇ ಬುಕ್ಕರಾಯ ಸಮುದ್ರ ಎಂಬ ಹೆಸರಿನ ಹೊಸಕೆರೆಯು ಬಹಳ ಹಿಂದೆಯೇ ನಿರ್ಮಿಸಲಾಗಿದೆ. ಅವುಗಳು ಸಹ ಇಂದಿಗೂ ಅಸ್ತಿತ್ವದಲ್ಲಿದೆ.

.ಮಂಡ್ಯ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟ ಕೆರೆಗಳ ಸಂಖ್ಯೆ 17 ಅವುಗಳ ಪೂರ್ಣ ಜವಾಬ್ದಾರಿ ಜಿಲ್ಲಾ ಪಂಚಾಯತ್‌ಗೆ ಸೇರಿದೆ. ಇಲ್ಲಿಯ ಕೆರೆಗಳನ್ನು ನೀರಾವರಿಗೆ ಬಳಸಲಾಗಿದೆ. (ಕೆರೆಗಳ ವಿಸ್ತೀರ್ಣ) ಕೆರೆಗಳ ನೀರಾವರಿ ಪ್ರದೇಶ 202.10 ಹೆಕ್ಟೆರ್[48] ಪ್ರದೇಶವಾಗಿದೆ. ಇಲ್ಲಿಯ ಮೂರು ಕೆರೆಗಳು ದನಕರುಗಳು ನೀರು ಕುಡಿಯುವ ಕಟ್ಟೆಗಳು ಅವುಗಳೆಂದರೆ ಹೊಸಕೆರೆ, ಅಗ್ಗಜಾರಿಕಟ್ಟೆ, ಗೌರಿಕಟ್ಟೆ, ಇನ್ನುಳಿದ ಕೆರೆಗಳು ಕೃಷಿ ಉದ್ದೇಶಕ್ಕೆ ಬಳಸಲಾಗುತ್ತಿದೆ. ಈ ಕೆರೆಗಳ ನೀರಿನ ಮೂಲ ಹೇಮಾವತಿ ಮತ್ತು ಕಾವೇರಿ ನೀರಿನ ಮೂಲಕ ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತದೆ. ಆದರೂ ಸಹ ಕೆರೆಗಳು ಹೂಳು ತುಂಬಿದ ನಿರ್ದಿಷ್ಟ ಪ್ರಮಾಣದ ನೀರನ್ನು ತುಂಬಲು ಸಾಧ್ಯವಿಲ್ಲ. ಒಟ್ಟಾರೆ ಈ ಕೆರೆಗಳು ಕೃಷಿ ಮತ್ತು ಮೀನುಗಾರಿಕೆ ಸಹಕಾರಿಯಾಗಿವೆ.

ಹಾಗೆಯೇ ದೊಡ್ಡ ಕೆರೆಗಳು ಇದ್ದು, ಅವುಗಳ ಜವಬ್ದಾರಿ ಕಾವೇರಿ ನೀರಾವರಿ ನಿಗಮ ಮತ್ತು ಅದರ ಅಡಿಯಲ್ಲಿ ಹೇಮಾವತಿ ನಿಗಮಕ್ಕೆ ಸೇರಿದೆ. 90 ಕೆರೆಗಳು ಇವೆ. ಈ ಕೆರೆಗಳಿಗೆ ಕಾವೇರಿಯಿಂದ ಕೆಲವು ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ. ಉಳಿದ ಕೆರೆಗಳಿಗೆ ಹೇಮಾವತಿ ಎಡದಂಡೆ ನಾಲೆಯ ನಂ. 6 ವಿಭಾಗದ ಮೂಲಕ ನೀರನ್ನು ಕೆರೆಗಳಿಗೆ ತುಂಬಿಸಲಾಗುತ್ತದೆ. ಅಚ್ಚುಕಟ್ಟು ಪ್ರದೇಶ 2717.69 [49] ಹೆಕ್ಟೆರ್ ಪ್ರದೇಶಕ್ಕೆ ನೀರನ್ನು ಒದಗಿಸಿವೆ. ಕೆರೆಗಳ ಮೂಲಕ ಇಲ್ಲಿ ನೀರಾವರಿ ಪ್ರದೇಶವನ್ನು ಹೊಂದಿದೆ. ಈ ಕೆರೆಗಳು ಕೇವಲ ಕೃಷಿ ಅಷ್ಟೆ ಅಲ್ಲದೇ ತೋಟಗಾರಿಕೆ ಸಹಕಾರಿಯಾಗಿದೆ. ಅಲ್ಲದೇ ಕೆರೆಯಲ್ಲಿ ಮೀನು ಉತ್ಪಾದನೆಯನ್ನು ಮಾಡಲಾಗಿದೆ. ತೊಣ್ಣೂರು ಕೆರೆಯಲ್ಲಿ ಹೆಚ್ಚು ಮೀನು ಉತ್ಪಾದನೆ ನಡೆಯುತ್ತಿದೆ. ಕಾರಣ ಅಲ್ಲಿ ಯಾವುದೇ ಕಾಲದಲ್ಲಿ ನೀರು ಇದ್ದೇ ಇರುತ್ತದೆ. ಈ ಕೆರೆಯನ್ನು ವಿಶೇಷವಾಗಿ ನಿರ್ಮಿಸಲಾಗಿದೆ ಎನ್ನಬಹುದು. ಒಟ್ಟಾರೆ ಈ ತಾಲ್ಲೂಕು ಕೆರೆ ನೀರಾವರಿ. ಪ್ರಮುಖವಾದ ವಿಭಾಗವಾಗಿದೆ. ಆದರೂ ಕೆರೆಗಳು ಹೂಳು ತುಂಬಿ ನೀರನ್ನು ಸಂಗ್ರಹಿಸಲು ಸಾಧ್ಯವಾಗದ ಹಾಗೆ ಹಾಗಿದೆ.

ಮಂಡ್ಯ ಜಿಲ್ಲೆಯ ಬರಗಾಡು ಎಂದೂ ಬಿಂಬಿತವಾದ ತಾಲ್ಲೂಕು ಎಂದರೆ ನಾಗಮಂಗಲ ತಾಲ್ಲೂಕು ಹಿಂದೆ ಇದು ಸಾಕಷ್ಟು ಕೆರೆಗಳನ್ನು ಹೊಂದಿದ್ದರು ಅವು ಮಳೆ ಆಶ್ರಿತ ಕೆರೆಗಳಾಗಿದ್ದವು. ಇಂದಿಗೂ ನೀರಾವರಿಯಲ್ಲಿ ಅತಿ ಕಡಿಮೆ ಪ್ರದೇಶವನ್ನು ಹೊಂದಿರುವ ತಾಲ್ಲೂಕು ಇದಾಗಿದೆ. ಆದರೆ ಹೇಮಾವತಿ ಎಡದಂಡೆ ನಾಲೆಯಿಂದ ಇಲ್ಲಿಯು ಕೆಲವು ಪ್ರದೇಶಗಳಿಗೆ ನೀರನ್ನು ಒದಗಿಸಲಾಗಿದೆ. ಇಲ್ಲಿ ದೊಡ್ಡ ಕೆರೆಗಳು ಮತ್ತು ಸಣ್ಣ ನೀರಾವರಿ ಕೆರೆಗಳು ಇರುವುದನ್ನು ನೋಡಬಹುದು. ನಾಗಮಂಗಲ ತಾಲ್ಲೂಕು 5 ಹೋಬಳಿಗಳನ್ನು ಹೊಂದಿದೆ.

ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ 57 ಕೆರೆಗಳು ಒಳಪಟ್ಟಿದೆ. ಈ ಕೆರೆಗಳ ನೀರಿನ ಮೂಲ ಕಾವೇರಿ ಮತ್ತು ಶಿಂಷಾ ನದಿ ಮತ್ತು ಹೇಮಾವತಿ ನದಿ ನೀರನ್ನು ಕೆರೆಗಳಿಗೆ ಬಳಸಲಾಗಿದೆ. ಇದರ ಮೂಲಕ ನೀರಾವರಿಯನ್ನು ಕೈಗೊಳ್ಳಲಾಗಿದೆ. ಈ ಕೆರೆಗಳಿಗೆ ಮಳೆ ನೀರು ಸಹ ಸಂಗ್ರಹವಾಗುತ್ತದೆ. ಕೆರೆಯ ಒಟ್ಟು ನೀರಾವರಿ ಪ್ರದೇಶ 687.16 ಹೆಕ್ಟೇರ್ ಪ್ರದೇಶವನ್ನು ಮತ್ತು ಕೆರೆಗಳ ವಿಸ್ತೀರ್ಣ 314.18 ಹೆಕ್ಟೇರ್‌ಗಳಾಗಿದೆ.[50] ಆದರೂ ಸಹ ಈ ಭಾಗದ ಕೆರೆಗಳು ಹೆಚ್ಚು ಮಳೆ ಆಶ್ರಿತವಾಗಿದೆ. ಒಟ್ಟಾರೆ ಈ ಭಾಗದ ಕೆರೆಗಳು ನೀರಾವರಿ ಮತ್ತು ತೋಟಗಾರಿಕೆಗೆ ಉಪಯುಕ್ತವಾಗಿದೆ. ಕೆರೆಗಳು ಶ್ರೇಣಿಕೃತ ವ್ಯವಸ್ಥೆಯನ್ನು ಹೊಂದಿದೆ ಎನ್ನಬಹುದು. ಕಾರಣ ಒಂದು ಪ್ರದೇಶದ ಕೆರೆಯಲ್ಲಿ ನೀರು ತುಂಬಿದರೆ ಅದರ ಕೋಡಿಯಿಂದ ಹೊರಬಂದ ನೀರು ಮುಂದಿನ ಊರಿನ ಕೆರೆ ಭರ್ತಿಯಾಗಲು ಸಹಕಾರಿಯಾಗಿದೆ.

ಹಾಗೆಯೇ ನಾಗಮಂಗಲ ತಾಲ್ಲೂಕಿನಲ್ಲಿ ದೊಡ್ಡ ಕೆರೆಗಳು ಇದ್ದು, ಕಾವೇರಿ ನೀರಾವರಿ ನಿಗಮಕ್ಕೆ ಸೇರಿವೆ. ಇವು ನೀರಾವರಿಯ ಉದ್ದೇಶವನ್ನು ಹೊಂದಿದೆ. ಇಲ್ಲಿಯ ಕೆರೆಗಳಿಗೆ ಕಾವೇರಿ ಮತ್ತು ಹೇಮಾವತಿ ನೀರನ್ನು ತುಂಬಿಸಲಾಗುತ್ತಿದೆ. ಕಾವೇರಿ ನೀರು ಮೂರು ಕೆರೆಗಳಿಗೆ ಅಷ್ಟೇ. ಉಳಿದ ಕೆರೆಗಳಿಗೆ ಹೇಮಾವತಿ ಎಡದಂಡೆ ನಾಲಾ ವಿಭಾಗ ನಂ.7 ವ್ಯಾಪ್ತಿಯ ನೀರು ಇವುಗಳಿಗೆ ಆಗುತ್ತದೆ ಬಹಳ ಹಿಂದೆಯೇ ನಿರ್ಮಿಸಿದ ಕೆರೆಗಳು ಇವೆ. ಅತಿ ದೊಡ್ಡ ಕೆರೆಗಳೆಂದರೆ ಸೂಳೆಕೆರೆ, ಪಾಲಕೆರೆ. ಒಟ್ಟು ಕೆರಗಳ ಸಂಖ್ಯೆ 64 ಅದರ ನೀರಾವರಿ ಪ್ರದೇಶ 2279.489 ಹೆಕ್ಟೇರ್ ಪ್ರದೇಶವಾಗಿದೆ.[51] ನಾಗಮಂಗಲ ತಾಲ್ಲೂಕಿನಲ್ಲಿ ಕೃಷಿ ಚಟುವಟಿಕೆಯನ್ನು ಈ ನೀರಿನ ಮೂಲಕ ಮಾಡಲಾಗುತ್ತಿದೆ. ಆದರೂ ಸಹ ನೀರಾವರಿ ಭೂಮಿ ಕಡಿಮೆ ಎನ್ನಬಹುದು. ಒಟ್ಟಾರೆಯಾಗಿ ಈ ಕೆರೆಗಳ ದುರಸ್ತಿ ನಿರ್ವಹಣೆ ಇತ್ಯಾದಿಗಳ ಬಗ್ಗೆ ಈ ನಿಗಮ ಅಗತ್ಯ ಕ್ರಮ ಕೈಗೊಳ್ಳುತ್ತಿದೆ. ಆದರೂ ಕೆರೆಗಳಲ್ಲಿ ಹೂಳು

ತುಂಬಿ ಅಲ್ಲದೆ ಕೆರೆಗಳ ಒತ್ತುವರಿಯಿಂದ ನಿರ್ಧಿಷ್ಟ ಪ್ರಮಾಣದ ನೀರನ್ನು ಸಂಗ್ರಹಣೆ ಅಸಾಧ್ಯವಾಗಿದೆ. ಇತ್ತೀಚೆಗಂತೂ ಕೆರೆಗಳ ಒತ್ತುವರಿ ಜಾಸ್ತಿಯಾಗಿ ನಿರ್ದಿಷ್ಟ ಪ್ರದೇಶಕ್ಕಿಂತ ಅವು ಚಿಕ್ಕವಾಗುತ್ತಾ ಬಂದಿದೆ. ಆದರೂ ಸಹ ಕೆರೆಗಳಲ್ಲಿ ನೀರನ್ನು ಸಂಗ್ರಹಿಸುವ ಮೂಲಕ ಭೂಮಿಗೆ ಕುಡಿಯಲು ನೀರನ್ನು ಒದಗಿಸುತ್ತಿವೆ.

ಮಂಡ್ಯ ಜಿಲ್ಲೆಯ ಮತ್ತೊಂದು ತಾಲ್ಲೂಕು ಕೆ.ಆರ್.ಪೇಟೆ ಇದು ಜಿಲ್ಲೆಯಲ್ಲಿಯೇ ಅತಿ ಹೆಚ್ಚು ನೀರಾವರಿ ಪ್ರದೇಶವನ್ನು ಹೊಂದಿರುವ ತಾಲ್ಲೂಕು ಆಗಿದೆ. ಈ ತಾಲ್ಲೂಕಿನಲ್ಲಿ ಸಣ್ಣ ಕೆರೆಗಳು ಮತ್ತು ದೊಡ್ಡ ಕೆರೆಗಳನ್ನು ನೋಡಬಹುದು. ಹೇಮಾವತಿ ಎಡದಂಡೆ ನಾಲಾ ವಿಭಾಗ ನಂ. 3 ಕೆ.ಆರ್.ಪೇಟೆ ತಾಲ್ಲೂಕಿಗೆ ಮುಖ್ಯ ನೀರಾಗಿದೆ. ತಾಲ್ಲೂಕುಗಳಲ್ಲಿಯೇ ಅತಿ ಹೆಚ್ಚು ಕೆರೆಗಳನ್ನು ಹೊಂದಿದೆ. ಅದರ ಮೂಲಕ ನೀರಾವರಿಗೆ ಆದ್ಯತೆ ನೀಡಲಾಗಿದೆ. ಕೆ.ಆರ್.ಪೇಟೆ ತಾಲ್ಲೂಕು 6 ಹೋಬಳಿಗಳನ್ನು ಹೊಂದಿದೆ.

ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುವ ಸಣ್ಣ ನೀರಾವರಿ ಕೆರೆಗಳು ಇವೆ. ಅವುಗಳ ಸಂಖ್ಯೆ 65 ಈ ಕೆರೆಗಳ ಮೂಲಕ ನೀರಾವರಿ ವ್ಯವಸ್ತೆ ಮಾಡಲಾಗಿದೆ. ಅದರ ಒಟ್ಟು ಅಚ್ಚುಕಟ್ಟು ಪ್ರದೇಶವೆಂದರೆ 741.47 ಹೆಕ್ಟೆರ್‌ನಷ್ಟು[52] ನೀರಾವರಿ ಭೂಮಿಯಾಗಿದೆ. ಕೆರೆಗಳ ಸಂಪೂರ್ಣ ಜವಾಬ್ದಾರಿ ಜಿಲ್ಲಾ ಪಂಚಾಯತ್ ಇಂಜನಿಯರ್ ವಿಭಾಗಕ್ಕೆ ಸೇರಿದೆ. ಆ ಕೆರೆಗಳ ಆಗಿದ್ದ ಕಾರ್ಯಕೈಗೊಳ್ಳುವ ಜವಾಬ್ದಾರಿ ಅದರದಾಗಿದೆ. ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ಕೆರೆಗಳಿಂದ ಹೆಚ್ಚು ನೀರಾವರಿ ಭೂಮಿ ಇರುವುದನ್ನು ನೋಡಬಹುದು. ಈ ಕೆರೆಗಳ ನೀರಿನ ಮೂಲ ಹೇಮಾವತಿ ನೀರು, ಇದರಿಂದ ಬಂದ ನೀರನ್ನ ಈ ಕೆರೆಗಳಲ್ಲಿ ತುಂಬಿಸಿ ನೀರಾವರಿ ಉದ್ದೇಶಕ್ಕೆ ಬಳಸಲಾಗುತ್ತದೆ. ನೀರಾವರಿ ಕ್ಷೇತ್ರ ಇಲ್ಲಿ ಪ್ರಗತಿ ಹೊಂದಿದೆ ಎನ್ನಬಹುದು.

ಹಾಗೆಯೇ ಕಾವೇರಿ ನೀರಾವರಿ ನಿಗಮಕ್ಕೆ ಸೇರಿರುವ ದೊಡ್ಡ ಕೆರೆಗಳನ್ನು ನೋಡಬಹುದು. ಅವುಗಳ ದುರಸ್ತಿ ನಿರ್ವಹಣೆ ನಿಮುಗಕ್ಕೆ ಸೇರಿದೆ. ನಿಗಮವು ಕೆರೆಗಳ ಸಂರಕ್ಷಣಗೆ ಅಗತ್ಯವಾದ ಕ್ರಮವನ್ನು ಕೈಗೊಳ್ಳುವ ಜವಾಬ್ದಾರಿ ಇದೆ. ದೊಡ್ಡ ದೊಡ್ಡ ಕೆರೆಗಳು ಇದು ಅವುಗಳಲ್ಲಿ ಬೂಕನಕೆರೆ, ದೊಡ್ಡಕೆರೆ, ಹೊಸಹೊಳಲು ದೊಡ್ಡಕೆರೆಗಳು ಇವೆ. ಹಿಂದೆಯೇ ನಿರ್ಮಿಸಿದ ಅನೇಕ ಕೆರೆಗಳು ಇಂದಿಗೂ ಅಸ್ತಿತ್ವದಲ್ಲಿದೆ. ಒಟ್ಟಾರೆ ತಾಲ್ಲೂಕಿನಲ್ಲಿ 102 ಕೆರೆಗಳು ಇದು . ಇದು ನಿಗಮದ ವ್ಯಾಪ್ತಿಗೆ ಒಳಪಟ್ಟದೆ . ಈ ಎಲ್ಲಾ ಕೆರೆಗಳ ನೀರಿನ ಮೂಲ ಹೇಮಾನತಿ ನಂ. 3 ಎಡದಂಡೆ ನಾಲಾ

ವಿಭಾಗದಿಂದ ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತದೆ. ಇದರ ನೀರಾವರಿ ಪ್ರದೇಶ 2210.6 [53] ಹೆಕ್ಟೇರ್ ಪ್ರದೇಶ ನೀರಾವರಿ ಪ್ರದೇಶವಾಗಿದೆ. ಈ ಕೆರೆಗಳಿಂದ ನೀರನ್ನು ಬಳಸಿ ಕೃಷಿ ಚಟುವಟಿಕೆಯನ್ನು ಕೈಗೊಳ್ಳಲಾಗಿದೆ. ಕೇವಲ ಕೆರೆ ನೀರು ನೀರಾವರಿ ಉದ್ದೇಶಕ್ಕೆ ಅಷ್ಟೆ ಅಲ್ಲದೇ ಮೀನು ಉತ್ಪಾದನೆಯು ಕೆರೆಗಳಲ್ಲಿ ಮಾಡಲಾಗಿದೆ. ಹಲವಾರು ದೊಡ್ಡ ಕೆರೆಗಳಲ್ಲಿ ಅಂತಹ ಕೆಲಸವನ್ನು ಕೈಗೊಳ್ಳಲಾಗಿದೆ ಎನ್ನಬಹುದು. ಕೆರೆಗಳು ಹೂಳು ತುಂಬಿದ್ದು, ನಿರ್ಧಿಷ್ಟ ಪ್ರಮಾಣದಲ್ಲಿ ನೀರನ್ನ ತುಂಬಿಸಲು ಸಾಧ್ಯವಿಲ್ಲ. ಕೆರೆಗಳು ಶ್ರೇಣಿಕೃತ ವ್ಯವಸ್ಥೆಯನ್ನು ಹೊಂದಿದೆ. ಅಂದರೆ ಒಂದು ಕೆರೆ ನೀರು ತುಂಬಿದರೆ ಅದರ ಕೋಡಿಯಿಂದ ಬಿದ್ದ ನೀರು ಮುಂದೆ ಇರುವ ಇನ್ನೊಂದು ಕೆರೆಯನ್ನು ತುಂಬುತ್ತದೆ. ಅಲ್ದೆ ಹೀಗೆ ಹೆಚ್ಚುವರಿ ನೀರು ಮುಂದಿನ ಕೆರೆಗಳು ತುಂಬುವ ಹಾಗೆ ಕೆರೆಗಳ ನಿರ್ಮಾಣವಾಗಿದೆ. ಎನ್ನಬಹುದು. ಒಟ್ಟಾರೆ ಕೆರೆಗಳು ತಾಲ್ಲೂಕಿನಲ್ಲಿ ಹೆಚ್ಚು ಕೆರೆಗಳು ಇದ್ದು ನೀರಾವರಿ ಉದ್ದೇಶಕ್ಕೆ ಕೆರೆಯ ನೀರನ್ನು ಬಳಸಿಕೊಂಡು ಬರುತ್ತಿವೆ. ತಾಲ್ಲೂಕಿನ ನೀರಾವರಿ ಮೂಲಗಳಲ್ಲಿ ಕೆರೆ ನೀರಾವರಿಯು ಒಂದಾಗಿದೆ.

ಮಂಡ್ಯ ಜಿಲ್ಲೆಯ ಪ್ರಸ್ತುತ ನೀರಾವರಿ ವ್ಯವಸ್ಥೆಯಲ್ಲಿ ಆಧುನಿಕ ಘಟ್ಟದಲ್ಲಿ ಎಲ್ಲಾ ತಾಲ್ಲೂಕಿನ ಕೆರೆ ನೀರಾವರಿ ಸಾಂದ್ರತೆಯನ್ನು ವಿವರಿಸಲಾಗಿದೆ. ಅಯಾಯ ತಾಲ್ಲೂಕಿನಲ್ಲಿ ಇರುವ ಸಣ್ಣ ಮತ್ತು ದೊಡ್ಡಕೆರೆಗಳ ಸಂಖ್ಯೆ ಅದರ ಅಚ್ಚುಕಟ್ಟು ಪ್ರದೇಶದ ಬಗ್ಗೆ ಅಲ್ಲದೆ ಅದರ ನೀರಿನ ಮೂಲಗಳ ಬಗ್ಗೆ ಹೇಳಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಅತಿ ಹೆಚ್ಚು ನೀರಾವರಿ ಸೌಲಭ್ಯ ಹೊಂದಿರುವ ತಾಲ್ಲೂಕು ಎಂದರೆ ಕೆ.ಆರ್.ಪೇಟೆ ಅತಿ ಕಡಿಮೆ ನೀರಾವರಿ ಹೊಂದಿರುವ ತಾಲ್ಲೂಕು ಎಂದರೆ ನಾಗಮಂಗಲ. ಆದರೆ ಕೆರೆ ನೀರಾವರಿಯಲ್ಲಿ ಅತಿ ಹೆಚ್ಚು ಪ್ರದೇಶವನ್ನು ಹೊಂದಿರುವ ತಾಲ್ಲೂಕು ಮದ್ದೂರು ಇದು ಸಣ್ಣ ಮತ್ತು ದೊಡ್ಡ ಕೆರೆಗಳ ನೀರಾವರಿ ಅಚ್ಚುಕಟ್ಟು ಪ್ರದೇ ಒಟ್ಟಾರೆ 9459.26 ಹೆಕ್ಟೇರ್‌ಗಳಾಗಿದೆ. ಎರಡನೇ ತಾಲ್ಲೂಕು ಮಳವಳ್ಳಿ ಅದರ ಪ್ರದೇಶ 7180.13 ಹೆಕ್ಟರ್ ಪ್ರದೇಶ ಕೆರೆ ನೀರಾವರಿಗೆ ಒಳಪಟ್ಟಿದೆ. ಮೂರನೇ ಸ್ಥಾನ ಮಂಡ್ಯ ತಾಲ್ಲೂಕು 5154.60 ಹೆಕ್ಟೇರ್ ಪ್ರದೇಶವಾಗಿದೆ. ಆಗಿಯೇ 4ನೇ ಸ್ಥಾನ ಹೊಂದಿರುವ ತಾಲ್ಲೂಕು ಕೆ.ಆರ್.ಪೇಟೆ ಇದು 2952.07 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. 5ನೇ ಸ್ಥನವನ್ನು ಪಾಂಡವಪುರ ತಾಲ್ಲೂಕು ಇದು 2919.79ಹೆಕ್ಟೇರ್ ಭೂಮಿಯನ್ನು ಕೆರೆ ನೀರಾವರಿ ಹೊಂದಿದೆ. ಹಾಗೆಯೇ 6ನೇ ಸ್ಥಾನವನ್ನು ನಾಗಮಂಗಲ ತಾಲ್ಲೂಕು ಅದು 2647.83 ಹೆಕ್ಟೇರ್ ಪ್ರದೇಶ ಕೆರೆ ನೀರಾವರಿಗೆ ಒಳಪಟ್ಟಿದೆ.

ಕೊನೆಯ ಸ್ಥಾನವನ್ನು ಶ್ರೀರಂಗಪಟ್ಟಣ 762.31 ಹೆಕ್ಟೇರ್ ಭೂಮಿ ನೀರಾವರಿಗೆ ಒಳಪಟ್ಟ ಪ್ರದೇಶವಾಗಿದೆ. ಈ ಅಂಕಿ ಅಂಶ ಕೇವಲ ಕೆರೆ ನೀರಾವರಿಯಲ್ಲಿ ಮಾತ್ರ ಆದರೆ ಒಟ್ಟಾರೆ ವಿದದ ನೀರಾವರಿ ಪರಿಗಣಿಸಿದರೆ ಕೆ.ಆರ್.ಪೇಟೆ ಪ್ರಥಮ ನಾಗಮಂಗಲ ಕೊನೆಯ ಸ್ಥಾನದಲ್ಲಿದೆ.

ಕೆರೆಗಳು ಇನ್ನೂ ಹೆಚ್ಚಿನ ನೀರಾವರಿ ಪ್ರದೇಶವನ್ನು ಹೊಂದಲು ಅವಕಾಶವಿದೆ. ಆದರೆ ಕೆಲವು ಕಡೆ ಕಾಲುವೆ ನೀರಾವರಿಯಿಂದ ಕೆರೆ ನೀರಾವರಿ ಕಡಿಮೆಯಾಗಿದೆ ಎಂದು ಹೇಳಬಹುದು. ಕೆರೆ ನೀರಾವರಿಯಲ್ಲಿ ಕೆರೆಗಳ ಅಸ್ಥಿರತೆಯನ್ನು ನೋಡಬಹುದು. ಕಾರಣ ಕೆರೆಗಳಲ್ಲಿ ಮಳೆಗಾಲದಲ್ಲಿ ನೀರಿನ ಸಮೇತ ಕೆರೆಗೆ ಮಣ್ಣು ಬಂದು ಕೆರೆಯು ತನ್ನ ಆಳವನ್ನು ಕಳೆದುಕೊಂಡಿದೆ. ಅಲ್ಲದೆ ಕೆರೆಗಳಲ್ಲಿ ಬೆಳೆಯುವ ಕಸದ ಗಿಡಗಳು ಇನ್ನಿತರೆ ವಿಧದಿಂದ ಹೂಳು ತುಂಬಿಕೊಂಡು ಕೆರೆಯ ನಿರ್ಧಿಷ್ಟ ಪ್ರಮಾಣದ ನೀರನ್ನು ತುಂಬಲು ಅವಕಾಶವಿಲ್ಲ. ಈ ಕಾರಣದಿಂದ ಕೆರೆಯು ತನ್ನ ನೀರಾವರಿ ಪ್ರದೇಶವನ್ನು ಕಳೆದುಕೊಂಡಿದೆ. ಅಲ್ಲದೇ ಕೆರೆಯ ಒತ್ತುವರಿಯಾಗಿದ್ದು, ಕೆರೆಯ ವಿಸ್ತೀರ್ಣತೆಯನ್ನು ಕಳೆದುಕೊಂಡಿದೆ. ಅಲ್ಲದೆ ಕೆರೆಗಳ ಜೀರ್ಣೋದ್ದಾರ ಮತ್ತು ದುರಸ್ತಿ ಇನ್ನು ಸರಿಯಾಗಿ ಆಗಿಲ್ಲದ ಕಾರಣ ಅಗತ್ಯವಾದ ಹಣದ ಅವಶ್ಯಕತೆ ಇಲ್ಲದೆ ಇರುವುದು ಅಲ್ಲದೆ ಕೆರೆಯಲ್ಲಿ ನೀರು ನಿಲ್ಲಿಸಲು ಸಾಧ್ಯವಾವಾಗಿದೆ. ಏಕೆಂದರೆ ಹಿಂದೆ ಇದ್ದ ತೂಬು ಸರಿಯಾಗಿ ಕಾರ್ಯನಿರ್ವಹಿಸದೆ ತುಕ್ಕು ಹಿಡಿದಿರುವುದು ಮತ್ತು ಅದಕ್ಕೆ ಅಂದರೆ ತೂಬಿಗೆ ಗೇಟು ಇಲ್ಲದೆ ಇರುವುದು ನಿರಂತರ ನೀರು ಹೋರಹೋಗುವುದರಿಂದ ನೀರು ಪೋಲಾಗುವ ಸಂದರ್ಭವೇ ಹೆಚ್ಚಾಗಿದೆ. ಅಲ್ಲದೇ ಇತ್ತಿಚಿಗಂತೂ ಊರಿನ ಪಕ್ಕ ಇರುವ ಅಥವಾ ನಗರದ ಪಕ್ಕ ಇರುವ ಕೆರೆಗಳನ್ನು ಮುಚ್ಚಲು ಸರ್ಕಾರ ಮುಂದಾಗಿವೆ. ಇದರಿಂದ ಕೆರೆಗಳು ಸಣ್ಣ ಕೆರೆಯಾಗಿರುವ ಸಾಧ್ಯತೆಯು ಇದೆ. ಮಂಡ್ಯ ಜಿಲ್ಲೆಯಲ್ಲಿ ಮಂಡ್ಯದ ಕೆರೆ ದೊಡ್ಡಕೆರೆಯಾಗಿತ್ತು. ಆದರೆ ಅದನ್ನ ಮುಚ್ಚಿ ಅಲ್ಲಿ ವಸತಿ ಸೌಲಭ್ಯಕ್ಕೆ ಅವಕಾಶ ಮಾಡಲಾಗಿದೆ. ಅಲ್ಲದೆ ಇತ್ತಿಚೆಗೆ ಮಳವಳ್ಳಿ ತಾಲ್ಲೂಕು ಹಲಗೂರು ಕೆರೆಯನ್ನು ಮುಚ್ಚಬೇಕೆಂದು ಪ್ರಯತ್ನ ಮಾಡಲಾಗಿದೆ. ಇದರಿಂದ ಕೆರೆಗಳು ಕಡಿಮೆಯಾಗಿ ಮುಂದೊಂದು ದಿನ ಜನರು ನೀರಿನ ಸಂಗ್ರಹ ಮಾಡಲು ಪರದಾಡಬೇಕಾಗಿದೆ.

ಕೆರೆಗಳು ಜಿಲ್ಲೆಯ ಸಂಪತ್ತು ಎನ್ನಬಹುದು. ಕೆರೆಗಳಲ್ಲಿ ನೀರನ್ನು ಸಂಗ್ರಹಿಸಿ ಅವಶ್ಯಕತೆ ಅನುಗುಣವಾಗಿ ನೀರನ್ನು ಹಾಯಿಸಿಕೊಂಡು ನಿರಂತರ ಕೃಷಿ ಚಟುವಟಿಕೆಗೆ ಕೈಗೊಳ್ಳಲು ಸಹಕಾರಿಯಾಗಿದೆ. ಅಲ್ಲದೆ ಕೆರೆಗಳಲ್ಲಿ ನೀರಿನ ಸಂಗ್ರಹ ಇದ್ದರೆ ಮೀನು ಉತ್ಪಾದನೆಯನ್ನು

ಮಾಡಬಹುದು. ಇದರಿಂದ ಸರ್ಕಾರಕ್ಕೆ ಆದ್ದರಿಂದ ಬರುತ್ತದೆ. ಕೆರೆಗಳ ಸಂರಕ್ಷಣೆ ಮಾಡಿದರೆ ಮುಂದಿನ ಜನಾಂಗಕ್ಕೆ ಅದು ಅನುಕೂಲನ್ನು ಮಾಡಿಕೊಡುತ್ತದೆ ಎನ್ನಬಹುದು.

ಮಂಡ್ಯ ಕೆರೆಯನ್ನು ಮುಚ್ಚಿದ್ದರಿಂದ ಸೂಳೆಕೆರೆಗೆ ಬರುತ್ತಿದ್ದ ನೀರಿನ ಪ್ರಮಾಣ ಕಡಿಮೆಯಾಗಿದೆ ಎಂದು ಹೇಳಬಹುದು. ಮೇಲಿನ ಕೆರೆಗಳನ್ನು ಮುಚ್ಚಿದರೆ ಕೆಳಗಿನ ಕೆರೆಗಳಿಗೆ ಹಾನಿಯಾಗುತ್ತದೆ ಎನ್ನಬಹುದು. ಶ್ರೇಣಿಕೃತ ಕೆರೆ ವ್ಯವಸ್ಥೆ ಎಂದರೆ.

ಮಂಡ್ಯ ಕೆರೆ ನೀರಿನ ಮೂಲ, ಹೊಳಲನ ಕೆರೆ , ಕೋಣನಹಳ್ಳಿ ಅಲ್ಲಿಂದ ಅದು ಮುಂದೆ ಹೆಬ್ಬಾಳವನ್ನು ಸೇರಿ ಅಲ್ಲಿಂದ ಸೂಳೆಕೆರೆ ನೀರುವ ಬರುತ್ತಿತ್ತು. ಹೀಗೆ ಅದರ ಪ್ರಮಾಣ ಕಡಿಮೆಯಾಗಿದೆ ಎನ್ನಬಹುದು ಒಂದು ಹಳ್ಳಿಯಲ್ಲಿ ಕೆರೆ ಇದೆ ಎಂದರೆ ಆ ಕೆರೆಯ ನೀರು ತನ್ನ ಸುತ್ತಮುತ್ತಲ ಗ್ರಾಮಗಳಿಗೆ ನೀರಿನ ಸೌಲಭ್ಯ ಒದಗಿಸಿ ನೀರಾವರಿ ವ್ಯವಸ್ಥೆ ಮುಂದುವರಿಯಲು ಸಾಧ್ಯವಾಗುತ್ತದೆ. ಮಂಡ್ಯ ತಾಲ್ಲೂಕಿನ ಹೊಸಬೂದನೂರು ಕಡೆಗೆ ನೀರು ತುಂಬಿದೆ ಬೇಲೂರು ಕೆರೆಗೆ ನೀರು ಬರುವುದಿಲ್ಲ. ಬೇಲೂರು ಕೆರೆ ನೀರು ತುಂಬದೆ ಸೂಳೆಕೆರೆಗೆ ನೀರು ಬರುವುದಿಲ್ಲ . ಸೂಳೆಕೆರೆಗೆ ನೀರು ಬರದಿದರೆ ದೊಡ್ಡರಸಿನಕೆರೆ ಕೆರೆಗಳಿಗೆ ನೀರು ಬರುವುದಿಲ್ಲ ಹೀಗೆ ಮೇಲೆ ಹೇಳಿದಂತೆ ಶ್ರೇಣಿಕೃತ ಕೆರೆ ನೀರಾವರಿ ಪದ್ಧತಿಯನ್ನು ಇಂದಿಗೂ ನೋಡಬಹುದು.

ಒಟ್ಟಾರೆಯಾಗಿ ಆಧುನಿಕ ಘಟ್ಟದಲ್ಲೂ ಕೆರೆ ನೀರಾವರಿ ಜಿಲ್ಲೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಕೆರೆಗಳು ಇರುವುದರಿಂದ ನಿರಂತರ ನೀರಾವರಿ ವ್ಯವಸ್ಥೆ ಆಗುತ್ತಿರುವುದನ್ನು ನೋಡಬಹುದು ಮಳೆ ಕೈಕೊಡದೆ ಸರಿಯಾದ ಸಮಯಕ್ಕೆ ಮಳೆಯಾದರೆ ಕೆರೆ ನೀರಾವರಿ ಪ್ರಾಮುಖ್ಯತೆ ಪಡೆಯುತ್ತದೆ.

ಇಂದೂ ಸಹ ಮಳವಳ್ಳಿ ತಾಲ್ಲೂಕಿನ ಮಾರೆಹಳ್ಳಿ ಕೆರೆಯಿಂದ ಮಳವಳ್ಳಿ ಪಟ್ಟಣಕ್ಕೆ ಕುಡಿಯಲು ನೀರನ್ನು ಒದಗಿಸುತ್ತಿದೆ. ಜಿಲ್ಲೆಯ ಹಲವಾರು ಕೆರೆಗಳ ಕೃಷಿಗೆ ನೀರನ್ನು ಒದಗಿಸುವ ಮೂಲಕ ಗೃಹ ಬಳಕೆಗೂ ಸಹ ನೀರನ್ನು ಒದಗಿಸುತ್ತಾ ಬಂದಿವೆ. ಅದು ಸಹ ಸಂಬಂಧಪಟ್ಟ ನೀರಾವರಿ ಇಲಾಖೆಗಳ ಕೆರೆಗಳ ಹೂಳನ್ನು ತೆಗೆಸಲು ಅಲ್ಲದೆ ಹಾಳಾಗಿರುವ ತೂಬುಗಳನ್ನು ದುರಸ್ತಿ ಮಾಡಿ ಸರಿಯಾದ ನೀರಿನ ಸಂಗ್ರಹಕ್ಕೆ ಸ್ಥಳೀಯ ಆಡಳಿತ ಮುಂದಾಗಬೇಕಿದೆ. ಹಿಂದೆ ಕೆರೆಗಳನ್ನು ಧಾರ್ಮಿಕ ನಂಬಿಕೆ, ಸಾಮಾಜಿಕ ಕಂದಾಯಕ್ಕೆ ಕೆರೆಗಳನ್ನು ಕಟ್ಟಲಾಗಿತ್ತು.

ಜಿಲ್ಲೆಯ ಕೆರೆಗಳು ಹೆಸರುಗಳು ಆಯಾಯ ಸ್ಥಳದ ಹೆಸರಿನಿಂದಲೇ ಕರೆಯಲಾಗುತ್ತದೆ. ಅಲ್ಲದೆ ದೇವರ ಹೆಸರಿನಿಂದಲೂ ಕೆರೆಗಳಿಗೆ ಹೆಸರನ್ನು ಇಡಲಾಗಿದೆ.

ಜಿಲ್ಲೆಯ ಕೆರೆಗಳು ಇಂದಿಗೂ ಕೃಷಿ ಚಟುವಟಿಕೆಗೆ ನೀರನ್ನ ನಿರಂತರವಾಗಿ ಒದಗಿಸುತ್ತಾ ಬರುತ್ತಿವೆ. ಕೆರೆಗಳ ಸಂರಕ್ಷಣೆ ಜಿಲ್ಲೆಯ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದು ಹೇಳಬಹುದು.

ಎಲ್ಲಾ ತಾಲ್ಲೂಕಿನ ಕೆರೆಗಳ ಹೆಸರು ಊರು, ಕೆರೆಯ ವಿಸ್ತೀರ್ಣ ಅದರ ಅಚ್ಚುಕಟ್ಟು ಪ್ರದೇಶವನ್ನು ಅನುಬಂಧದಲ್ಲಿ ಪಟ್ಟಿ ನೀಡಲಾಗಿದೆ.

ಅಡಿ ಟಿಪ್ಪಣಿಗಳು

1.	ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ	ಪುಟ 103
2.	ಕರ್ನಾಟಕದಲ್ಲಿ ಕೆರೆ ನೀರಾವರಿ	ಪುಟ 12
3	ಕೆರೆ ನೀರಾವರಿ ಚಾರಿತ್ರಿಕ ಅಧ್ಯಯನ	ಪುಟ 102
4.	ಕರ್ನಾಟಕದಲ್ಲಿ ಕೆರೆ ನೀರಾವರಿ	ಪುಟ 123-124
5.	ಅದೇ	ಪುಟ 145
6	ಅದೇ	ಪುಟ 146
7.	ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ	ಪುಟ 91
8.	ಅದೇ	ಪುಟ 101
9.	ಕರ್ನಾಟಕದಲ್ಲಿ ಕೆರೆ ನೀರಾವರಿ	ಪುಟ 111
10	ಅದೇ	ಪುಟ 68
11	ಅದೇ	ಪುಟ 198-199
12	ಅದೇ	ಪುಟ 204
13	ಅದೇ	ಪುಟ 69
14.	ಅದೇ	ಪುಟ 70
15.	ಅದೇ	ಪುಟ 71
16.	ಅದೇ	ಪುಟ 72
17.	ಅದೇ	ಪುಟ 75
18.	ಅದೇ	ಪುಟ 76
19.	ಅದೇ	ಪುಟ 77
20.	ಅದೇ	ಪುಟ 69
21.	ಅದೇ	ಪುಟ 78
22.	ಅದೇ	ಪುಟ 69
23.	ಸಿ.ಹಯವದನರಾವ್ (ಇ.ಡಿ) ಪೂರ್ವೋಕ್ತ ಸಂಪುಟ-3	ಪುಟ 169
24.	ಅದೇ	ಪುಟ 160

25 ಆರ್.ಎ.ಪಿ.ಡಬ್ಲ್ಯೂ.ಡಿ - 1912 ರಿಂದ 13 ಪುಟ 3

26. ಆರ್.ಎ.ಎಂ. 1915 - 16 ಪುಟ 3

27. ಎಂ. ವಿಶ್ವೇಶ್ವರಯ್ಯ : ಸ್ಪೀಚಸ್ ಪುಟ 4

28. ಅದೇ ಪುಟ 76

29. ಸಿ.ಹಯವದನರಾವ್ (ಇ.ಡಿ) ಪೂರ್ವೋಕ್ತ ಸಂಪುಟ-3 ಪುಟ 168

30. ಎಂ. ವಿಶ್ವೇಶ್ವರಯ್ಯ : ಸ್ಪೀಚಸ್ ಪುಟ 35

31. ಸಿ.ಹಯವದನರಾವ್ (ಇ.ಡಿ) ಪೂರ್ವೋಕ್ತ ಸಂಪುಟ-3 ಪುಟ 161

32. ಸಿ.ಹಯವದನರಾವ್ ಮೈಸೂರು ಗ್ಯಾಸೆಟಿಯರ್ ಸಂಪುಟ -5
ಸರ್ಕಾರಿ ಮುದ್ರಣಾಲಯ, ಬೆಂಗಳೂರು - 1930 ಪುಟ 607

33. ಅದೇ ಪುಟ 608

34. ಅದೇ ಪುಟ 609

35. ಮಂಡ್ಯ ಜಿಲ್ಲೆ ಗ್ಯಾಸೆಟಿಯರ್ ಪುಟ 221

36. ಕರ್ನಾಟಕದಲ್ಲಿ ಕೆರೆ ನೀರಾವರಿ ಪುಟ 95-96

37. ಕಾವೇರಿ ನೀರಾವರಿ ನಿಗಮದ ಕೆರೆಗಳ ನೊಂದಣಿ ದಾಖಲೆ

38. ಜಿಲ್ಲಾ ಪಂಚಾಯಿತಿ ಕೆರೆಗಳ ನೋಂದಣಿ ದಾಖಲೆ

39. ಜಿಲ್ಲಾ ಪಂಚಾಯಿತಿ ಕೆರೆಗಳ ವಿವರ
(ಇಂಜಿನಿಯರ್ ವಿಭಾಗ, ಮಂಡ್ಯ) ಪುಟ 9

40. ಕಾವೇರಿ ನೀರಾವರಿ ನಿಗಮ ಕೆರೆಗಳ ಮಾಹಿತಿ

41 ಅದೇ ದಾಖಲೆಯಲ್ಲಿ

42. ಜಿಲ್ಲಾ ಪಂಚಾಯಿತಿ ಸಣ್ಣ ಕೆರೆಗಳ ಮಾಹಿತಿ ಪುಟ 5-6

43. ಕಾವೇರಿ ನೀರಾವರಿ ನಿಗಮ ಕೆರೆಗಳ ಮಾಹಿತಿ ಪುಟ 3-4

44 ಜಿಲ್ಲಾ ಪಂಚಾಯಿತಿ ಕೆರೆಗಳ ಮಾಹಿತಿ ಪುಟ 7-8

45. ಕಾವೇರಿ ನೀರಾವರಿ ನಿಗಮದ ಕೆರೆಗಳ ಮಾಹಿತಿ ಪುಟ 6-7

46. ಜಿಲ್ಲಾ ಪಂಚಾಯಿತಿ ಸಣ್ಣಕೆರೆಗಳ ಮಾಹಿತಿ ಪುಟ 15

47. ಕಾವೇರಿ ನೀರಾವರಿ ನಿಗಮದ ಮಾಹಿತಿ ಪುಟ 6

48. ಜಿಲ್ಲಾ ಪಂಚಾಯಿತಿಯ ಸಣ್ಣಕೆರೆಗಳ ಮಾಹಿತಿ ಪುಟ 14

49. ಕಾವೇರಿ ನೀರಾವರಿ ನಿಗಮದ ಕೆರೆಗಳ ಮಾಹಿತಿ (ಪಾಂಡವಪುರ ಶಾಖೆ)

50. ಜಿಲ್ಲಾ ಪಂಚಾಯಿತಿ ಸಣ್ಣ ನೀರಾವರಿ ಕೆರೆಗಳ ಮಾಹಿತಿ ಪುಟ 10-15

51. ಕಾವೇರಿ ನೀರಾವರಿ ನಿಗಮ ಕೆರೆಗಳ ಮಾಹಿತಿ(ನಾ.ಮಂ. ಶಾಖೆ)

52. ಜಿಲ್ಲಾ ಪಂಚಾಯಿತಿ ಸಣ್ಣ ನೀರಾವರಿ ಕೆರೆಗಳ ಮಾಹಿತಿ ಪುಟ 2-4

53 ಕಾವೇರಿ ನೀರಾವರಿ ನಿಗಮ ಕೆರೆಗಳ ಮಾಹಿತಿ (ಕೆ.ಆರ್.ಪೇಟೆ ಶಾಖೆ)

ಅಧ್ಯಾಯ –5

ಉಪ ಸಂಹಾರ

ಅಧ್ಯಾಯ - 5

ಉಪ ಸಂಹಾರ

ಮಂಡ್ಯ ಜಿಲ್ಲೆಯ ಕೆರೆ ನೀರಾವರಿಯ ಬಗ್ಗೆ ಅಧ್ಯಯನ ಮಾಡಲಾಗಿದೆ. ನೀರು ವಿಶ್ವದಲ್ಲಿರುವ ಸಕಲ ಜೀವರಾಶಿಗಳಿಗೆ ಆಧಾರವಾಗಿದೆ, ದೈನಂದಿನ ಚಟುವಟಿಕೆಗಳಿಗೆ ಮುಖ್ಯವಾದುದ್ದಾಗಿದೆ. ಮನುಷ್ಯ ಭೂಮಿಯ ಮೇಲೆ ಕಾಣಿಸಿಕೊಂಡಿದ್ದ ದಿನದಿಂದ ಅವನು ನೀರಿನ ಜೊತೆ ನಿಕಟ ಸಂಬಂಧವನ್ನು ಹೊಂದಿದ್ದಾನೆ. ಕೆರೆ, ಕುಂಟೆ, ಬಾವಿ, ಕಟ್ಟೆ ನದಿಗಳು ಮಾನವನ ಅಗತ್ಯಕ್ಕೆ ನೀರನ್ನು ಒದಗಿಸುವ ಪ್ರಾಥಮಿಕ ಮೂಲವಾಗಿದೆ. ಆದರೂ ಭೂಮಿಯಲ್ಲಿ ನೀರು ಶೇ. 1 ಕ್ಕಿಂತ ಕಡಿಮೆಯಷ್ಟು ಪ್ರಮಾಣದ್ದು. ಮಳೆಯ ಅಭಾವದಿಂದ ಈ ಸಮಸ್ಯೆ ಇನ್ನು ಹೆಚುತ್ತದೆ. ಈ ಸಮಸ್ಯೆಯನ್ನು ಹೋಗಲಾಡಿಸಲು ಇರುವ ಮುಖ್ಯ ಸಾಧನ ಎಂದರೆ ಜಲವನ್ನು ಸಂಗ್ರಹಣೆ ಮಾಡುವುದು. ಇದರಿಂದ ಕೆರೆ ನೀರಾವರಿ ಹೆಚ್ಚು ಮಹತ್ವಯುತವಾಗಿದೆ. ಈ ಆಧಾರದ ಮೇಲೆ ಜಿಲ್ಲೆಯ ಪಾರಂಪರಿಕ ಮತ್ತು ನಂತರದ ಕೆರೆ ನೀರಾವರಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ಸ್ವರೂಪದಲ್ಲಿ ಜಿಲ್ಲೆಯ ಕೆರೆ ನೀರಾವರಿ ಚೌಕಟ್ಟು ಯಾವ ವ್ಯವಸ್ಥೆಯನ್ನು ಹೊಂದಿತ್ತು, ಕೆರೆಗಳ ಸ್ವರೂಪಗಳು ಯಾವ ತರಹ ಇದೆ ಎಂಬುದು ಮುಖ್ಯವಾಗಿದೆ. ಹಿಂದೆ ಜಿಲ್ಲೆಯ ಮಳೆಯಾದಾರಿತ ಕೃಷಿ ಪ್ರದೇಶವಾಗಿದ್ದರಿಂದ ಕೆರೆಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಿಕೊಳ್ಳುತ್ತಿದ್ದರು. ಈ ಅಧ್ಯಯನದಿಂದ ಜಿಲ್ಲೆಯಲ್ಲಿ ಕೆರೆಗಳ ಸ್ವರೂಪವನ್ನು ತಳಿಯಬಹುದು. ಮಳೆಯಾದಾರಿತ ಕೆರೆಗಳು ಮತ್ತು ನದಿ ನೀರನ್ನು ಆದರಿಸಿದ ಕೆರೆಗಳನ್ನು ನೋಡಬಹುದು. ಮಳೆ ನೀರನ್ನು ಸಂಗ್ರಹಿಸಿ ಮತ್ತು ನದಿಯ ನೀರನ್ನು ಕೆರೆಗಳಿಗೆ ತುಂಬಿಸಿಕೊಂಡು ಜಿಲ್ಲೆಯಲ್ಲಿ ಕೆರೆ ನೀರಾವರಿಯನ್ನು ಕೈಗೊಳ್ಳಲಾಗಿದೆ.

ಹಾಗೆಯೇ ಇದರ ಮಹತ್ವ ಎಂದರೆ ಜಿಲ್ಲೆಯ ಕೆರೆಗಳ ಅಧ್ಯಯನಕ್ಕೆ ನೆರವಾಗುವುದು ಶಾಸನಗಳು. ಇವುಗಳ ನೆರವಿನಿಂದ ಪಾರಂಪರಿಕ ಕೆರೆ ನೀರಾವರಿಯ ಬಗ್ಗೆ ಪರಿಶೀಲಿಸಲಾಗಿದೆ. ಕೆರೆಗಳು ಅಂತರ್ಜಲ ಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ. ಹಾಗೆಯೇ ಇದರಿಂದ ಬಾವಿಗಳಲ್ಲಿ ಮತ್ತು ಕೊಳವೆ ಬಾವಿಗಳಲ್ಲಿ ನೀರು ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತವೆ. ಕೆರೆಗಳಲ್ಲಿ

ಮೀನಿನ ಉತ್ಪಾದನೆಯನ್ನು ಸಹ ಮಾಡಲಾಗುತ್ತಿದೆ. ಪ್ರಾಚೀನ ಕಾಲದ ಕೆರೆ ನೀರಾವರಿಯ ಬಗ್ಗೆ ಅಲ್ಲದೇ ಪ್ರಸ್ತುತ ಕೆರೆಗಳ ಬಗ್ಗೆ ಪರಮಾರ್ಶಿಸಲಾಗಿದೆ. ಜಿಲ್ಲೆಯಲ್ಲಿ ಪ್ರಾಚೀನ ಕಾಲದ ಕೆರೆಗಳು ಇಂದಿಗೂ ಸಹ ಸುಸ್ಥಿತಿಯಲ್ಲಿದ್ದು, ಅಸ್ಥಿತ್ವವನ್ನು ಉಳಿಸಿಕೊಂಡು ಬಂದಿದೆ.

ಅಧ್ಯಯನದ ಉದ್ದೇಶ ಪ್ರಸ್ತುತ ಅಧ್ಯಯನದಲ್ಲಿ ಜಿಲ್ಲೆಯಲ್ಲಿ ಕೆರೆ ನೀರಾವರಿಯ ಬಗ್ಗೆ ಅದ್ಯಯನಕ್ಕೆ ಒಳಪಡಿಸಲಾಗಿದೆ. ಜಿಲ್ಲೆಯ ಸಣ್ಣ ಮತ್ತು ಮಧ್ಯಮ ಕೆರೆಗಳ ಬಗ್ಗೆ ಪರಾಮರ್ಶಿಸಲಾಗಿದೆ. ಕೆರೆಗಳ ಸಂರಕ್ಷಣೆ ನಮ್ಮ ಮುಂದಿನ ಪೀಳಿಗೆಗೆ ಸಹಕಾರಿಯಾಗಿದೆ. ಹಿಂದೆ ಕೆರೆ ನೀರಿನ ನಿರ್ವಹಣೆ ಹಂಚಿಕೆ ಇತ್ಯಾದಿ ಉದ್ದೇಶಗಳ ಅಧ್ಯಯನದಲ್ಲಿ ಹೇಳಲಾಗಿದೆ. ಅಲ್ಲದೇ ಪ್ರಸ್ತುತ ಕೆರೆ ನೀರಾವರಿ ಪದ್ಧತಿ ಹೇಗೆ ನಿರ್ವಹಿಸುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ. ಹಿಂದೆ ಯಾವ ಉದ್ದೇಶದಿಂದ ಕೆರೆಗಳ ನಿರ್ಮಾಣವಾಗಿತ್ತು ಎಂಬುದನ್ನು ತಿಳಿಸಲಾಗಿದೆ.

